ಸಂಪುಟ: 13 Volume ಸಂಚಿಕೆ: 305 Issue ಪುಟಗಳು 08 Pages ಶುಕ್ರವಾರ 23 ಜನವರಿ 2026 ₹6 PRGINO.120927 (RNINO: KARKAN/2011/48371) BDR/054/2026-2027 www.mallammanudi.in mallammanudi@gmail.com 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ
Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ
ಸಂಪಾದಕರು: ರಮೇಶ ರೆಡ್ಡಿ

**ಬೆಳಗು**
ಪ್ರೀತಿ ಇದ್ದಲ್ಲಿ ನಂಬಿಕೆ ಇರಲೇ ಬೇಕೆಂದಿಲ್ಲ ಆದರೆ ನಂಬಿಕೆ ಇದ್ದಲ್ಲಿ ಪ್ರೀತಿ ಇದ್ದೇ ಇರುವುದು.
–ಸಂತ ಕಬೀರ

ರಸ್ತೆಗಳ ಗುಂಡಿ ಮುಚ್ಚಲು ಆಗ್ರಹಿಸಿ ಪ್ರತಿಭಟನೆ 6
ಕಲ್ಯಾಣ ಕರ್ನಾಟಕ ಬಾಡಿ ಬಿಲ್ಡಿಂಗ್ ಸ್ಪರ್ಧೆ 7
ದೇವಸ್ಥಾನದ ಸರ್ವಾಂಗೀಣ ಪ್ರಗತಿಗೆ ಬದ್ಧ 8

## ರಾಮಚಂದ್ರ ಜಾಗಕ್ಕೆ ಹಿರಿಯ ಅಧಿಕಾರಿ

**ಬೆಂಗಳೂರು:** ಹಿರಿಯ ಐಪಿಎಸ್ ಅಧಿಕಾರಿ ಕೆ. ರಾಮಚಂದ್ರ ರಾವ್ ಅಮಾನತುಗೊಂಡ ನಂತರ ಅವರು ನಿರ್ವಹಿಸುತ್ತಿದ್ದ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ (ಡಿಸಿಆರ್‌ಇ) ಜವಾಬ್ದಾರಿಯನ್ನು ಮತ್ತೊಬ್ಬ ಹಿರಿಯ ಐಪಿಎಸ್ ಅಧಿಕಾರಿಗೆ ನೀಡಿ ಸರ್ಕಾರ ಆದೇಶ ಹೊರಡಿಸಿದೆ. ಹಿರಿಯ ಪೊಲೀಸ್ ಅಧಿಕಾರಿ ನೇಮಕಾತಿ ವಿಭಾದ ಡಿಜಿಪಿ ಉಮೇಶ್ ಕುಮಾರ್ ಅವರಿಗೆ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಹೆಚ್ಚುವರಿ ಜವಾಬ್ದಾರಿಯನ್ನು ನೀಡಿದೆ.

## ಗಣರಾಜ್ಯೋತ್ಸವ: E-Pass ವ್ಯವಸ್ಥೆ




**ಬೆಂಗಳೂರು:** ಬೆಂಗಳೂರು ನಗರದಲ್ಲಿ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಜನವರಿ 26 ರಂದು ನಡೆಯಲಿರುವ ರಾಜ್ಯ ಮಟ್ಟದ 77ನೇ ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮ ವೀಕ್ಷಿಸಿಸಲು ಸಾರ್ವ ಜನಿಕರಿಗೆ E-Pass ವ್ಯವಸ್ಥೆ ಯನ್ನು ಕಲ್ಪಿಸಲಾಗಿದೆ ಎಂದು ಡಿ.ಸಿ ಜಿ. ಜಗದೀಶ ತಿಳಿಸಿದ್ದಾರೆ. ಆಸಕ್ತರು ಸೇವಾ ಸಿಂಧು ವೆಬ್ ಸೈಟ್ (www.sevasindhu.karnataka.gov.in) ನಲ್ಲಿ ಇ–ಪಾಸ್ ಪಡೆಯಬಹುದು.

## ರೈತ ಮಹಿಳೆಯರಿಗೆ ಉಚಿತ ತರಬೇತಿ

**ಬೆಂಗಳೂರು:** ರಾಮಕೃಷ್ಣಪುರ, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಆರ್.ಕೆ.ಶಾಲಾ ವತಿಯಿಂದ ಜನವರಿ 27, 2026 ರಿಂದ ಜನವರಿ 29, 2026 ರವರೆಗೆ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿರುವ ರೈತ/ರೈತ ಮಹಿಳೆಯರಿಗಾಗಿ ಸೂಕ್ಷ್ಮ ನೀರಾವರಿ ಘಟಕಗಳ ಉಪಯೋಗಗಳು ಮತ್ತು ನಿರ್ವಹಣೆ ಕುರಿತು ಮೂರು ದಿನಗಳ ಉಚಿತ ತರಬೇತಿ ಕಾರ್ಯಕ್ರಮ ವನ್ನು ಹಮ್ಮಿಕೊಳ್ಳಲಾಗಿದೆ. ಆಸಕ್ತರು ದೂರವಾಣಿ ಸಂಖ್ಯೆ 6363695621 ಇಲ್ಲಿ ಸಂಪರ್ಕಿದಸಬಹುದು.

## ಇ-ಖಾತಾ ಕಾರ್ಯಕ್ಷಮತೆ




**ಬೆಂಗಳೂರು:** ಬೆಂಗಳೂರು ನಗರದಲ್ಲಿ ಇ–ಖಾತಾ(eKhata) ಅರ್ಜಿಗಳ ವಿಲೇವಾರಿಯಲ್ಲಿ 99.36% ಸಾಧನೆ ಮುಂದುವರೆದಿದೆ. ನಾಗರಿಕರು ಅರ್ಜಿ ಸಲ್ಲಿಸಿದ ನಂತರ 12 ದಿನಗಳೊಳಗೆ ಇ–ಖಾತಾ ಅರ್ಜಿಗಳನ್ನು ವಿಲೇವಾರಿ ಮಾಡಲಾಗುತ್ತಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ವತಿಯಿಂದ ಎಲ್ಲಾ ನಾಗರಿಕರು ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸುವಂತೆ ಮನವಿ ಮಾಡಲಾಗಿದೆ. ಅರ್ಜಿಯನ್ನು ಈ ಕೆಳಗಿನ ಮಾರ್ಗಗಳ ಮೂಲಕ ಸಲ್ಲಿಸಬಹುದು: ವೆಬ್‌ಸೈಟ್: https://bbmpeaasthi.karnataka.gov.in

## ನಿಜ ಶರಣ ಅಂಬಿಗರ ಚೌಡಯ್ಯ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಮಲ್ಲಮ್ಮ ನುಡಿ ವಾರ್ತೆ,ಕುಕನೂರು ಪಟ್ಟಣದ ಹರಿ ಶಂಕರ್ ಬಂಡಿ ರಸ್ತೆಯಲ್ಲಿರುವ ನಿಜಶರಣ ಅಂಬಿಗರ ಚೌಡಯ್ಯನ ವೃತ್ತದಲ್ಲಿ ಸಮಾಜ ಬಾಂಧವರು ಆಯೋಜಿಸಿದ್ದ ವೃತಕ್ಕೆ ಪೂಜೆ ಸಲ್ಲಿಸುವ ಮೂಲಕ ಚೌಡಯ್ಯನ ಜಯಂತಿ ಆಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಮುಖ್ಯ ಅತಿಥಿಯಾಗಿದ್ದ ತಸಿಲ್ದಾರ್ ಮುರುಳಿಧರ್ ರಾವ್ ಕುಲಕರ್ಣಿ ಮಾತನಾಡಿ, ಶರಣರಲ್ಲಿ ಒಬ್ಬರಾದ ನಿಜಶರಣ ಅಂಬಿಗರ ಚೌಡಯ್ಯ ಒಬ್ಬ ಬಂಡಾಯ ಸಾಹಿತಿಯಾಗಿ ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದಲು ಯತ್ನಿದ್ದರು ಎಂದು ತಿಳಿಸಿದ್ದಾರೆ. ಶಿರಸ್ತೆಧಾರಾ ಮೊಹಮ್ಮದ್ ಮುಸ್ತಾಫ್, ಸಮಾಜದ ಅಧ್ಯಕ್ಷ ಬುಡ್ಡಪ್ಪ ಬಾರ್ಕೆರ್ ಮುಖಂಡ



ನಿರುತ್ತಾ ಪಿಎಸ್‌ಐ ಪರಶುರಾಮ್ ದಳವಾಯಿ, ಗುದ್ನೆಪ್ಪ ಈಟಿ, ಭೀಮಪ್ಪ ಬಾರ್ಕೆರ್, ಬಾಳಪ್ಪ ಬಾರ್ಕೆರ್, ಲಿಂಗರಾಜ ಕೊನಾರಿ ಇನ್ನಿತರರು ಭಾಗವಹಿಸಿದ್ದರು.

## ವಿದ್ಯುತ್ ಟವರ್ ಪ್ರಗತಿಗೆ ಜಿಎಫ್‌ಎಲ್ ಆಸಕ್ತಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮರುಬಳಕೆ ಇಂಧನ ವಲಯದಲ್ಲಿ ಹೆಸರು ಮಾಡಿರುವ ಆರ್.ಪಿ–ಸಂಜೀವ್ ಗೊಯೆಂಕಾ ಉದ್ಯಮ ಸಮೂಹವು ವಿಜಯಪುರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮುಂದಿನ ಮೂರು ವರ್ಷಗಳಲ್ಲಿ 10,500 ಕೋಟಿ ರೂ. ಬಂಡವಾಳ ಹೂಡಿಕೆ ಮಾಡಲಿವೆ. ಇದಕ್ಕೆ ಸರಕಾರದ ಕಡೆಯಿಂದ ಬೇಕಾದ ನೆರವನ್ನು ಒದಗಿಸಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಗುರುವಾರ ತಿಳಿಸಿದ್ದಾರೆ.



ದಾವೋಸ್ ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ವೇದಿಕೆಯ ಸಮಾವೇಶದಲ್ಲಿ ಪಾಲ್ಗೊಂಡಿರುವ ಅವರು, ಈ ಮಾಹಿತಿ ನೀಡಿದ್ದಾರೆ. ಕೆಲ ಸಭೆಗಳಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೂ ಭಾಗವಹಿಸಿದ್ದರು. ಇದೇ ರೀತಿಯಲ್ಲಿ ಈಗಾಗಲೇ ಕುಷ್ಟಗಿಯಲ್ಲಿ ಪವನ ವಿದ್ಯುತ್ ಕ್ಷೇತ್ರದಲ್ಲಿ ಅಗತ್ಯವಾಗಿರುವ ಟರ್ಬೈನ್ ಬ್ಲೇಡ್ ಉತ್ಪಾದನೆ ಆರಂಭಿಸಿರುವ ಐನಾಕ್ಸ್ ಜಿಎಫ್‌ಎಲ್ ಕಂಪನಿಯು ಮುಂಬರುವ ದಿನಗಳಲ್ಲಿ ಇದಕ್ಕೆ ಹತ್ತಿರದ ಪ್ರದೇಶದಲ್ಲೇ ಪವನ ವಿದ್ಯುತ್ತಿಗೆ ಬೇಕಾದ ದೈತ್ಯ ಗೋಪುರಗಳ (ಟವರ್) ಅಭಿವೃದ್ಧಿ ಘಟಕವನ್ನೂ ಆರಂಭಿಸಲು ಮುಂದಾಗಿದೆ. ಈ ಕಂಪನಿಯು ರಾಜ್ಯದಲ್ಲಿ ಈಗಾಗಲೇ 10 ಸಾವಿರ ಕೋಟಿ ರೂ. ಹೂಡಿಕೆ ಮಾಡಿದೆ ಎಂದು ಅವರು ಹೇಳಿದ್ದಾರೆ.

# ಸರ್ಕಾರಕ್ಕೆ ಗೌರ್ನರ್ ಸಡ್ಡು

## ರಾಜ್ಯಪಾಲರ ನಡುವಿನ ಸಮರಕ್ಕೆ ವಿಧಾನಸೌಧ ಸಾಕ್ಷಿ | ಸಂವಿಧಾನ ಬಿಕ್ಕಟ್ಟು | ಪರ ವಿರೋಧ ಘೋಷಣೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯ ಸರ್ಕಾರ ಮತ್ತು ರಾಜ್ಯಪಾಲರ ನಡುವಿನ ನೇರ ಸಮರಕ್ಕೆ ವಿಧಾನಸೌಧ ಸಾಕ್ಷಿಯಾಗಿದೆ. ರಾಜ್ಯ ರಾಜಕಾರಣದ ಇತಿಹಾಸದಲ್ಲೇ ಮೊದಲ ಬಾರಿಗೆ ರಾಜ್ಯಪಾಲರು ಸದನದಲ್ಲಿ ಭಾಷಣ ಮಾಡದೇ ಸರ್ಕಾರಕ್ಕೆ ಸಡ್ಡು ಹೊಡೆದಿದ್ದಾರೆ. ಎರಡು ದಿನಗಳಿಂದ ಹೊಗೆಯಾಡುತ್ತಿದ್ದ ನರೇಗಾ ಕಿಚ್ಚು, ಇಂದು ಜಂಟಿ ಅಧಿವೇಶನದಲ್ಲಿ ಸ್ಫೋಟಗೊಂಡಿದೆ.

**ಅಧಿವೇಶನ ಉದ್ದೇಶ..?:** ನರೇಗಾ ಯೋಜನೆಯನ್ನು ಕೇಂದ್ರ ಸರ್ಕಾರ ಬದಲಾಯಿಸಿ ಜಿ ರಾಮ್ ಜಿ ಯೋಜನೆಯನ್ನಾಗಿ ಮರು ರೂಪಸಿದೆ. ಇದು ರಾಜ್ಯ ಸರ್ಕಾರದ ಕೋಪಕ್ಕೆ ಕಾರಣವಾಗಿದೆ. ಇದನ್ನ ವಿರೋಧಿಸಲು ರಾಜ್ಯ ಸರ್ಕಾರ ವಿಶೇಷ ಅಧಿವೇಶನವನ್ನು ಕರೆದಿತ್ತು.

**ನೂಕುನುಗ್ಗಲಿಗೂ ಸಾಕ್ಷಿ:** ರಾಜ್ಯ ವಿಧಾನಮಂಡಲದ ಜಂಟಿ ಅಧಿವೇಶನ ಇಂದು ಕೇವಲ ರಾಜಕೀಯ ಭಾಷಣಗಳಿಗಷ್ಟೇ ಅಲ್ಲ, ದೈಹಿಕ ನೂಕುನುಗ್ಗಲಿಗೂ ಸಾಕ್ಷಿಯಾಗಿದೆ. ಭಾಷಣವನ್ನು ಓದದೆ ಹೊರನಡೆದ ರಾಜ್ಯಪಾಲರನ್ನು ತಡೆಯಲು ಹೋದ ಬಿ.ಕೆ. ಹರಿಪ್ರಸಾದ್ ಹಾಗೂ ಮಾರ್ಷಲ್‌ಗಳ ನಡುವೆ ತೀವ್ರ ಘರ್ಷಣೆ ನಡೆದಿದ್ದು, ಈ ವೇಳೆ ಹರಿಪ್ರಸಾದ್ ಅವರ ಜುಬ್ಬಾ ಹರಿದುಹೋಗಿದೆ.



### ರಾಷ್ಟ್ರಗೀತೆಗೆ ಅಪಮಾನ

ಜಂಟಿ ಅಧಿವೇಶನದಲ್ಲಿ ರಾಷ್ಟ್ರಗೀತೆಗೆ ರಾಜ್ಯಪಾಲರು ಅವಮಾನ ಮಾಡಿದ್ದಾರೆ. ಹಾಗಾಗಿ ನಿರ್ಣಯಕ್ಕೆ ಅವಕಾಶ ಕೊಡಿ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್ ಕೆ ಪಾಟೀಲ್ ಆಗ್ರಹಿಸಿದ್ದಾರೆ. ಆ ಮೂಲಕ ಸದನಕ್ಕೆ ಅಗೌರವ ತೋರಿದ್ದಾರೆ. ಇದಕ್ಕಾಗಿ ಅವರು, ಈ ಸದನಕ್ಕೂ ನಾಡಿನ ಜನತೆಗೂ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದ್ದಾರೆ.

ರಾಜ್ಯಪಾಲರ ವಿರುದ್ಧ ನೀವು ಕನಿಷ್ಠ ಪ್ರಜ್ಞೆಯೂ ಇಲ್ಲದೇ ಗೂಂಡಾಗಿರಿ ಪ್ರದರ್ಶನ ಮಾಡಿರುವುದು ಅಸಾಂವಿಧಾನಿಕ. ರಾಜ್ಯಪಾಲರ ನಡೆ ಒಕ್ಕೂಟ ವ್ಯವಸ್ಥೆಯ ಪರವಾಗಿದೆ. ಅವರ ಉಪಸ್ಥಿತಿ ವೇಳೆ ಗೂಂಡಾಗಿರಿ ಪ್ರದರ್ಶನದ ಹೊಣೆ ಹೊತ್ತು ಸಿಎಂ ಸಿದ್ದರಾಯ್ಯನವರು ತಕ್ಷಣ ರಾಜೀನಾಮೆ ಕೊಡಬೇಕು
–ಛಲವಾದಿ ನಾರಾಯಣಸ್ವಾಮಿ
ವಿಧಾನಪರಿಷತ್ ಪ್ರತಿಪಕ್ಷ ನಾಯಕ

ರಾಜ್ಯಪಾಲರ ವಿರುದ್ಧ ಪ್ರತಿಭಟನೆ ಮಾಡಿದ ಸಂದರ್ಭದಲ್ಲಿ ಹಿಂದಿನಿಂದ ಬಂದು ನನ್ನ ಬಟ್ಟೆ ಹರಿದಿದ್ದಾರೆ ಬಿಜೆಪಿಗರು. ಮುಂದಿನಿಂದ ಬರುವ ಶಕ್ತಿ ಇಲ್ಲ. ರಣಹೇಡಿಗಳು ಹಾಗೂ ಬ್ರಿಟೀಷರ ಬೂಟ್ ನೆಕ್ಕಿದವರು. ಕರ್ನಾಟಕದ ಹೆಸರಿಗೆ ಮಸಿ ಬಳಿಯುವ ಕೆಲಸ ಮಾಡುತ್ತಿದ್ದಾರೆ
–ಬಿ.ಕೆ. ಹರಿಪ್ರಸಾದ್
ಕಾಂಗ್ರೆಸ್ ಹಿರಿಯ ವರಿಷ್ಠರು

### ಶಾಸಕಾಂಗ ಸಭೆ ಕರೆದ ಕಾಂಗ್ರೆಸ್

ಜನವರಿ 28ರ ಸಂಜೆ 6.30 ಗಂಟೆಗೆ ಅರಮನೆ ರಸ್ತೆಯ ಸಿ.ಐ.ಡಿ. ಕಚೇರಿ ಮುಂಭಾಗದಲ್ಲಿರುವ ಹೋಟೆಲ್ ಯಾಡಿಸನ್ ಬ್ಲೂ ನಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಸಭೆಯ ಅಧ್ಯಕ್ಷತೆವಹಿಸಲಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಎನ್.ಎಸ್. ಭೋಸರಾಜು ಪಾಲ್ಗೊಳ್ಳಲಿದ್ದಾರೆ.

### ಗೌರ್ನರ್ ನುಡಿ, ಮುಖ್ಯಮಂತ್ರಿ ಕಿಡಿ

ರಾಜ್ಯಪಾಲರು ತಮ್ಮದೇ ಭಾಷಣದ ಒಂದು ವಾಕ್ಯವನ್ನು ಓದಿದರು. ಇದು ಪ್ರತಿನಿಧಿ ಸಭೆಗೆ ಮಾಡಿದ ಅವಮಾನ ಎಂದು ಸಿಎಂ ಕಿಡಿ ಕಾರಿದ್ದಾರೆ. ಸಚಿವ ಸಂಪುಟ ಸಿದ್ಧಪಡಿಸಿದ ಭಾಷಣವನ್ನು ಮಾತನಾಡುವ ಬದಲು, ಅವರೇ ಸಿದ್ಧಪಡಿಸಿದ ಭಾಷಣ ಓದಿದ್ದಾರೆ. ಇದು ಸಂವಿಧಾನದ 176 ಮತ್ತು 163 ನೇ ವಿಧಿಯ ಉಲ್ಲಂಘನೆ ಎಂದಿದ್ದಾರೆ.

### ಇಂದು ಕರಾಳ ದಿನ

ಕಾಂಗ್ರೆಸ್ ನಾಯಕರಾದ ಬಿ ಕೆ ಹರಿಪ್ರಸಾದ್ ಮತ್ತು ಇತರ ಶಾಸಕರು ಅಡ್ಡಿಗಟ್ಟಿರುವುದನ್ನು ಖಂಡಿಸಿರುವ ವಿಪಕ್ಷ ನಾಯಕ ಆರ್ ಅಶೋಕ್, ಇದೊಂದು ಕರಾಳ ದಿನ ಎಂದು ಕರೆದಿದ್ದಾರೆ. ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಸಂವಿಧಾನ ಪ್ರಕಾರ ರಾಜ್ಯಪಾಲರು ಕರ್ತವ್ಯ ನಿರ್ವಹಿಸಿ ಧನ್ಯವಾದ ಹೇಳಿ ಹೊರಟಿದ್ದಾರೆ. ಇದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದ್ದಾರೆ.

## ಭ್ರಷ್ಟಾಚಾರ ರಹಿತ ಚುನಾವಣೆ ಬೇಕು: ಭೀಮಾಶಂಕರ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಚುನಾವಣೆ ಪ್ರಕ್ರಿಯೆ ಭ್ರಷ್ಟಾಚಾರ ರಹಿತವಾಗಿ ನಡೆಯಲು ಯುವ ಸಮೂಹ ಹೋರಾಡಬೇಕು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪತ್ರಕರ್ತ ಭೀಮಾಶಂಕರ ಫಿರೋಜಾಬಾದ್ ಕರೆ ನೀಡಿದ್ದಾರೆ.

ನಗರದ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿಯ ಜ್ಞಾನ ಸಿಂಚನ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ನನ್ನ ಮತ ಮಾರಾಟಕ್ಕಿಲ್ಲ ? ಮತದಾರ



ಜಾಗೃತಿ ಆಂದೋಲನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ್ದಾರೆ. ಭಾರತೀಯ ಚುನಾವಣಾ ಸುಧಾರಣಾ ಹೋರಾಟ ಸಮಿತಿ ಸಂಸ್ಥಾಪಕ ರಮೇಶ್ ಆರ್. ಧುತ್ತರಗಿ ಪ್ರತಿಕ್ರಿಯಿಸಿ, ಚುನಾವಣೆಗಳಲ್ಲಿ ಹೆಚ್ಚುತ್ತಿರುವ ಹಣಬಲವನ್ನು ನಿಯಂತ್ರಿಸುವ ಅಗತ್ಯವಿದೆ ಎಂದಿದ್ದಾರೆ.

## ಭೀಮಣ್ಣ ಖಂಡ್ರೆ ಅವರಿಗೆ ಶ್ರದ್ಧಾಂಜಲಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮೂಢನಂಬಿಕೆ ಅಸ್ಪೃಶ್ಯತೆ ವಿರುದ್ಧ ತಮ್ಮ ತಂದೆ ಮಾಜಿ ಸಚಿವ ಭೀಮಣ್ಣ ಖಂಡ್ರೆ ಸದಾ ಧ್ವನಿ ಎತ್ತುತ್ತಿದ್ದರು. ಎಲ್ಲರನ್ನೂ ಒಗ್ಗೂಡಿಸಿ, ರಾಷ್ಟ್ರಭಕ್ತಿ, ದೇಶಪ್ರೇಮ ಮೂಡಿಸುವ ಕಾರ್ಯ ಮಾಡುತ್ತಿದ್ದರು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಸ್ಮರಿಸಿದ್ದಾರೆ.

ವಿಧಾನಸಭೆಯಲ್ಲಿಂದು ಸಂತಾಪ ಸೂಚಕ ನಿರ್ಣಯದ ಮೇಲೆ ಮಾತನಾಡಿದ ಅವರು, ಸ್ವಾತಂತ್ರ್ಯ ಯೋಧರಾಗಿ, ಕನ್ನಡದ ಉಳಿವಿಗಾಗಿ, ಏಕೀಕರಣಕ್ಕಾಗಿ ಭೀಮಣ್ಣ ಖಂಡ್ರೆ ಹೋರಾಟ ನಡೆಸಿದ್ದರು ಎಂದಿದ್ದಾರೆ.



ತಾವು ಬಾಲಕರಾಗಿದ್ದಾಗ ಬೆಳಗ್ಗೆ ತಾವು ಏಳುವ ಮೊದಲೇ ಮನೆಯಿಂದ ಹೊರಡುತ್ತಿದ್ದ ತಮ್ಮ ತಂದೆ ತಾವೆಲ್ಲ ಮಲಗಿದ ಬಳಿಕ ಬರುತ್ತಿದ್ದರು. 15 ದಿನಗಳಿಗೊಮ್ಮೆ ಭೇಟಿ ಆಗುತ್ತಿತ್ತು. ಸದಾ ಜನಸೇವೆ ಮಾಡುತ್ತಿದ್ದರು. 1977–78ರಲ್ಲಿ ತಾವು ಪಿಯುಸಿ ಓದುತ್ತಿದ್ದಾಗ, ಶಾಸಕರ ಭವನದ 5ನೇ ಮಹಡಿಗೆ ಮೆಟ್ಟಿಲೇರಿ ಹೋಗುತ್ತಿದ್ದರು ಎಂದು ನುಡಿದಿದ್ದಾರೆ.

## ಸಿಎಂಗೆ ಅಹಿಂದ ಸಭೆ ನಡೆಸುವ ಹಕ್ಕಿಲ್ಲ

• ಮಲ್ಲಮ್ಮ ನುಡಿ ವಾರ್ತೆ ಹಾಸನ

ಹಿಂದುಳಿದ ವರ್ಗಗಳಿಗೆ ಸೇರಿದ 1.64 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ರಾಜ್ಯ ಸರ್ಕಾರ ನಿರಾಕರಿಸಿದ್ದು, ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಹಿಂದ ರ್‍ಯಾಲಿ ನಡೆಸಲು ಯಾವುದೇ ನೈತಿಕ ಹಕ್ಕಿಲ್ಲ ಎಂದು ಕೇಂದ್ರ ಸಚಿವ ಎಚ್ಡಿ ಕುಮಾರಸ್ವಾಮಿ ಕಿಡಿಕಾರಿದ್ದಾರೆ.



ಹಾಸನದಲ್ಲಿ ಜ.24ರಂದು ನಡೆಯಲಿರುವ ಜೆಡಿಎಸ್‌ನ ಜನತಾ ಸಮಾವೇಶದ ಸಿದ್ಧತೆಗಳನ್ನು ಪರಿಶೀಲಿಸಿ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮುಖ್ಯಮಂತ್ರಿ ಕುರ್ಚಿಯನ್ನು ಉಳಿಸಿಕೊಳ್ಳಲು ರಾಜ್ಯದ 5 ಕಡೆ ಅಹಿಂದ ಸಮಾವೇಶವನ್ನು ನಡೆಸಿ ಅಹಿಂದ ಚಾಂಪಿಯನ್ ಆಗಲು ಹೊರಟಿರುವ ಸಿದ್ದರಾಮಯ್ಯ, ಅಹಿಂದ ಸಮುದಾಯದ ಮಕ್ಕಳಿಗೆ ಅನ್ಯಾಯ ಮಾಡಿದ್ದಾರೆಂದು ಆರೋಪಿಸಿದ್ದಾರೆ.

ಹಿಂದುಳಿದ ವರ್ಗ, ಅಲ್ಪಸಂಖ್ಯಾತ ಸಮುದಾಯದ 1.60 ಲಕ್ಷ ವಿದ್ಯಾರ್ಥಿಗಳಿಗೆ ಕಳೆದ ಮಕ್ಕಳಿಗೆ 3 ವರ್ಷಗಳಿಂದ ವಿದ್ಯಾರ್ಥಿ ವೇತನ ನೀಡಿಲ್ಲ. ಕುರ್ಚಿ ಉಳಿಸಿಕೊಳ್ಳಲು ಸಿದ್ದರಾಮಯ್ಯ ನಾನಾ ಕಸರತ್ತುಗಳನ್ನು ನಡೆಸುತ್ತಿದ್ದಾರೆ ಎಂದು ಕಟುವಾಗಿ ಟೀಕಿಸಿದ್ದಾರೆ.

ಇದೇ ವೇಳೆ ದೇವದುರ್ಗ ಜೆಡಿಎಸ್ ಶಾಸಕಿ ಕರೆಮ್ಮ ನಾಯಕ್ ವಿರುದ್ಧ ದಾಖಲಾಗಿರುವ ಪ್ರಕರಣಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಅವರು, ಇದು ಈ ಸರ್ಕಾರದ ಆಡಳಿತ ವೈಖರಿಗೆ ಸಾಕ್ಷಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ಗವಿಮಠಕ್ಕೆ ಬಿ ಸಿ ಪಾಟೀಲ್ ಭೇಟಿ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಮಾಜಿ ಸಚಿವ ಬಿ ಸಿ ಪಾಟೀಲ್ ಕೊಪ್ಪಳ ನಗರದ ಶ್ರೀ ಗವಿಮಠಕ್ಕೆ ಭೇಟಿ ನೀಡಿ ಗವಿಮಠದ ಶ್ರೀಗಳಾದ ಪೂಜ್ಯ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳ ಜೊತೆ ಕೆಲಕಾಲ ಚರ್ಚೆ ನಡೆಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಇತಿಹಾಸದಲ್ಲಿ ಪುಟಗಳಲ್ಲಿ ಕೊಪ್ಪಳ ನಗರದ ಶ್ರೀ ಗವಿಮಠದ ತನ್ನದೇ ಆದ ವಿಶೇಷ ಸ್ಥಾನಮಾನವನ್ನು ಹೊಂದಿದ್ದು ಇಲ್ಲಿನ ಶ್ರೀಗಳ ಕಾರ್ಯವೈಕರಿ ಅತ್ಯಂತ ವಿಶೇಷವಾಗಿದ್ದು ಭಕ್ತರಿಗಾಗಿ 15 ದಿನಗಳ ಕಾಲ ಮಹಾ ದಾಸೋಹವನ್ನು ಸ್ವಲ್ಪ ಲೋಪ ದೋಷಗಳಿಲ್ಲದಂತೆ ಯಾವ ಪದಾರ್ಥವು ಯಾರಿಗೂ ಸಹ ಹೆಚ್ಚು ಕಡಿಮೆ ಆಗದಂತೆ ನಿಗಾ ವಹಿಸಿ ಭಕ್ತರ ಸಂತೃಪ್ತಿಗೊಳಿಸುವಂತಹ ಶ್ರೀಗಳು ಸಿಕ್ಕಿರುವುದು ನಮ್ಮೆಲ್ಲರ ಪುಣ್ಯವಾಗಿದ್ದು ಜೊತೆಗೆ ಕ್ಷೇಮದಲ್ಲಿ ತ್ರಿವಿಧ ದಾಸೋಹ ನಿರಂತರವಾಗಿ ಜರುಗುತ್ತಿರುವುದು ಈ ಕ್ಷೇತ್ರದ ಸ್ಥಳ ಮಹಿಮೆ ಆಗಿದೆ ಎಂದು ತಿಳಿಸಿದರು. ನಮ್ಮ ಕ್ಷೇತ್ರದ ಹಿರೇಕೆರೂರಿನಲ್ಲಿ ಪ್ರವಚನ ನಡೆಸುವುದರ ಕುರಿತು ಗವಿಸಿದ್ದೇಶ್ವರ ಮಹಾ ಸಾಲುಗಳಿಗೆ ಆಹ್ವಾನ ನೀಡಿದ್ದು ಶ್ರೀಗಳು ಸಕಾರಾತ್ಮಕವಾಗಿ ಸ್ಪಂದಿಸಿರುತ್ತಾರೆ. ಜೊತೆಗೆ ಇನ್ನೂ ಹಲವಾರು ವಿಷಯಗಳ ಕುರಿತು ಶ್ರೀಗಳೊಂದಿಗೆ ಚರ್ಚೆ ನಡೆಸಿ ಪುನೀತನಾಗಿದ್ದೇನೆ ಎಂದು ತಿಳಿಸಿದರು.



## ವಿದ್ಯಾರ್ಥಿಗಳ ಪ್ರಗತಿಗೆ ಕ್ರೀಡೆ ಸಹಕಾರಿ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ವಿದ್ಯಾರ್ಥಿಗಳ ಮಾನಸಿಕ ಮತ್ತು ದೈಹಿಕ ಬೆಳವಣಿಗೆಗೆ ಕ್ರೀಡೆಗಳು ಅತ್ಯಂತ ಸಹಕಾರಿಯಾಗಿವೆ ಎಂದು ಜೆಎಂಎಫ್ಸಿ ಸಿವಿಲ್ ನ್ಯಾಯಾಧೀಶ ದೇಶಭೂಷಣ ಕೌಜಲಗಿ ಹೇಳಿದ್ದಾರೆ.

ಚನ್ನಬಸವಾಶ್ರಮ ಪರಿಸರದಲ್ಲಿ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ನಿಮಿತ್ತ ಆಯೋಜಿಸಿದ್ದ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟಸ್ಟನ ವಿವಿಧ ಅಂಗಸಂಸ್ಥೆಗಳ ಅಂತರ ಶಾಲಾ–ಕಾಲೇಜು ವಿದ್ಯಾರ್ಥಿಗಳ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿ, ಮಾನಸಿಕ ಮತ್ತು ದೈಹಿಕ ದೃಢತೆ ಎರಡು ಪ್ರಬುದ್ಧತೆ ಸಾಧಿಸಲು ಕ್ರೀಡಾ ಚಟುವಟಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದಿದ್ದಾರೆ. ನೇತೃತ್ವ ವಹಿಸಿದ್ದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಶರೀರ, ಮನಸ್ಸು, ಆರೋಗ್ಯ ಶುದ್ಧವಾಗಿರಿಸಲು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕು ಎಂದು ಸೂಚಿಸಿದ್ದಾರೆ.

**ಕೇಂದ್ರ ಸರಕಾರದ ವಿರುದ್ಧ ದ್ವೇಷ ರಾಜಕಾರಣ ಮಾಡಲು ಸದನವನ್ನು ಬಳಸುತ್ತಿರುವುದು ಖಂಡಿತ ಸರಿಯಲ್ಲ: ಬಿ.ವೈ ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ**

## ಕಮತಾಣಾದಲ್ಲಿ ಕಲಿಕಾ ಹಬ್ಬ ಕಾರ್ಯಕ್ರಮ ಯಶಸ್ವಿ



• **ಮಲ್ಲಮ್ಮ ನುಡಿ ವಾರ್ತೆ,ಬೀದರ್:**

ಜಿಲ್ಲಾ ಪಂಚಾಯತ್ ಬೀದರ್, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಬೀದರ್ ಹಾಗೂ ಕ್ಲಸ್ಟರ್ ಕಮತಾಣಾ ಇವರ ಸಂಯುಕ್ತ ಸಹಯೋಗದಲ್ಲಿ ದಿನಾಂಕ 22–01–2026 ರಂದು ಸರಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಕಮತಾಣಾದಲ್ಲಿ ಕಲಿಕಾ ಹಬ್ಬ ಕಾರ್ಯಕ್ರಮವನ್ನು ಅತ್ಯಂತ ಅರ್ಥಪೂರ್ಣವಾಗಿ ಹಾಗೂ ಸಂಭ್ರಮದಿಂದ ಆಚರಿಸಲಾಯಿತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸರಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಕಮತಾಣಾದ ಎಸ್.ಡಿ.ಎಂ.ಸಿ.ಅಧ್ಯಕ್ಷರಾದ ಮಹ್ಮದ್ ಅಯುಬ ಖಾನ್ ಅವರು ವಹಿಸಿದ್ದರು.ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣದ ಮಹತ್ವದ ಕುರಿತು ಮಾತನಾಡಿದ ಅವರು, ಕಲಿಕಾ ಹಬ್ಬದಂತಹ ಕಾರ್ಯಕ್ರಮಗಳು ಮಕ್ಕಳಲ್ಲಿ ಕಲಿಕೆಯ ಮೇಲಿನ ಆಸಕ್ತಿ ಹೆಚ್ಚಿಸಿ ಸೃಜನಶೀಲತೆ ಹಾಗೂ ಆತ್ಮವಿಶ್ವಾಸವನ್ನು ಬೆಳೆಸುತ್ತವೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಿ.ಆರ್.ಪಿ. ಎಂ.ಡಿ.ಅಬ್ದುಲ ಸಲಾಮ್ (ಅಮಲಾಪುರ) ಹಾಗೂ ಸಿ.ಆರ್.ಪಿ.ಎಂ.ಡಿ. ಅಶ್ರಫ್ ಅಲಿ ಅವರು ಭಾಗವಹಿಸಿ, ಗುಣಮಟ್ಟದ ಶಿಕ್ಷಣ, ಮಕ್ಕಳ ಕಲಿಕಾ ಸಾಮರ್ಥ್ಯ ವೃದ್ಧಿ ಹಾಗೂ ಶಾಲಾ ಹಂತದಲ್ಲೇ ಮೌಲ್ಯಾಧಾರಿತ ಶಿಕ್ಷಣ ನೀಡುವ ಅಗತ್ಯದ ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಇದಲ್ಲದೆ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಸತೀಶ ಎಸ್.ಶಿಕೆನರಪುರೆ, ಉಪಾಧ್ಯಕ್ಷರಾದ ಶಿವಕುಮಾರ ಕೊಳಾರೆ ಹಾಗೂ ಶಾಲೆಯ ಮುಖ್ಯಗುರುಗಳಾದ ಹಣಮಂತರಾವ ಮೈಲಾರೆ ಅವರು ಉಪಸ್ಥಿತರಿದ್ದು, ಶಾಲಾ ಶಿಕ್ಷಣದ ಅಭಿವೃದ್ಧಿಗೆ ಸಮುದಾಯದ ಸಹಕಾರ ಅತ್ಯಗತ್ಯವೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷ ವೀರಶೆಟ್ಟಿ ಭಾಲ್ಕೆ, ಮುಖ್ಯಗುರು ಚಂದ್ರಕಲಾ, ಉರ್ದು ಶಾಲೆಯ ಮುಖ್ಯಗುರು ಅಕ್ಬರ್ ಜಹಾನ್, ಮಿಥುನ ಫುಲೆ (ಉಪಾಧ್ಯಕ್ಷರು), ದಿನಗೂಲಿ ಒಕ್ಕೂಟ ಸಂಘ ಬೀದರ್ ಸೇರಿದಂತೆ ಹಲವಾರು ಶಿಕ್ಷಣ ಪ್ರೇಮಿಗಳು ಹಾಗೂ ಸ್ಥಳೀಯ ಗಣ್ಯರು ಭಾಗವಹಿಸಿದ್ದರು. ಕಲಿಕಾ ಹಬ್ಬದ ಅಂಗವಾಗಿ ವಿದ್ಯಾರ್ಥಿಗಳಿಂದ ವಿವಿಧ ಶೈಕ್ಷಣಿಕ ಚಟುವಟಿಕೆಗಳು, ಪ್ರದರ್ಶನಗಳು ಹಾಗೂ ಕಲಿಕಾ ಮಾದರಿಗಳನ್ನು ಪ್ರದರ್ಶಿಸಲಾಗಿದ್ದು, ಇದರಿಂದ ಮಕ್ಕಳಲ್ಲಿನ ಪ್ರತಿಭೆ ಹೊರಹೊಮ್ಮಲು ವೇದಿಕೆ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತ್ತು.

## ಜ.24, 25, 26 ರಂದು ರಾಜ್ಯ ಮಟ್ಟದ ಪುಸ್ತಕ ಸಂತೆ ಆಯೋಜನೆ ಕಾರ್ಯಕ್ರಮ



• **ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ:**

ಬೀದರ ನಗರದಲ್ಲಿ ನಡೆಯಲಿರುವ ವೀರ ಲೋಕ ಪುಸ್ತಕ ಸಂತೆ ಇದೆ ತಿಂಗಳ ದಿನಾಂಕ 24,25,26 ರಂದು ಕೋಟೆ ನಾಡಿನ ಸಾಯಿ ಸ್ಕೂಲ್ ಆವರಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಭಾಲ್ಕಿ ಹಿರೇಮಠ ಸಂಸ್ಥಾನ ಸಹಯೋಗದಲ್ಲಿ 3 ದಿನಗಳ ಕಾಲ ರಾಜ್ಯ ಮಟ್ಟದ ಪುಸ್ತಕ ಸಂತೆ ಆಯೋಜಿಸಲಾಗಿದೆ ಹುಮನಾಬಾದ ತಾಲ್ಲೂಕಿನ ಸಮಸ್ತ ಶಿಕ್ಷಕರು, ಸಾಹಿತಿಗಳು, ಸಾಹಿತ್ಯ ಆಸಕ್ತರು, ವಿದ್ಯಾರ್ಥಿಗಳು, ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕನ್ನಡ ಪುಸ್ತಕಗಳನ್ನು ಖರೀದಿಸಿ ಅಕ್ಷರ ಸಂಸ್ಕೃತಿ ಬೆಳೆಸುವಂತೆ ಎಲ್ಲಾ ಕನ್ನಡ ಪರ ಮನಸುಗಳಲ್ಲಿ ತಾಲ್ಲೂಕು ಕಸಾಪ ಅಧ್ಯಕ್ಷ ಸಿದ್ಧಲಿಂಗ ವಿ. ನಿರ್ಣಾ ಹುಮನಾಬಾದ ಮನವಿಮಾಡಿಕೊಂಡಿದ್ದಾರೆ.

## ಭಕ್ತಿ ಮಾರ್ಗ ನಮ್ಮನ್ನು ದೇವರ ದರ್ಶನ ಮಾಡಿಸುತ್ತದೆ ಹೋಹಿದಾಸ ಮಹಾರಾಜ



• **ಮಲ್ಲಮ್ಮ ನುಡಿ ವಾರ್ತೆ,ಕಮಲನಗರ:**

ಭಕ್ತಿ ಮಾರ್ಗ ನಮ್ಮನ್ನು ದೇವರ ದರ್ಶನ ಮಾಡಿಸುತ್ತದೆ, ದೇವರ ಕೀರ್ತನೆ ಮಾಡುವುದರಿಂದ ನಮ್ಮ ಮನಸು ಶಾಂತಿ ಮತ್ತು ನೆಮ್ಮದಿಯಿಂದ ಇರುತ್ತದೆ ಎಂದು ಹೋಹಿದಾಸ ಮಹಾರಾಜ ಮರಕೆ ಅವರು ಹೇಳಿದರು.ತಾಲೂಕಿನ ಡೋಣಗಾಂವ (ಎಮ್ ) ವಾಡಿ ಗ್ರಾಮದಲ್ಲಿ ನಡೆಯುತ್ತಿರುವ ಅಖಂಡ ಹರಿನಾಮ ಸಪ್ತಾಹ ಹಾಗೂ ಜ್ಞಾನೇಶ್ವರಿ ಗಾಥಾ ಪಾರಾಯಣ ಕಾರ್ಯಕ್ರಮದಲ್ಲಿ ಕೀರ್ತನೆ ಮೂಲಕ ತಿಳಿಸಿದರು. ದಿನಾಂಕ:19.1.2026 ಸೋಮವಾರದಿಂದ ದಿನಾಂಕ:25.01.2026 ಭಾನುವಾರ ಕಾರ್ಯಕ್ರಮ ಜರುಗಲಿದೆ, ಕೊನೆ ದಿನ ದಿಂಡಿ ಮೆರವಣಿಗೆ ಆಗಿರುತ್ತದೆ ಮತ್ತು ನಂತರ ಕಾಲ ಆಗಿರುತ್ತದೆ. ಪವಿತ್ರ ದಾರದ ಜೊತೆಗೆ ಎಲ್ಲಾ ಒಗ್ಗೂಡಬೇಕು, ಭಕ್ತರು ಕಾರ್ಯಕ್ರಮದ ಲಾಭ ಪಡೆದು ಕೊಳ್ಳುವಂತೆ ಸೂಚಿಸಿದರು.ಈ ಸಂದರ್ಭದಲ್ಲಿ ಪಂಡರಿ ಮಹಾರಾಜ, ರಾಜಕುಮಾರ ಪುಂಡಕ್ಕ–ರೆ, ಚಂದ್ರಕಾಂತ ರೆಡ್ಡಿ, ದತ್ತಾತ್ರೇಯ ರೆಡ್ಡಿ, ಬಾಬಾ ಪಾಟಿಲ, ನಾಮದೇವ ಚಂಬೊಲೆ, ನಾರಾಯಣ ಚಂಬೊಲೆ, ಬಾಲಾಜಿ ಕನಸೆ, ದಯಾನಂದ ರೆಡ್ಡಿ ಸೇರಿದಂತೆ ಡೋಣಗಾಂವ ವಾಡಿ ಗ್ರಾಮದ ಸದ್ದ ಭಕ್ತರು ಇದ್ದರು.

## ಹೆಚ್ಚಿನ ಸಂಖ್ಯೆಯಲ್ಲಿ ಪುಸ್ತಕ ಸಂತೆಗೆ ಬನ್ನಿ: ರೂಪ ಪಾಟೀಲ್

• **ಮಲ್ಲಮ್ಮ ನುಡಿ ವಾರ್ತೆ ಬೀದರ್:**



2025 ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತೆ ಹಾಗೂ ಬೀದರ್ ಕನ್ನಡ ಸಾಹಿತ್ಯ ಪರಿಷತ್ತು ಮಹಿಳಾ ಘಟಕದ ಅಧ್ಯಕ್ಷೆ ರೂಪಾ ಪಾಟೀಲ್ ಅವರು "ಜನವರಿ 24,25,26 "ರಂದು ನಡೆಯಲಿರುವ ಪುಸ್ತಕ ಸಂತೆಗೆ ಜಿಲ್ಲೆಯಾದ್ಯಂತ ಮಹಿಳೆಯರಿಗೆ ಭಾಗವಹಿಸಲು ಕರೆ ನೀಡಿದ್ದಾರೆ. ಹೆಣ್ಣು ಮಕ್ಕಳಲ್ಲಿ ಅಗಾಧವಾದ ತಾಳ್ಮೆ ಇದೆ ಶಕ್ತಿ ಇದೆ ಮುಂದಿನ ಪೀಳಿಗೆಗೆ ಒಂದು ಉತ್ತಮ ಭವಿಷ್ಯ ನೀಡುವಲ್ಲಿ ತಾಯಂದಿರ ಪಾತ್ರ ಬಹಳ ಪ್ರಮುಖವಾದದ್ದು.

ಅಂತಹ ಮಹಿಳೆಯರು ಈ ಪುಸ್ತಕ ಸಂತೆಗೆ ತಮ್ಮ ಮನೆಯವರನ್ನು ನೆಂಟರಿಷ್ಟರನ್ನು ಬಡಾವಣೆಯ ಜನರನ್ನು

ಕರೆತಂದಾಗ ಪುಸ್ತಕಗಳ ಮಹತ್ವದ ಅರಿವು ಹೆಚ್ಚಾಗಿ ಓದುಗರ ಸಂ–ಖ್ಯೆ ಹೆಚ್ಚುತ್ತದೆ ಹಾಗೂ ಪುಸ್ತಕ ಸಂತೆಯ ಮುಖ್ಯ ಉದ್ದೇಶವು ಈಡೇರಿದ ಹಾಗಾಗುತ್ತದೆ ಎಂದು ಹೇಳಿಕೆ ಕೊಟ್ಟಿದ್ದಾರೆ.

ಮೊಬೈಲ್ ಬಿಡಿ ಪುಸ್ತಕ ಹಿಡಿ ಎನ್ನುವ ಘೋಷಣೆಯೊಂದಿಗೆ ಪುಸ್ತಕ ಸಂತೆಯ ಪ್ರಚಾರವನ್ನು ಬೀದರ್ ಜಿಲ್ಲೆಯಾದ್ಯಂತ ಕೈಗೊಂಡಿದ್ದಾರೆ. ಪುಸ್ತಕಗಳು ಜ್ಞಾನದ ನಿಧಿ, ನಮ್ಮ ಅತ್ಯುತ್ತಮ ಮಾರ್ಗದರ್ಶಕಗಳು, ಅವು ಏಕಾಗ್ರತೆ, ಶಬ್ದಕೋಶ ಮತ್ತು ಬರವಣಿಗೆಯ ಕೌಶಲ್ಯಗಳನ್ನು ಸುಧಾರಿಸುತ್ತವೆ, ಕಲ್ಪನಾಶಕ್ತಿಯನ್ನು ಬೆಳೆಸುತ್ತವೆ ಮತ್ತು ಜೀವನದ ವಿವಿಧ ವಿಷಯಗಳ ಬಗ್ಗೆ ತಿಳುವಳಿಕೆ ನೀಡುತ್ತವೆ, ಪುಸ್ತಕಗಳು ವ್ಯಕ್ತಿತ್ವ ವಿಕಸನ ಮತ್ತು ಜ್ಞಾನಭರಿತ ಜೀವನಕ್ಕೆ ಸಹಾಯ ಮಾಡುತ್ತವೆ.

ಮನುಷ್ಯನ ಜೀವನದಲ್ಲಿ ಪುಸ್ತಕಗಳು ಅತ್ಯಂತ ಮಹತ್ವದ ಪಾತ್ರವಹಿಸುತ್ತವೆ. ಅವು ಕೇವಲ ಕಾಗದದ ಹಾಳೆಗಳಲ್ಲ, ಬದಲಿಗೆ ಜ್ಞಾನದ ದೀಪ, ಮನರಂಜನೆಯ ಸಾಧನ ಮತ್ತು ಉತ್ತಮ ಸ್ನೇಹಿತರು. ಪುಸ್ತಕಗಳನ್ನು ಓದುವ ಹವ್ಯಾಸವು ವ್ಯಕ್ತಿಯನ್ನು ಬುದ್ಧಿವಂತನನ್ನಾಗಿ ಮಾಡುತ್ತದೆ ಮತ್ತು ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಯಶಸ್ವಿಯಾಗಲು ಸಹಾಯ ಮಾಡುತ್ತದೆ.ಎಲ್ಲ ರೀತಿಯ ಪುಸ್ತಕಗಳಿಗಾಗಿ "ಗುರುನಾಥ್ ರಾಜಗಿರ ಅವರ ನೇತೃತ್ವದಲ್ಲಿ ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಭಾಲ್ಕಿಯ ಹಿರೇಮಠ ಸಂಸ್ಥಾನ ಅರ್ಪಿಸುವ "ಈ "ವೀರಲೋಕ ಪುಸ್ತಕಸಂತೆಗೆ" ಖಂಡಿತ ಭೇಟಿ ನೀಡಿ ಉಪಯೋಗ ಮಾಡಿಕೊಳ್ಳಿ ,ಜ್ಞಾನದ ಭಂಡಾರವನ್ನು ಹೆಚ್ಚಿಸಿಕೊಳ್ಳಿ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗ್ಯಾರಂಟಿ ಯೋಜನೆಗಳು ಜನರಿಗೆ ತಲುಪಿಸಿ: ಸಂಗ್ರಾಮಪ್ಪ ಪಾಟೀಲ್




• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:**

ಇಲ್ಲಿನ ತಾಲ್ಲೂಕು ಪಂಚಾಯತ ಸಭಾಂಗಣದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಸಂಗ್ರಾಮಪ್ಪಾ ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಗುರುವಾರ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಜರುಗಿತು. ನಂತರ ಮಾತನಾಡಿ, ಗ್ಯಾರಂಟಿ ಯೋಜನೆಗಳಿಂದ ಸಾಕಷ್ಟು ಬಡ ಜನರಿಗೆ ಅನುಕೂಲವಾಗಿದ್ದು, ಅರ್ಹ ಫಲಾನುಭವಿಗಳಿಗೆ ಯೋಜನೆಗಳು ದೂರವಾಗದಂತೆ ಅಧಿಕಾರಿಗಳು ಎಚ್ಚರವಹಿಸಬೇಕು ಎಂದರು. ಯಾರದಾದರೂ ರೇಷನ್ ಕಾರ್ಡ್ ರದ್ದಾಗಿದ್ದರೇ, ಕೂಡಲೇ ಗ್ಯಾರಂಟಿ ಅನುಷ್ಠಾನ ಸಮಿತಿಗೆ ಮಾಹಿತಿ ಒದಗಿಸಿದರೇ, ಕೂಡಲೇ ಸಮಸ್ಯೆ ಇತ್ಯರ್ಥ ಪಡಿಸಲಾಗುತ್ತದೆ. ತಾಂತ್ರಿಕ ದೋಷಗಳಿಂದ ಕೆಲ ಫಲಾನುಭವಿಗಳಿಗೆ 2 ಸಾವಿರ ಹಣ ಖಾತೆಗೆ ಜಮೆಯಾಗಿಲ್ಲ ಎನ್ನುವ ದೂರುಗಳಿವೆ ಎಂದು ಅಧಿಕಾರಿಗಳಿಗೆ ತಿಳಿಸಿದರು. ಕೆಲವಡೆ ಬಸ್‌ಗಳ ಸಂಚಾರ ಆಗುತ್ತಿಲ್ಲ. ಗ್ರಾಮೀಣ ಭಾಗದ ಶಾಲಾ–ಕಾಲೇಜು ವಿದ್ಯಾರ್ಥಿಗಳು ಬಸ್ ನಿಲ್ಲಿಸುತ್ತಿಲ್ಲ ಎನ್ನುವ ದೂರುಗಳಿವೆ ಅವುಗಳನ್ನು ಸಾರಿಗೆ ಇಲಾಖೆ ಅಧಿಕಾರಿಗಳು ಗ್ರಾಮೀಣ ಭಾಗದಲ್ಲಿ ಸಮಯಕ್ಕೆ ಬಸ್ ಸೌಕರ್ಯ ಕಲ್ಪಿಸಬೇಕು' ಎಂದರು. ಸಭೆಗೆ ಸರಿಯಾದ ಮಾಹಿತಿ ನೀಡದಕ್ಕೆ ಯುವನಿಧಿ ಸಿಬ್ಬಂದಿಗೆ ಮುಂದಿನ ಸಭೆಗೆ ಸರಿಯಾದ ವರದಿ ಸಲ್ಲಿಸಬೇಕು ಇಲ್ಲದಿದ್ದರೆ ಸಭೆಗೆ ಬರಬೇಡಿ ಎಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮಿ ಬಿರಾದರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಮನೋಜಕುಮಾರ್ ಕೋಟೆಕರ್, ಸದಸ್ಯರಾದ ವೀರಪ್ಪ ಮಾನಕರ, ಜಗದೀಶ ರಾಠೋಡ, ಅಸ್ಕರ ಮನ್ನಾಖೇಳ್ಳಿ, ಸಂತೋಷರೆಡ್ಡಿ ಕಮಲಾಪುರ್, ಮಹಮ್ಮದ್ ಖುದ್ದುಸ್, ಪ್ರಕಾಶ ಮಾಶೆಟ್ಟಿ, ಪ್ರವೀಣ ಕೋಡಂಬಲ್, ಸಿಡಿಪಿಓ ಶಿವಪ್ರಕಾಶ ಹಿರೇಮಠ, ಜೆಸ್ಕಾಂ ಎಇಇ ರಿಷಿಕೇಶ, ವಿಜಯಕುಮಾರ ಚಾಂಗಲೇರಾ, ಪ್ರಕಾಶ ರೆಡ್ಡಿ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಭ್ರಷ್ಟಾಚಾರದ ರೂವಾರಿ ಅಭಿಷೇಕ ಪೋಲಾಗೆ ಅಮಾನತುಗೊಳಿಸುವಂತೆ ಆಗ್ರಹ

• **ಮಲ್ಲಮ್ಮ ನುಡಿ ವಾರ್ತೆ ,ಬೀದರ್:**



ಔರಾದ ತಾಲ್ಲೂಕಿನಲ್ಲಿ ಸಮುದಾಯ ಶೌಚಾಲಯಗಳ ನಿರ್ಮಾಣ, ಶಾಲೆಗಳಿಗೆ ಸೋಲಾರ ಪೆನಾಲ್ ಅಳವಡಿಕೆ ಹಾಗೂ ವಿದ್ಯುತ್ ಕನೆಕ್ಷನ್ ನೀಡುವ ವಿಚಾರದಲ್ಲಿ ಕೆ.ಎಲ್.ಆರ್.ಡಿ ಅಧಿಕಾರಿ ಅಭಿಷೇಕ ಪೋಲಾ ಕೋಟ್ಯಾಂತರ ರೂಪಾಯಿ ಲೂಟಿ ಮಾಡಿದ್ದಾರೆ ಎಂದು ಸಾಮಾಜಿಕ ಹೊರಾಟಗಾರ ಹಾಗೂ ಕೌಠಾ ಗ್ರಾಮ ಪಂಚಾಯತ್ ಸದಸ್ಯ ಪ್ರದೀಪ ಯನಗುಂದೆ ಆರೋಪಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಬುಧವಾರ ಕ–ರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಲ್ಯಾಂಡ್ ಆರ್ಮಿ ಇಲಾಖೆ ಬ್ರಹ್ಮಾಂಡ ಭ್ರಷ್ಟಾಚಾರದ ಕೂಪವಾಗಿದೆ ಎಂದು ಒಂದೊಂದು ಹಗರಣ ಸವಿಸ್ತಾರವಾಗಿ ತಿಳಿಸಿದರು.

ಬೀದರ್‌ನ ಕೆ.ಎಲ್.ಆರ್.ಡಿ ಇಲಾಖೆ ಎ.ಇ. ಹಾಗೂ ಎಇಇ ಎರಡು ಹುದ್ದೆಗಳ ಪ್ರಭಾರಿ ಅಧಿಕಾರ ವಹಿಸಿಕೊಂಡ ಅಭಿಷೇಕ ಪೋಲಾ ಅವರು ಬಹಿರಂಗವಾಗಿ ನಿರ್ಭಯವಾಗಿ ಸರಕಾರದ ಕೋಟ್ಯಾಂತರ ರೂ.ಲೂಟಿ ಮಾಡಿದ್ದಾರೆ. ಇವರಿಗೆ ಇಲ್ಲಿಯ ಹಿರಿಯ ಅಧಿಕಾರಿಗಳ ಕುಮ್ಮಕ್ಕು ಸಹಿತ ಇದೆ. ಪ್ರಶ್ನೆ ಮಾಡಿದರೆ ನನ್ನ ಹಿಂದೆ ಸಚಿವರಿದ್ದಾರೆ. ಹಿರಿಯ ಅಧಿಕಾರಿಗಳಿದ್ದಾರೆ. ನಿಮ್ಮ ಮನೆಗೆ ರಾತ್ರಿ 10 ಗಂ–ಟೆಗೆ ಬಂದು ನೋಡಿಕೊಳ್ಳುತ್ತೇನೆ ಎಂದು ಅವರ ಬೆಂಬಲಿಗ ಗುರು ಪಾಟೀಲ ಕೂಡಾ ನಮಗೆ ಹೆದರಿಸುತ್ತಾರೆ ಎಂದು ಗಂಭೀರ ಆರೋಪ ಮಾಡಿದರು. ಅವರು ನಡೆಸಿರುವ ಭ್ರಷ್ಟಚಾರ ಅವ್ಯವಹಾರದ ಕುರಿತು ಹಿರಿಯ ಅಧಿಕಾರಿಗಳಿಗೆ ದೂರು ನೀಡಿ ಸಾಕ್ಷಿ ಆಧಾರ ಸಹಿತ ದಾಖಲೆಗಳು ನೀಡಿದ್ದರೂ ಸಹ ಕ್ರಮ ಕೈಗೊಳದೇ ಮೌನ ವಹಿಸಿರುತ್ತಾರೆ ಎಂದು ತಿಳಿಸಿದರು. ಔರಾದ ಮೀಸಲು ವಿಧಾನಸಭಾ ಕ್ಷೇತ್ರದ ಔರಾದ ಮತ್ತು ಕಮಲನಗರ ತಾಲ್ಲೂಕಿನಲ್ಲಿ ಹಲವಾರು ಸರಕಾರಿ ಶಾಲೆಗಳಿಗೆ ಸೋಲಾರ ಪೆನಾಲ್ ಅಳವಡಿಸದೆ ಕೋಟ್ಯಾಂತರ ರೂ. ಲೂಟಿ ಮಾಡಿದ್ದಾರೆ ಎಂದರು. ಸೋಲಾರ ಪೆನಾಲ ಅಳವಡಿಕೆ ಕಾಮಗಾರಿಗೆ ಅನುಮೋದನೆ ಪಡೆದು ಕೆಲವೇ ಕೆಲವು ಶಾಲೆಗಳಿಗೆ ಸೋಲಾರ ಅಳವಡಿಸಿ ಇನ್ನುಳಿದ ಶಾಲೆಗಳಲ್ಲಿ ಅಲ್ಲಿಯ ಮುಖ್ಯ ಗುರುಗಳಿಗೂ ಸಹ ಮಾಹಿತಿ ನೀಡದೆ ಹಣ ಲಪಟಾಯಿಸಿದ್ದಾರೆ ಎಂದು ತಿಳಿಸಿದರು.

ಈ ವಿಷಯ ಕುರಿತು ಖುದ್ದಾಗಿ ತಾವು ಶಾಲೆಗಳಿಗೆ ಭೇಟಿ ನೀಡಿ ಅಲ್ಲಿಯ ಮುಖ್ಯಗುರುಗಳಿಗೆ ಕೇಳಿದರೆ ನಮಗೆ ಈ ವಿಷಯ ಮಾಹಿತಿಯೆ ಇಲ್ಲ.ನಮ್ಮಲ್ಲಿ ಸೋಲಾರ್ ಪೆನಾಲ್ ಅಳವಡಿಸಿಲ್ಲ ಎಂದು ಅಧಿಕೃತವಾಗಿ ಬರೆದುಕೊಟ್ಟಿರುವ ದಾಖಲೆಯು ಸಹ ಸುದ್ದಿಗೋಷ್ಠಿಯಲ್ಲಿ ಪ್ರದರ್ಶಿಸಿದರು.

ಶಾಲೆಗಳ ಕೋಣೆ ದುರಸ್ತಿ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ಗುಳುಂ ಮಾಡಿದ್ದಾರೆ.ಸಮುದಾಯ ಶೌಚಾಲಯಗಳು ವೈಜ್ಞಾನಿಕವಾಗಿ ನಿರ್ಮಾಣ ಮಾಡದೆ ಕಳಪೆ ಕಾಮಗಾರಿ ಮಾಡಿ ಹಣ ಕೊಳ್ಳೆ ಹೊಡೆದಿದ್ದಾರೆ ಎಂದು ಆರೋಪಿಸಿದರು.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ವಿವಿಧ ಯೊಜನೆಗಳಡಿಯಲ್ಲಿ ಅಭಿವೃದ್ಧಿಗಾಗಿ ಕೋಟ್ಯಾಂತರ ರೂ ನೀಡುತ್ತಿದೆ. ಆದರೆ ಇಲ್ಲಿ ಅಧಿಕಾರಿಗಳು ಕೆಲಸ ಮಾಡದೆ ಬೋಗಸ್ ಬಿಲ್ ಮಾಡಿ ಹಣ ಲೂಟಿ ಮಾಡುತಿದ್ದಾರೆ. ಈ ಬಗ್ಗೆ ತನಿಖೆಗಾಗಿ ಹಿರಿಯ ಅಧಿಕಾರಿಗಳು ಬೀದರಗೆ ಬಂದಾಗ ಅವರಿಗೆ ಇಲ್ಲಿಯ ಅಧಿಕಾರಿಗಳು ಸಹಕಾರ ನೀಡಲಿಲ್ಲ. ಹೀಗಾಗಿ ಬಂದ ದಾರಿಗೆ ಸುಂಕವಿಲ್ಲ ಎಂದು ಮರಳಿ ಹೋಗಿರುತ್ತಾರೆ ಎಂದು ಸರಕಾರದ ವಿರುದ್ಧ ಕಿಡಿ ಕಾರಿದರು.

ಬೀದರ್ ಕೆಡಿಅರ್‌ಎಲ್ ಅಧಿಕಾರಿ ಅಭಿಷೇಕ ಪೋಲಾ ಅವರನ್ನು ಕೂಡಲೇ ಅಮಾನತ್ತುಗೊಳಿಸಿ ಅವರು ಕಚೇರಿಯ ಅಧಿಕಾರ ವಹಿಸಿಕೊಂಡ ಬಳಿಕ ನಡೆದಿರುವ ಕಾಮಗಾರಿಗಳ ಸಮಗ್ರ ತನಿಖೆ ಮಾಡಿಸಿ ಅವರ ವಿರುದ್ಧ ಕಾನೂನಿನ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸರಕಾರಕ್ಕೆ ಒತ್ತಾಯಿಸಿದ್ದರು.

ಅಭಿಷೇಕ ಪೋಲಾ ಅವರನ್ನು ಏನಾದರು ಪ್ರಶ್ನೆ ಮಾಡಿದ್ದರೆ ಏಜೆನ್ಸಿಯ ಮುಖ್ಯಸ್ಥರಾದ ಗುರು ಪಾಟೀಲ್ ಧಮಕಿ ಹಾಕುತಿದ್ದಾರೆ ಎಂದು ದೂರಿದರು. ಈಗಾಗಲೆ ಇವರ ವಿರುದ್ಧ ದೂರು ನೀಡಿ ಪೊಲೀಸ್ ಅಧಿಕಾರಿಗಳ ಗಮನಕ್ಕೆ ತಂದಿರುವದಾಗಿ ತಿಳಿಸಿದರು.ಒಂದು ವೇಳೆ ಪೋಲಾ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು. ಇದೇ ವೇಳೆ ಪ್ರಮುಖರಾದ ಗಂಗಾಧರ ಹೊಸಳ್ಳಿ ಮಾತನಾಡಿ ಲ್ಯಾಂಡ್ ಆರ್ಮಿ ಇಲಾಖೆಯ ಎಇ ಹಾಗೂ ಎಇಇ ಅಭಿಷೇಕ ಪೋಲಾ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.ಪತ್ರಿಕಾಗೋಷ್ಠಿಯಲ್ಲಿ ನಾಗೇಂದ್ರ ಬಿರಾದರ, ಗಣೇಶ ಬಿರಾದಾರ, ಪಪ್ಪು ಮಡಿವಾಳ, ಸುರೇಶ ಬಿರಾದಾರ ಹಲವರು ಉಪಸ್ಥಿತರಿದ್ದರು.

## ವಿದ್ಯಾರ್ಥಿಗಳು ಕ್ರೀಡಾ ಮನೋಭಾವ ಬೆಳೆಸಿಕೊಳ್ಳಿ : ಯಶವಂತ ಬಿರಾದಾರ

• **ಮಲ್ಲಮ್ಮ ನುಡಿ ವಾರ್ತೆ,ಮಲನಗರ :**



ವಿದ್ಯಾರ್ಥಿಗಳು ಮೊಬೈಲ್ ದಾಸರಾಗದೆ ಕ್ರೀಡಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ನಿವೃತ್ತ ದೈಹಿಕ ಶಿಕ್ಷಕ ಯಶವಂತ ಬಿರಾದಾರ ಹೇಳಿದರು.ತಾಲ್ಲೂಕಿನ ಖೇಡ–ಸಂಗಮ ಗ್ರಾಮದ ಚನ್ನಬಸವ ಪಟ್ಟದ್ದೇವರ ಗುರುಕುಲ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ಗುರುವಾರ ಹಮ್ಮಿಕೊಂಡ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.ಸ್ಪರ್ಧೆಯಲ್ಲಿ ಸೋಲು ಮತ್ತು ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು. ದೈಹಿಕ, ಮಾನಸಿಕ ನೆಮ್ಮದಿಗೆ ಕ್ರೀಡೆ ಹಾಗೂ ಯೋಗದ ಅವಶ್ಯಕತೆ ಇದೆ ಎಂದು ತಿಳಿಸಿದರು.

ಮುಖ್ಯಶಿಕ್ಷಕಿ ಅರ್ಚನಾ ವಿಶ್ವಕರ್ಮ ಮಾತನಾಡಿ, ಆರೋಗ್ಯವೆ ಭಾಗ್ಯ ಎನ್ನುವಂತೆ ಕ್ರೀಡೆ ನಮ್ಮ ಆರೋಗ್ಯವನ್ನು ಚೆನ್ನಾಗಿ ಇಡುತ್ತದೆ, ಮಕ್ಕಳು ವಿದ್ಯಾಭ್ಯಾಸದ ಜತೆಗೆ ಕ್ರೀಡೆಯ ಪಠ್ಯೇತರ ಚಟುವಟಿಕೆಯಿಂದ ಉತ್ತಮ ವಾತಾವರಣ ಸೃಷ್ಟಿಯಾಗುತ್ತದೆ ಎಂದು ಹೇಳಿದರು.ನಂತರ ವಿಜೇತ ಮಕ್ಕಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಶಿಕ್ಷಕರಾದ ಅನೀಲರಾಜ ಬೆಳಕಟ್ಟೆ, ರೇಷ್ಮಾ ಹೊಳಸಮುದ್ರೆ, ಸಂಜುಕುಮಾರ ಮೆಂಗಾ, ಶಿವಕುಮಾರ ಹಿರೇಮಠ ಹಾಗೂ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಇದ್ದರು. ದೀಪಿಕಾ ಸ್ವಾಗತಿಸಿದರು, ಬಸವರಾಜ ಚಿಂದೆ ನಿರೂಪಣೆ ಮಾಡಿದರು.

## ವೀರಲೋಕ ಪುಸ್ತಕ ಸಂತೆ.



**ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ :**

ಇದೇ ಜನೆವರಿ 24 ರಿಂದ 26 ವರೆಗೆ ಮೂರು ದಿನಗಳ ಕಾಲ ಭಾಲ್ಕಿ ಸಂಸ್ಥಾನ ಹಿರೇಮಠ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಹಯೋಗದಲ್ಲಿ ಬೀದರ ನಗರದಲ್ಲಿ "ಪುಸ್ತಕ ಸಂತೆ" ಜರುಗಲಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಪುಸ್ತಕ ಆಸಕ್ತರು ಭಾಗವಹಿಸಿ ಯಶಸ್ವಿಗೊಳಿಸಿ ಎಂದು. ಇಲ್ಲಿನ ರಾಷ್ಟ್ರೀಯ ಬಸವದಳ ಅಧ್ಯಕ್ಷರಾದ ರವೀಂದ್ರ ಕೋಳಕುರ ತಿಳಿಸಿದ್ದಾರೆ.

ಮನುಷ್ಯನ ಆರೋಗ್ಯಕರ ವಿಕಸನದಲ್ಲಿ ಪುಸ್ತಕಗಳ ಪಾತ್ರ ಮಹತ್ವದು, ಅನ್ಯ ಪುಸ್ತಕಗಳನ್ನು ಓದುವುದರಿಂದ ಮಕ್ಕಳಲ್ಲಿ ಭಾಷಾ ಜ್ಞಾನ, ಪದಗಳ ಪರಿಚಯ, ಸಾಹಿತ್ಯದಲ್ಲಿ ಆಸಕ್ತಿ ಬೆಳೆಯುತ್ತದೆ. ಬೀದರ ನಗರದ ನೆಹರು ಸ್ಟೇಡಿಯಂ ಸಮೀಪದ ಸಾಯಿ ಸ್ಕೂಲ್ ಆವರಣದಲ್ಲಿ ನಡೆಯಲಿರುವ ರಾಜ್ಯ ಮಟ್ಟದ ಪುಸ್ತಕ ಸಂತೆಗೆ ಕುಟುಂಬದವರ ಜೋತೆಗೆ ಬಂದು ಪುಸ್ತಕ ಖರೀದಿಸಿ ಕನ್ನಡ ಮತ್ತು ಪುಸ್ತಕ ಸಂಸ್ಕೃತಿ ಬೆಳೆಯಲಿಕ್ಕೆ ಸಹಕರಿಸಿ ಎಂದರು.

## ಪರೋಪಕಾರದ ಕೆಲಸ ಭಗವಂತನ ಸೇವೆಗೆ ಸಮ

### ಉದ್ಯಮಿ ಶಿರಗೋಳ ಜನ್ಮದಿನದಂಗವಾಗಿ ಉಚಿತ ಆರೋಗ್ಯ ಶಿಬಿರ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**




ಕಾಯಕದಿಂದ ದುಡಿದು ಗಳಿಸಿದ ಸಂಪತ್ತಿನಲ್ಲಿ ತಕ್ಕ ಮಟ್ಟಿನ ಪರೋಪಕಾರದ ಕೆಲಸ ಮಾಡಿದರೇ ಅದು ಭಗವಂತನ ಸೇವೆಗೆ ಸಮ ಎಂದು ಅಬ್ಬೆತುಮಕೂರಿನ ವಿಶ್ವಾ–ರಾಧ್ಯರ ಮಠದ ಕಿರಿಯ ಶ್ರೀಗಳಾದ ಶಿವಶೇಖರ ಸ್ವಾಮಿಗಳು ಹೇಳಿದರು.

ಉದ್ಯಮಿ ಮಲ್ಲಿಕಾರ್ಜುನ ಶಿರವಾಳ ಅವರ ಜನ್ಮದಿನದಂಗವಾಗಿ ಇಲ್ಲಿನ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಗುರುವಾರ ಲಯನ್ಸ್ ಕ್ಲಬ್, ಶಶಿ ಚಾರಿಟೇಬಲ್ ಟ್ರಸ್ಟ್, ವೇದ ಚಾರಿಟೇಬಲ್ ಟ್ರಸ್ಟ್ , ಅವಿಜ್ಞಾ ಆಸ್ಪತ್ರೆ ಯಿಮ್ಸ್ ರಕ್ತ ನಿಧಿ ಸಂಯುಕ್ತವಾಗಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಹಾಗೂ ರಕ್ತದಾನ ಶಿಬಿರ ಕಾರ್ಯಕ್ರಮದ ಸಾನಿಧ್ಯ ವಹಿಸಿ, ಚಾಲನೆ ನೀಡಿ ಮಾತನಾಡಿದರು.

ಇಂದು ಅನೇಕರಿಗೆ ಶ್ರೀಮಂತಿಕೆ ಇದೆ, ಆದರೇ ಅವರಲ್ಲಿ ಬಹುತೇಕರಿಗೆ ಸಾಮಾಜಿಕ ಕಾರ್ಯ ಮಾಡುವ ಇಚ್ಛಾಶಕ್ತಿ ಇರುವುದಿಲ್ಲ, ಆದರೇ ಯುವ ಉದ್ಯಮಿ ಮಲ್ಲಿಕಾರ್ಜುನ ಶಿರಗೋಳ ಅವರು ಸಾವಿರಾರು ಜನಕ್ಕೆ ಉಪಯೋಗವಾಗುವಂತಹ ಇಂತಹ ಶಿಬಿರಗಳು ಹಮ್ಮಿಕೊಳ್ಳುವ ಮೂಲಕ ಮಾದರಿಯಾಗಿದ್ದಾರೆಂದರು.

ಹಿರಿಯರಾದ ಹಣಮಂತ ಶಿರಗೋಳ ಅವರು ಹಲವು ದಶಕಗಳಿಂದ ವಿಶ್ವಾರಾಧ್ಯರ ಪರಮಭಕ್ತರಾಗಿ, ವ್ಯಾಪಾರಿಗಳಾಗಿ, ಸಾಮಮಾಡುವವ ಕೆಲಸ ಮಾಡುತ್ತ, ಮುಂದೇ ಮಕ್ಕಳಿಗೂ ಉತ್ತಮ ಸಂಸ್ಕಾರ ನೀಡುವ ಅವರನ್ನು ಇಂತಹ ಕೆಲಸದಲ್ಲಿ ತೊಡಗಿಸಿದ್ದು ಎಲ್ಲರೂ ಮೆಚ್ಚುವಂತಹದ್ದಾಗಿದೆ ಎಂದು ಶ್ರೀಗಳು ಮಾರ್ಮಿಕವಾಗಿ ಹೇಳಿದರು.

ನೇತೃತ್ವ ವಹಿಸಿ ಮಾತನಾಡಿದ ಗುರುಮಠಕಲ್ ಖಾಸಾಮಠದ ಶಾಂತವೀರ ಗುರುಮುರುಗೇಂದ್ರ ಸ್ವಾಮಿಗಳು ಮಾತನಾಡಿ, ಇಂದಿನ ಬಹುತೇಕ ಯುವಕರು ದಾರಿಬಿಟ್ಟು ಬದುಕುವುದನ್ನು ಕಾಣುತ್ತಿದ್ದೇವೆ. ಆದರೇ ಬದುಕಿನ ಕ್ಷಣಗಳು ವ್ಯರ್ಥ ಮಾಡದೇ ಉದ್ಯಮದೊಂದಿಗೆ ಇಂತಹ ಸಾಮಾಜಿಕ ಕಾರ್ಯಗಳನ್ನು ಮಾಡುವ ಮೂಲಕ ನಮ್ಮೊಳಗೊಬ್ಬ ಅಪ್ಪಟ್ಟ ಕಾಯಕ ಜೀವಿ ಮಲ್ಲಿಕಾರ್ಜುನ ಶಿರಗೋಳ ಅವರು ಇರುವುದೇ ಹೆಮ್ಮೆ ಎಂದರು. ಲಯನ್ಸ್ ಕ್ಲಬ್ ಅಧ್ಯಕ್ಷ ಭೀಮಣ್ಣಗೌಡ ಕ್ಯಾತನಾಳ್ ಮಾತನಾಡಿ, ತಮ್ಮ ಜನುಮ ದಿನವನ್ನು ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ಉಚಿತ ಆರೋಗ್ಯ ಶಿಬಿರ ಆಯೋಜಿಸುವ ಮೂಲಕ ಮಾಡಿಕೊಳ್ಳುತ್ತಿರುವ ಮಲ್ಲಿಕಾರ್ಜುನ ಅವರ ಕಾರ್ಯ ಇತರರಿಗೆ ಮಾದರಿ ಎಂದರು.

ಉದ್ಯಮಿ ಮಲ್ಲಿಕಾರ್ಜುನ ಶಿರಗೋಳ ಮಾತನಾಡಿದರು. ಇದೇ ವೇಳೆ ವೈದ್ಯರುಗಳಿಗೆ, ವಿವಿಧಸಾಧಕರಿಗೆ ಸನ್ಮಾನಿಸಲಾಯಿತು. 40 ಆಶಾ ಕಾರ್ಯಕರ್ತರಿಗೆ ಇಮ್ಯೂನಿಟಿ ಬೂಸ್ಟರ್ ಕಿಟ್, ಸೀರೆ,ಟ್ರಾವೆಲ್ ಬ್ಯಾಗ್ ಗಳು ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ಲಯನ್ಸ್ ಕ್ಲಬ್ ನ ಕಾರ್ಯದರ್ಶಿ ಡಾ.ಶಿವಪುತ್ರರೆಡ್ಡಿ ಪಾಟೀಲ್, ಹಿರಿಯ ಮುಖಂಡ ರಾಚಣ್ಣಗೌಡ ಮುದ್ನಾಳ್, ವೆಂಕಡರೆಡ್ಡಿ ತಂಗಡಗಿ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಮಲ್ಲಪ್ಪ ಸಂಕಿನ್,

ಸುಭಾಷಚಂದ್ರ ಮಾನೇಗಾರ ಸೇರಿದಂತೆಯೇ ಇತರರಿದ್ದರು. ಡಾ.ಸಿದ್ದರಾಜರೆಡ್ಡಿ ನಿರೂಪಿಸಿದರು. ಸುಮಾರು ಐವತ್ತು ಅಧಿಕ ಜನರು ರಕ್ತದಾನ ಮಾಡಿದರು, 300 ಅಧಿಕ ಜನರು ವಿವಿಧ ತಜ್ಞ ವೈದ್ಯರಿಂದ ಆರೋಗ್ಯ ತಪಾಸಣೆ ಮಾಡಿಸಿಕೊಂಡರು.

# "ಕಮ್ಯುನಿಟಿ ಮೊಬಿಲೈಜರ್" ಹುದ್ದೆಯ ನೇಮಕಾತಿಗಾಗಿ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:

ಕಲಬುರಗಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ್ ಮಿಷನ್ 2.0 ರ ಅಡಿಯಲ್ಲಿ ಮೂರು ವರ್ಷಗಳವರೆಗೆ ಐ.ಇ.ಸಿ. ಚಟುವಟಿಕೆಗಳನ್ನು ಕೈಗೊಳ್ಳಲು ಆಸಕ್ತಿ ಹೊಂದಿರುವ ನಲ್ಮ್-ಡೇ ಅಡಿಯಲ್ಲಿ ನೋಂದಾಯಿತ ಮಹಿಳಾ ಎಸ್.ಹೆಚ್.ಜಿ. ಸದಸ್ಯರನ್ನು ಕಮ್ಯುನಿಟಿ ಮೊಬಿಲೈಜರ್ ಹುದ್ದೆಯ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಮಹಾನಗರಪಾಲಿಕೆಯ (ಪರಿಸರ) ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದಾರೆ.

ಆಸಕ್ತಿಯುಳ್ಳ ನಲ್ಮ್–ಡೇ ಅಡಿಯಲ್ಲಿ ನೋಂದಾಯಿಸಿಕೊಂಡ ನಲ್ಮ್ ಎಸ್.ಹೆಚ್.ಜಿ./ ಎನ್.ಜಿ.ಓ. ಮಹಿಳಾ ಸದಸ್ಯರು ತಮ್ಮ ಇಚ್ಛೆನುಸಾರ ನಲ್ಮ್–ಡೇ ಹಿಂಬರಹದೊಂದಿಗೆ ಸಹಾಯಕ ಕಾರ್ಯ ಪಾಲಕ (ಪರಿಸರ) ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆಯ ಕಚೇರಿಗೆ ಭೇಟಿ ನೀಡಿ ನಿಗದಿತ ಅರ್ಜಿ ನಮೂನೆಯನ್ನು ಪಡೆದು ಭರ್ತಿ ಮಾಡಿ ಅವಶ್ಯಕ ದಾಖಲೆಗಳೊಂದಿಗೆ 2026ರ ಜನವರಿ 30ರ ಸಂಜೆ 5 ಗಂಟೆಯೊಳಗೆ ಅರ್ಜಿ ಸಲ್ಲಿಸಬೇಕು.

ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು ಹಾಗೂ ಇದರ ಆಯ್ಕೆ ಪ್ರಕ್ರಿಯೆ ಮತ್ತು ಗೌರವಧನಕ್ಕೆ ಸಂಬಂಧಿಸಿದ ಇತರೆ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಕಲಬುರಗಿ ಮಹಾನಗರ ಪಾಲಿಕೆಯ ಸಹಾಯಕ (ಪರಿಸರ) ಕಾರ್ಯಪಾಲಕ ಅಭಿಯಂತರರನ್ನು ಸಂಪರ್ಕಿಸಲು ಕೋರಲಾಗಿದೆ.

# ಜ, 26 ರಂದು ಹೈಕೋರ್ಟ್ ಪೀಠದಲ್ಲಿ ಧ್ವಜಾರೋಹಣ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:

ಕಲಬುರಗಿ ಹೊರವಲಯದ ಕರ್ನಾಟಕ ಹೈಕೋರ್ಟ್ ಕಲಬುರಗಿ ಪೀಠದಲ್ಲಿ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ರಾಷ್ಟ್ರ ಧ್ವಜಾರೋಹಣ ಕಾರ್ಯಕ್ರಮವನ್ನು ಜನವರಿ 26 ರಂದು ಸೋಮವಾರ ಬೆಳಿಗ್ಗೆ 9.30 ಗಂಟೆಗೆ ಜರುಗಲಿದೆ ಎಂದು ಕರ್ನಾಟಕ ಹೈಕೋರ್ಟ್ ಕಲಬುರಗಿ ಪೀಠದ ಹೆಚ್ಚುವರಿ ರಿಜಿಸ್ಟ್ರಾರ್ ಜನರಲ್‌ರಾದ ಬಸವರಾಜ ಚೇಂಗಟಿ ಅವರು ತಿಳಿಸಿದ್ದಾರೆ.

ಕರ್ನಾಟಕ ಹೈಕೋರ್ಟ್ ಕಲಬುರಗಿ ಪೀಠದ ಹಿರಿಯ ನ್ಯಾಯಾಧೀಶರು ಧ್ವಜಾರೋಹಣ ನೆರವೇರಿಸುವರು. ಈ ಪೀಠದ ಇತರ ನ್ಯಾಯಾಧೀಶರು, ನ್ಯಾಯಾಂಗ ಇಲಾಖೆಯ ಅಧಿಕಾರಿಗಳು, ಕಚೇರಿ ಸಿಬ್ಬಂದಿ, ಕಲಬುರಗಿ ವಕೀಲರ ಸಂಘದ ಸದಸ್ಯರು ಹಾಗೂ ಸರ್ಕಾರಿ ನ್ಯಾಯವಾದಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

# ಸೇಡಂ: ಅರ್ಜಿ ಸಲ್ಲಿಕೆ ಕೊನೆಯ ದಿನಾಂಕ ವಿಸ್ತರಣೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:

2025–26ನೇ ಸಾಲಿನಲ್ಲಿ ಪುರಸಭೆ ನಿಧಿಯಡಿ ವಿವಿಧ ಸೌಲಭ್ಯಗಳಾದ ಶಿಷ್ಯವೇತನ, ಹೊಲಿಗೆ ಯಂತ್ರ ನೀಡುವುದು, ಹೊಲಿಗೆ ತರಬೇತಿ, ಮೋಟಾರ್ ವಾಹನ ತರಬೇತಿ, ಎಕ ಕಂತಿನ ಜೀವ ವಿಮೆ ಮುಂತಾದ ಸೌಲಭ್ಯಗಳನ್ನು ಪಡೆಯಲು ಸೇಡಂ ಪಟ್ಟಣ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗ ಹಾಗೂ ವಿಶೇಷಚೇತನ ಅಭ್ಯರ್ಥಿಗಳಿಂದ ಅರ್ಜಿ ಸಲ್ಲಿಕೆ ಕೊನೆಯ ದಿನಾಂಕವನ್ನು 2026ರ ಜನವರಿ 31 ರವರೆಗೆ ವಿಸ್ತರಿಸಲಾಗಿದೆ.

ನಿಗದಿತ ಗುರಿಯಂತೆ ಅಭ್ಯರ್ಥಿಗಳಿಂದ ಅರ್ಜಿಗಳು ಬಾರದೇ ಇರುವುದರಿಂದ ಅರ್ಜಿ ಸಲ್ಲಿಕೆ ಕೊನೆಯ ದಿನಾಂಕವನ್ನು ವಿಸ್ತರಿಸಲಾಗಿದ್ದು, ಅರ್ಹ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯನ್ನು ಮೇಲ್ಕಂಡ ಕೊನೆಯ ದಿನಾಂಕದೊಳಗಾಗಿ ಸೇಡಂ ನಗರಸಭೆ ಕಚೇರಿಯಲ್ಲಿ ಸಲ್ಲಿಸಬೇಕು. ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಸೇಡಂ ನಗರಸಭೆಯ ವಿಶೇಷ ನಿರ್ವಾಹಕರನ್ನು ಸಂಪರ್ಕಿಸಬೇಕೆಂದು ಎಂದು ಸೇಡಂ ನಗರಸಭೆಯ ಪೌರಾಯುಕ್ತರು ತಿಳಿಸಿದ್ದಾರೆ.

# ಜನಸ್ಪಂದನ ಸಭೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:

ಕಲಬುರಗಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ. 41, 51, 52 ಹಾಗೂ 55ರ ಸಾರ್ವಜನಿಕ ಕುಂದುಕೊರತೆಗಳನ್ನು ಸ್ಥಳದಲ್ಲಿಯೇ ಪರಿಹರಿಸುವ "ಜನಸ್ಪಂದನಾ" ಎಂಬ ವಿನೂತನ ಕಾರ್ಯಕ್ರಮವನ್ನು ಇದೇ ಜನವರಿ 23 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಕಲಬುರಗಿ ನಗರದ ಅಕ್ಕಮಹಾದೇವಿ ಕಾಲೋನಿಯ ಸಾರ್ವಜನಿಕ ಉದ್ಯಾನವನದಲ್ಲಿ ಹಮ್ಮಿಕೊಳ್ಳಲಾಗಿದ್ದು, ಮೇಲ್ಕಂಡ ವಾರ್ಡ್‌ಗಳ ವ್ಯಾಪ್ತಿಯ ಸಾರ್ವಜನಿಕರು ಈ ಜನಸ್ಪಂದನಾ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಎಂದು ಕಲಬುರಗಿ ಮಹಾನಗರ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

# ವಿದ್ಯುತ ಮಾರ್ಗದ ಸಮೀಪ ಹೋಗದಂತೆ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಕಲಬುರಗಿ ತಾಲೂಕಿನ ಉದನೂರ ಗ್ರಾಮದಲ್ಲಿ ಹೊಸದಾಗಿ ಸ್ಥಾಪಿಸಲಾಗುತ್ತಿರುವ ಉದ್ದೇಶಿತ 110/11 ಕೆ.ವ್ಹಿ. ವಿದ್ಯುತ್ ಉಪ ಕೇಂದ್ರಕ್ಕೆ, 110 ಕೆ.ವ್ಹಿ. ಪ್ರಸರಣ ಮಾರ್ಗಗಳ 110 ಕೆ.ವ್ಹಿ. ಜೋಡಿ ಗೋಪುರಗಳ ಮೇಲೆ, 1.35 ಕಿ.ಮೀ. ಉದ್ದದ ಜೋಡಿ ಪ್ರಸರಣ ಮಾರ್ಗವನ್ನು ಪ್ರಸ್ತುತವಿರುವ 110 ಕೆ.ವ್ಹಿ ಕಲಬುರಗಿ ಪಶ್ಚಿಮ ಹಾಗೂ 110 ಕೆ.ವ್ಹಿ ಕಲಬುರಗಿ ದಕ್ಷಿಣ ವಿದ್ಯುತ್ ಮಾರ್ಗದಿಂದ ನಿರ್ಮಿಸುವ ಕಾಮಗಾರಿಯನ್ನು ಕೈಗೊಂಡಿದ್ದು, ಈ ವಿದ್ಯುತ್ ಪ್ರಸರಣ ಮಾರ್ಗವು ಉದನೂರ, ಸೀತನೂರ ಹಳ್ಳಿಗಳ ಸರಹದ್ದಿನಲ್ಲಿ ಹಾದು ಹೋಗಿರುತ್ತದೆ ಎಂದು ಕಲಬುರಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಯೋಜನೆಗಳ ವಿಭಾಗದ ಕಾರ್ಯನಿರ್ವಾಹಕ ಇಂಜಿನೀಯರರು (ವಿ) ಅವರು ತಿಳಿಸಿದ್ದಾರೆ. ಈ ಮೇಲ್ಕಂಡ ವಿದ್ಯುತ್ ಪ್ರಸರಣ ಮಾರ್ಗದಲ್ಲಿ ದಿನಾಂಕ: 23–01–2026 ರಂದು ಅಥವಾ ತಂದನಂತರ ಈ ವಿದ್ಯುತ್ ಲೈನ್‌ನಲ್ಲಿ ವಿದ್ಯುತ್ ಪ್ರವಾಹಿಸಲಾಗುತ್ತದೆ.

ಕಾರಣ ಈ ಮೇಲ್ಕಂಡ ಗ್ರಾಮಗಳ ಸುತ್ತಮುತ್ತಲಿನ ವ್ಯಾಪ್ತಿಯಲ್ಲಿರುವ ಜನರು ವಿದ್ಯುತ್ ಗೋಪುರಕ್ಕೆ ಹತ್ತುವುದಾಗಲಿ ಅಥವಾ ಅದ–ಕ್ಕೆ ದನಕರುಗಳನ್ನು ಕಟ್ಟುವುದಾಗಲಿ, ಹಸಿರು ಟೊಂಗೆಗಳನ್ನು ವಿದ್ಯುತ್ ಲೈನಿಗೆ ಎಸೆಯುವುದು ಪ್ರಾಣಾಪಾಯವಾಗಲಿದ್ದು, ಸಾರ್ವಜನಿಕರು ಮೇಲ್ಕಾಣಿಸಿದವುಗಳನ್ನು ಮಾಡಬಾರದು. ಒಂದು ವೇಳೆ ಇಂತಹ ಕೃತ್ಯಗಳನ್ನು ಯಾರಾದರೂ ಎಸಗಿದಲ್ಲಿ ಮುಂದೆ ಒದಗಬಹುದಾದ ಅಪಾಯಗಳಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಜವಾಬ್ದಾರಿಯಾಗುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

# ವೀರಲೋಕ ಪುಸ್ತಕ ಸಂತೆಗೆ ಕ್ಷಣಗಣನೆ

## ನಾಡಿನ ದಿಗ್ಗಜರ ಆಗಮನ : ಗುರುನಾಥ ರಾಜಗೀರಾ

ಮಲ್ಲಮ್ಮ ನುಡಿ ವಾರ್ತೆ
ಬೀದರ

ಗಡಿನಾಡು ಬೀದರ ಜಿಲ್ಲೆಯಲ್ಲಿ ಕನ್ನಡ ಪುಸ್ತಕ ಸಂಸ್ಕೃತಿಯನ್ನು ಪಸರಿಸುವ ಉದ್ದೇಶದಿಂದ ಹಮ್ಮಿಕೊಂಡಿರುವ ಕನ್ನಡ ಪುಸ್ತಕಲೋಕದ ಅತಿದೊಡ್ಡ ವೀರಲೋಕ ಪುಸ್ತಕ ಸಂತೆಗೆ ದಿನಗಣನೆ ಆರಂಭವಾಗಿದೆ ಎಂದು ಆಯೋಜಕ ಗುರುನಾಥ ರಾಜಗೀರಾ ತಿಳಿಸಿದ್ದಾರೆ.

ವೀರಕಪುತ್ರ ಶ್ರೀನಿವಾಸ ಅವರ ಪರಿಕಲ್ಪನೆ ಭಾಲ್ಕಿಯ ಹಿರೇಮಠ ಸಂಸ್ಥಾನದ ಪೂಜ್ಯರ ಮಾರ್ಗದರ್ಶನ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ಆದಿಶ ರಜನೀಶ ವಾಲಿ ಸಾರಥ್ಯದ ಉತ್ತರ ಕರ್ನಾಟಕ ನ್ಯೂಸ್ ಸಹಕಾರದೊಂದಿಗೆ ಗುರುನಾಥ ರಾಜಗೀರಾ ನೇತೃತ್ವದಲ್ಲಿ ಜನವರಿ 24 ರಿಂದ 26 ರವರೆಗೆ ನಗರದ ಸಾಯಿ ಸ್ಕೂಲ್ ಮೈದಾನದಲ್ಲಿ ಈ ಪುಸ್ತಕ ಸಂತೆ ಜರುಗಲಿದೆ.

ಖ್ಯಾತ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರಿಂದ ಉದ್ಘಾಟನೆ: ಪುಸ್ತಕ ಸಂತೆಯ ಉದ್ಘಾಟನಾ ಸಮಾರಂಭವು ಜ.24ರ ಬೆಳಿಗ್ಗೆ 10:30 ಕ್ಕೆ ನಾಡಿನ ಖ್ಯಾತ ಸಾಹಿತಿ ಹಾಗೂ ಸಂಸ್ಕೃತಿ ಚಿಂತಕರಾದ ಡಾ. ಬರಗೂರು ರಾಮಚಂದ್ರಪ್ಪ ಅವರ ಹಸ್ತದಿಂದ ನೆರವೇರಲಿದೆ.

ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಅನುಭವ ಮಂಟಪದ ಅಧ್ಯಕ್ಷರಾದ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು ವಹಿಸಲಿದ್ದು ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ. ಖಂಡ್ರೆ, ಪೌರಾಡಳಿತ ಸಚಿವರಾದ ರಹೀಮ್ ಖಾನ್, ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ, ಚಲನಚಿತ್ರ ನಟ ನೆನಪಿರಲಿ ಪ್ರೇಮ, ವೀರಲೋಕದ ವೀರಕಪುತ್ರ ಶ್ರೀನಿವಾಸ, ಕಸಾಪ ಜಿಲ್ಲಾದ್ಯಕ್ಷರಾದ ಸುರೇಶ ಚನ್ನಶೆಟ್ಟಿ ಸೇರಿದಂತೆ ನಾಡಿನ ಗಣ್ಯರು ಭಾಗವಹಿಸಲಿದ್ದಾರೆ.

ಜ.25 ರಂದು ಜಿಲ್ಲೆಯ ಸಾಹಿತಿಗಳ ಪುಸ್ತಕ ಬಿಡುಗಡೆ: ಜಿಲ್ಲೆಯ ಸಾಹಿತಿಗಳ ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ ಜ.25ರ ಬೆಳಿಗ್ಗೆ 10:30 ಗಂಟೆಗೆ ಶಾಸಕರಾದ ಪ್ರಭು ಚವ್ಹಾಣ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಪ್ರಜಾವಾಣಿ ದಿನಪತ್ರಿಕೆಯ ಸಂಪಾದಕರಾದ ರವೀಂದ್ರ ಭಟ್, ವಿಜಯ ಕರ್ನಾಟಕ ದಿನಪತ್ರಿಕೆಯ ಪುರವಣಿ ಸಂಪಾದರಾದ ನಟೇಶ ಚಲನಚಿತ್ರ ನಟ ಅಶ್ವಥ್ ನೀನಾಸಂ ಸೇರಿದಂತೆ ಜಿಲ್ಲೆಯ ಹಿರಿಯ ಸಾಹಿತಿಗಳು ಭಾಗವಹಿಸಲಿದ್ದಾರೆ.

ಜ.26 ರಂದು ಸಮಾರೋಪ ಸಮಾರಂಭ: ಮೂರು ದಿನಗಳ ಈ ಜ್ಞಾನೋತ್ಸವದ ಸಮಾರೋಪ ಸಮಾರಂಭವು ಜನವರಿ 26 ರಂದು ಸಂಜೆ 5 ಗಂಟೆಗೆ ಜರುಗಲಿದ್ದು, ಹಿರೇಮಠದ ಪೀಠಾಧಿಪತಿಗಳಾದ ಗುರುಬಸವ ಪಟ್ಟದ್ದೇವರ ಸಾನಿಧ್ಯದಲ್ಲಿ ನಡೆಯಲಿದೆ. ಈ ಸಮಾರಂಭಕ್ಕೆ ಹಿರಿಯ ಸಾಹಿತಿ ಪ್ರೊ. ಎಸ್.ಜಿ. ಸಿದ್ರಾಮಯ್ಯನವರು ಸಮಾರೋಪ ನುಡಿಗಳನ್ನಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದರಾದ ಶ್ರೀ ಸಾಗರ ಖಂಡ್ರೆ, ಶಾಸಕರಾದ ಶ್ರೀ ಶರಣು ಸಲಗರ, ಡಾ. ಸಿದ್ಧಲಿಂಗಪ್ಪ ಪಾಟೀಲ, ಮಾಜಿ ಶಾಸಕರಾದ ಶ್ರೀ ಅಶೋಕ್ ಖೇಣಿ, ಕರ್ನಾಟಕ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಮಾನಸ, ಮಾಜಿ ಸಭಾಪತಿಗಳಾದ ವಿ.ಆರ್ ಸುದರ್ಶನ ಸೇರಿದಂತೆ ಜಿಲ್ಲೆಯ ಹಲವು ಶಿಕ್ಷಣ ತಜ್ಞರು ಹಾಗೂ ಜನಪ್ರತಿನಿಧಿಗಳು ಉಪಸ್ಥಿತರಿರಲಿದ್ದಾರೆ.

ವೈವಿಧ್ಯಮಯ ಗೋಷ್ಠಿಗಳ ಸೌರಭ: ಪುಸ್ತಕ ಸಂತೆಯ ಅಂಗವಾಗಿ ನಾಡಿನ ಖ್ಯಾತ ಚಿಂತಕರಿಂದ ವೈಚಾರಿಕ ಸಂವಾದಗಳು ನಡೆಯಲಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ:

ಮಹಿಳಾ ಸಾಹಿತ್ಯ: ವಿಜಯಪುರದ ಡಾ. ಉಷಾ ಹಿರೇಮಠ ಅವರಿಂದ ಮಹಿಳಾ ಸಾಹಿತ್ಯದಲ್ಲಿನ ಮೌಲ್ಯಗಳ ಕುರಿತು ವಿಷಯ ಮಂಡನೆ.

ವೃತ್ತಿಪರ ಮಾರ್ಗದರ್ಶನ: ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡದ ಪ್ರಾಮುಖ್ಯತೆ ಕುರಿತು ತಜ್ಞರಾದ ಮೊಹಮ್ಮದ್ ರಫಿ ಪಾಷಾ ಅವರಿಂದ ಉಪನ್ಯಾಸ.

**ಕಲೆ ಮತ್ತು ಪರಂಪರೆ: ಬೀದರನ ವಿಶ್ವಪ್ರಸಿದ್ಧ ಬಿದ್ರಿ ಕಲೆಯ ಉಗಮ ಮತ್ತು ವಿಕಾಸದ ಕುರಿತು ವಿಶೇಷ ಗೋಷ್ಠಿ.**

ಇತಿಹಾಸ ಮತ್ತು ತಂತ್ರಜ್ಞಾನ: 'ಅನುಭವಮಂಟಪ'ದ ಇತಿಹಾಸದಿಂದ ಹಿಡಿದು ಇಂದಿನ ಸೋಶಿಯಲ್ ಮೀಡಿಯಾ ಓದುವ ಹವ್ಯಾಸದ ಮೇಲೆ ಬೀರುತ್ತಿರುವ ಪ್ರಭಾವದವರೆಗೆ ಹತ್ತು ಹಲವು ವಿಷಯಗಳ ಬಗ್ಗೆ ಚರ್ಚೆಗಳು ನಡೆಯಲಿವೆ.

ಕನ್ನಡ ಶಾಲೆಗಳ ಸ್ಥಿತಿಗತಿ: ಮಾಜಿ ರಾಜ್ಯಸಭಾ ಸದಸ್ಯರಾದ ಡಾ. ಬಸವರಾಜ ಪಾಟೀಲ ಸೇಡಂ ಅವರು ಮರೆಯಾಗುತ್ತಿರುವ ಕನ್ನಡ ಶಾಲೆಗಳ ಕುರಿತು ಗಂಭೀರ ಚಿಂತನೆ ನಡೆಸಲಿದ್ದಾರೆ.

ಸಾಹಿತ್ಯ ಮತ್ತು ರಾಜಕೀಯ ವಿಷಯದ ಕುರಿತು ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಎನ್.ರವಿಕುಮಾರ, ಮಾಜಿ ಸಚಿವರಾದ ಬಂಡೆಪ್ಪಾ ಖಾಶೆಂಪುರ ಅವರೊಂದಿಗೆ ಪತ್ರಕರ್ತ ರಮೇಶ ದೊಡ್ಡಪುರ ಸಂವಾದ ನಡೆಸಲಿದ್ದಾರೆ.



### ವಿಶೇಷ ಆಕರ್ಷಣೆ

ಪ್ರತಿದಿನ ಸಂಜೆ 6 ಗಂಟೆಯಿಂದ ಸಾಂಸ್ಕೃತಿಕ ಸೌರಭ ಕಾರ್ಯಕ್ರಮ ನಡೆಯಲಿದ್ದು, ಖ್ಯಾತ ಗಾಯಕಿ ಕುಮಾರಿ ಶಿವಾನಿ ಸ್ವಾಮಿ, ರೇಖಾ ಅಪ್ಪಾರಾವ ಸೌದಿ ಸೇರಿದಂತೆ ಸ್ಥಳಿಯ ಕಲಾವಿದರಿಂದ ವಚನ ಗಾಯನ, ಬೆಂಗಳೂರಿನ ಅನುರಾಗ ಗದ್ದಿಯವರಿಂದ ಗಜಲ್ ಗಾಯನ ಹಾಗೂ ನಾಟ್ಯಶ್ರೀ, ನೂಪುರ ಹಾಗೂ ನೃತ್ಯಾಂಗನ ನೃತ್ಯಾಲಯದ ತಂಡಗಳಿಂದ ನೃತ್ಯ ಪ್ರದರ್ಶನವು ಇರಲಿದೆ.

ಐತಿಹಾಸಿಕ ದಾಖಲಿನತ್ತ ಹೆಜ್ಜೆ ಇಡುತ್ತಿರುವ ಈ ಅಕ್ಷರ ಜಾತ್ರೆಗೆ ಎಲ್ಲ ಓದುಗರು ಸಕುಟುಂಬ ಸಮೇತರಾಗಿ ಆಗಮಿಸಬೇಕೆಂದು ಪುಸ್ತಕ ಸಂತೆಯ ಆಯೋಜಕರಾದ ಗುರುನಾಥ ರಾಜಗೀರಾ ಕೋರಿದ್ದಾರೆ.

# ಮಗುವಿಗೆ ಒಂದು ವರ್ಷದೊಳಗೆ 12 ಮಾರಕ

## ರೋಗಗಳನ್ನು ತಡೆಯಲು ಲಸಿಕೆಯನ್ನು ಹಾಕಿಸಿ-ಬಸಯ್ಯ

ಮಲ್ಲಮ್ಮ ನುಡಿ ವಾರ್ತೆ.
ಸಿಂಧನೂರು



ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಹಾಗೂ ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ್ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಗಾಂಧಿನಗರ ಇವರ ಸಂಯುಕ್ತ ಆಶ್ರಯದಲ್ಲಿ ಅರಳಳ್ಳಿ ಆಯುಷ್ಮಾನ್ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಬರುವ 3ನೇ ಮೈಲಿ ಕ್ಯಾಂಪನ ಅಂಗನವಾಡಿ ಕೇಂದ್ರದಲ್ಲಿ ಸಾರ್ವತ್ರಿಕ ಮಕ್ಕಳ ಲಸಿಕ ಸತ್ರದಲ್ಲಿ ತಾಯಂದಿರು ಹಾಗೂ ಗರ್ಭಿಣಿಯರನ್ನು ಕುರಿತು ಹಾಗೂ ಮಕ್ಕಳನ್ನು ಕುರಿತು ಲಸಿಕೆಯ ಮಹತ್ವ ಮಗುವಿನ ಒಂದು ವರ್ಷದೊಳಗೆ 12 ಮಾರಕ ರೋಗಗಳ ತಡೆಗೆ ಉಚಿತವಾಗಿ ಲಸಿಕೆ ಪಡೆದುಕೊಳ್ಳಲು ಪಾಲಕರಲ್ಲಿ ಮನವಿ ಮಾಡಲಾಯಿತು ಮಕ್ಕಳಲ್ಲಿ ಬಾಲ್ಯದಲ್ಲಿ ಕಂಡುಬರುವ

ಮಾರಣಾಂತಿಕ ಕಾಯಿಲೆಗಳ ನಿಯಂತ್ರಣಕ್ಕೆ ಹುಟ್ಟಿದ ದಿನದಿಂದ ಒಂದು ವರ್ಷದೊಳಗೆ ಯಾವುದೇ ಮಾರಣಾಂತಿಕ ಕಾಯಿಲೆಗಳ ಬಾರದಂತೆ ಕಾಯಿಲೆಗಳ ನಿಯಂತ್ರಣಕ್ಕೆ ಉಚಿತವಾಗಿ ಲಸಿಕೆಯನ್ನು ಆರೋಗ್ಯ ಇಲಾಖೆಯ ಮೂಲಕ ಪಡೆದುಕೊಳ್ಳಲು ಪಾಲಕರಲ್ಲಿ ಮನವಿ ಮಾಡಲಾಯಿತು ಬಸಯ್ಯ ಉಪಜಿಲ್ಲಾ ಆರೋಗ್ಯ ಶಿಕ್ಷಣಧಿಕಾರಿಗಳು ರಾಯಚೂರು ಇವರು ತಾಯಂದಿರನ್ನು ಉದ್ದೇಶಿಸಿ ಮಾತನಾಡಿದರು, ನಂತರ ಗೀತಾ ಹಿರೇಮಠ ಕ್ಷೇತ್ರ ಆರೋಗ್ಯ ಶಿಕ್ಷಣಧಿಕಾರಿ ಮಾತನಾಡಿ ಗಂಭೀರ ಮತ್ತು ಮರಣಾಂತಿಕ ಕಾಯಿಲೆಗಳಿಂದ ಮಕ್ಕಳನ್ನು ರಕ್ಷಿಸಲು ಲಸಿಕೆಯನ್ನು ಹಾಕಿಸುವುದು ಅತ್ಯಂತ ಪರಿಣಾಮಕಾರಿ ಮಾರ್ಗಗಳಲ್ಲಿ ಒಂದಾಗಿದೆ ಪೋಷಕರಿಗೆ ಲಭ್ಯವಿರುವ ಎಲ್ಲಾ ಮಾಹಿತಿಯೊಂದಿಗೆ ತಮ್ಮ ಮಕ್ಕಳಿಗೆ ಲಸಿಕೆ ಹಾಕುವ ನಿರ್ಧಾರವು ಕೆಲವೊಮ್ಮೆ ಕಷ್ಟಕರವೇನಿಸಬಹುದು ಅದ್ಯಾಗಿಯೂ ನಿಮ್ಮ ಮಗುವಿನ ಆರೋಗ್ಯ ಮತ್ತು ಸುರಕ್ಷತೆಗೆ ಲಸಿಕೆಗಳ ಮಹತ್ವವನ್ನು ಅರ್ಥ ಮಾಡಿಕೊಳ್ಳುವುದು ಅಗತ್ಯ ಈ ಬ್ಲಾಗ್ ಪೋಸ್ಟ್(ಭಟಂರ ಠಿಂಣ ಅಂದರೆ ಲೇಖನ, ಬರಹ, ವಿಡಿಯೋಗಳ ಮೂಲಕ ತಿಳಿಯುವುದು )ಮಕ್ಕಳಿಗೆ ಲಸಿಕೆಗಳು ಏಕೆ ಮುಖ್ಯ ತಡೆಗಟ್ಟುವ ರೋಗಗಳು ಮತ್ತು ವೈಯಕ್ತಿಕ ಮತ್ತು ಸಮುದಾಯದ ಆರೋಗ್ಯಕ್ಕೆ ತರುವ ಪ್ರಯೋಜನಗಳನ್ನು ಚರ್ಚಿಸುತ್ತದೆ ಎಂದು ತಿಳಿಸಿದರು

ಲಸಿಕೆಗಳು ಯಾವವು, ಮಕ್ಕಳಿಗೆ ಲಸಿಕೆ ಏಕೆ ಮುಖ್ಯ ಎಂದು ಹೇಳಲಾಯಿತು, ಇದೆ ಜನೆವರಿ ತಿಂಗಳಿನಿಂದ 19–01–2026 ರಿಂದ 31–01–2026 ವರೆಗೆ ಆರಂಭವಾದ ದಡಾರ ರುಬೆಲ್ಲಾ ನಿರ್ಮೂಲನ ಕಾರ್ಯಕ್ರಮದ ಲಸಿಕಾ ಅಭಿಯಾನ ಆರಂಭವಾಗಿದ್ದು ಒಖ 1,ಒಖ 2, ಎರಡು ಡೋಸ್ ಪಡೆದುಕೊಳ್ಳುವಂತೆ ತಾಯಂದಿರಿಗೆ ಹೇಳಲಾಯಿತು ರಕ್ತ ಹೀನತೆಯ ಕುರಿತು, ಗರ್ಭಿಣಿಯರಲ್ಲಿ ಮಕ್ಕಳಲ್ಲಿ ರಕ್ತಹೀನತೆ ಹೋಗಲಾಡಿಸಲು ಐರನ್ ಪಾಲಿಕ್ ಆಸಿಡ್ ಮಾತ್ರೆಗಳನ್ನು ಜೊತೆಗೆ ಐರನ್ ಸಿರಪ್ ತೆಗೆದುಕೊಳ್ಳಲು ಸೂಚಿಸಲಾಯಿತು

# ಉರಿಲಿಂಗಪೆದ್ದಿ ಮಠದ ಪ್ರಶಸ್ತಿ ಮೂವರಿಗೆ ಘೋಷಣೆ

• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾ:



ಹುಲಸೂರು: ತಾಲೂಕಿನ ಬೇಲೂರ ಗ್ರಾಮದಲ್ಲಿ ಪ್ರತಿ ವರ್ಷದಂತೆ ಈವರ್ಷವೂ ಕೂಡ ಶರಣ ಉರಿಲಿಂಗಪೆದ್ದಿ ಮತ್ತು ಶರಣೆ ಕಾಳವ್ವೆ ಉತ್ಸವ,ಲಿಂ.ಪೂಜ್ಯಶ್ರೀ ಶಿವಲಿಂಗೇಶ್ವರ ಶಿವಯೋಗಿಗಳವರ ಪುಣ್ಯ ಸ್ಮರಣೆ ಅಂಗವಾಗಿ ಜರುಗುವ ಪ್ರಥಮ ಪ್ರಕಾಶಕರ ಸಮ್ಮೇಳನವು ಪುಸ್ತಕೋದ್ಯಮಿ ಡಾ.ಬಸವರಾಜ ಕೊನೇಕ ಸರ್ವಾಧ್ಯಕ್ಷತೆಯಲ್ಲಿ ಫೆಬ್ರುವರಿ 7 ಮತ್ತು 8 ರಂದು ಜರುಗಲಿದೆ.ಮಠದ ಪ್ರತಿಷ್ಠಿತ ಉರಿಲಿಂಗಪೆದ್ದಿ ಪ್ರಶಸ್ತಿಗೆ ಧಾರವಾಡದ ಹಿರಿಯ ಸಾಹಿತಿ,ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾದಡಾ.ವೈ.ಎಚ್.ಭಜಂತ್ರಿ ಮತ್ತು ಬಳ್ಳಾರಿ ಜಿಲ್ಲೆಯ ಚನ್ನಪಟ್ಟಣದ ಪಲ್ಲವ ಪ್ರಕಾಶನದ ಪ್ರಕಾಶಕಿ ಎಂ.ರಾಜೇಶ್ವರಿ ವೆಂಕಟೇಶ ಅವರಿಗೆ ಮತ್ತು ಬೆಂಗಳೂರಿನ ಸಾಹಿತಿ ಚಿಂತಕಿ ಪದ್ಮಶ್ರೀ ರಾಗಂ ಅವರಿಗೆ ಕಾಳವ್ವೆ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದೆಂದು ಪೀಠಾಧಿಪತಿ ಪೂಜ್ಯಶ್ರೀ ಪಂಚಾಕ್ಷರಿ ಸ್ವಾಮೀಜಿ ಮತ್ತು ಸಂಯೋಜಕ ಡಾ.ಗವಿಸಿದ್ಧಪ್ಪ ಪಾಟೀಲ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಉರಿಲಿಂಗಪೆದ್ದಿ ಪ್ರಶಸ್ತಿ ಪುರಸ್ಕೃತರು:–**

ಡಾ.ವೈ.ಎಚ್.ಭಜಂತ್ರಿ:ಇವರು ಮೂಲತಃ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ತಳಕಟನಾಳ ಗ್ರಾಮದಲ್ಲಿ 1965 ರಲ್ಲಿ ಜನನ. ಎಂ.ಎ.ಪಿಎಚ್.ಡಿ ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಪಡೆದು ಐದು ವರ್ಷ ಖಾಸಗಿಯಾಗಿ ಉಪನ್ಯಾಸಕರಾಗಿ ಸೇವೆ. 1996 ರಿಂದ 2025 ರವರೆಗೆ ಇಪ್ಪತ್ತೊಂಬತ್ತು ವರ್ಷ ಸರಕಾರಿ ಪ್ರಥಮ ದರ್ಜೆ ವಿವಿಧ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.ಶೈಕ್ಷಣಿಕ ಅನುಭವ ಹೊಂದಿದವರು. ಎನ್.ಎಸ್.ಎಸ್.ಅಧಿಕಾರಿಗಳಾಗಿ,ರಾಯಚೂರು ಮತ್ತು ಹಂಪಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ,ದಲಿತ ಸಾಹಿತ್ಯ ಪರಿಷತ್ತಿನ ರಾಜ್ಯ ಉಪಾಧ್ಯಕ್ಷರಾಗಿ,ಧಾರವಾಡ ಜಿಲ್ಲೆಯ ಕಸಾಪ ಗೌ.ಕಾರ್ಯದರ್ಶಿಯಾಗಿ ಅನೇಕ ಸಂಘಟನೆಯ ಸಂಘಟಕರು.ಉತ್ತಮ ಭಾಷಣಕಾರರು,ಕವಿಯಾಗಿ, ಕಥೆಗಾರರಾಗಿ,ಲೇಖಕರಾಗಿ,ವಿದ್ವಾಂಸರಾಗಿ, ಸಂಪಾದಕರಾಗಿ ಮೂವತ್ತೈದಕ್ಕೂ ಹೆಚ್ಚು ಪುಸ್ತಕ ಪ್ರಕಟಿಸಿದ್ದಾರೆ.ಹಲವು ಪ್ರಶಸ್ತಿ ಗೌರವಗಳಿಗೆ ಭಾಜನರಾದವರು.ವೈಚಾರಿಕ ಚಿಂತಕರು.ಇವರ ಸಾಹಿತ್ಯ–ಸಂಘಟನೆ ಸೇವೆ ಪರಿಗಣಿಸಿ ಉರಿಲಿಂಗಪೆದ್ದಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.ಎಂ.ರಾಜೇಶ್ವರಿ: ಇವರು ಮೂಲತಃ ಬಳ್ಳಾರಿ ಜಿಲ್ಲೆಯ ಚನ್ನಪಟ್ಟಣ ಗ್ರಾಮದವರು.ಪದವಿ ಹೊಂದಿ ಬಾಳ ಸಂಗಾತಿ ಡಾಕೆ.ವೆಂಕಟೇಶ ಅವರನ್ನು ವಿವಾಹವಾಗಿ ಪಲ್ಲವ ಪ್ರಕಾಶನವನ್ನು ಕಳೆದ ಒಂದುವರೆ ದಶಕಗಳಿಂದಲೇ ಪ್ರಾರಂಭಿಸಿ ಸುಮಾರ ಎರಡನೂರಕ್ಕೂ ಹೆಚ್ಚು ಮೌಲಿಕ ಮತ್ತು ಅಂದ ಚಂದದ ಗುಣಮಟ್ಟದ ಪುಸ್ತಕ ಪ್ರಕಟಿಸುತ್ತಾ ಬಂದಿದ್ದಾರೆ.ಈಗಾಗಲೇ ಪುಸ್ತಕ ಪ್ತಕಾಶನದಲ್ಲಿ ಒಂದು ಯುಗವನ್ನೇ ನಿರ್ಮಿಸಿ ಸಾಹಿತ್ಯ ಪ್ರಿಯರಿಗೆ,ಓದುಗರಿಗೆ ಮನೆಮಾತಾದ ಪ್ರಕಾಶಕಿ.ಹಲವು ಪ್ರಶಸ್ತಿ ಗೌರವಗಳಿಗೆ ಭಾಜನರಾದವರು.ಇವರ ಗುಣ ಮಟ್ಟದ ಪುಸ್ತಕ ಪ್ರಕಾಶನದ ಕಾರ್ಯಕ್ಕೆ ಉರಿಲಿಂಗಪೆದ್ದಿ ಪ್ರಶಸ್ತಿ ನೀಡಲಾಗುವುದು. **ಕಾಳವ್ವೆ ಪ್ರಶಸ್ತಿ ಪುರಸ್ಕೃತರು:** ಪದ್ಮ ಶ್ರೀ ರಾಗಂ: ಎಂ.ಸಿ.ಎ ಪದವೀಧರೆ. ಹಲವು ಕಡೆ ಉಪನ್ಯಾಸಕರಾಗಿ ಸೇವೆ.ಇವರು ಪ್ರಸ್ತುತ ಬೆಂಗಳೂರಿನ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ ಸಹಾಯಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. "ಜಾಣ ಜಾಣೆಯರ ಜನಪದ ಕಥೆಗಳು" ಕಥಾ ಸಂಕಲನ 2012,,"ಇಂತಿ ನಿನ್ನ ಬಾಪು" ಗಾಂಧೀಜಿಯವರ ಪತ್ರಗಳ ಸಂಗ್ರಹ 2013, "ಪ್ರೀತಿ ನಲವತ್ತು ರೀತಿ' ರಾಗಂ ಅವರು ಬರೆದ ಪ್ರೀತಿ ಕುರಿತಾದ ಲೇಖನಗಳ ಸಂಗ್ರಹ 2015 ಹೊರ ತಂದಿದ್ದಾರೆ. "ಕಂಪ್ಯೂಟರ್ ಭಾಷೆ ಮತ್ತು ಜಾಗತೀಕರಣ" ವಿಷಯದ ಪ್ರಬಂಧವನ್ನು ಅಖಖಐ ಮೈಸೂರು ರಾಷ್ಟ್ರೀಯ ಸೆಮಿನಾರ್‌ನಲ್ಲಿ ಪ್ರಸ್ತುತಪಡಿಸಿದ್ದು, ಸಮಕಾಲೀನ ಸಮಾಜ ಮತ್ತು ತಂತ್ರಜ್ಞಾನ ಸಂವೇದನೆಯನ್ನು ಸಾಹಿತ್ಯದ ನೆಲೆಯಲ್ಲಿ ವಿಶ್ಲೇಷಿಸಿದ ಪ್ರಯತ್ನ.ವಿವಿಧ ಸಾಹಿತ್ಯಕ ಹಾಗೂ ಶೈಕ್ಷಣಿಕ ವೇದಿಕೆಗಳಲ್ಲಿ ಭಾಗವಹಿಸಿ ಪ್ರಬಂಧ ವಿಮರ್ಶೆ ಮತ್ತು ಚಿಂತನಾತ್ಮಕ ಬರಹಗಳ ಮೂಲಕ ಕನ್ನಡ ಭಾಷೆ–ಸಂಸ್ಕೃತಿಗೆ ಕೊಡುಗೆ. ಜೋಳಿಗೆ ಪ್ರತಿಷ್ಠಾನವನ್ನು 2013 ರಲ್ಲಿ ಸ್ಥಾಪಿಸಿ, ಅದರ ಅಡಿಯಲ್ಲಿ ಅನೇಕ ಸಾಹಿತ್ಯಕ ಜಾನಪದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡುಬಂದಿದ್ದಾರೆ.ಪಿ.ಆರ್. ಪಬ್ಲಿಕೇಶನ್ ಬೆಂಗಳೂರು 2021 ರಲ್ಲಿ ಪ್ರಾರಂಭಿಸಿ, ಅನೇಕ ಯುವ ಮತ್ತು ಹಿರಿಯ ಸಾಹಿತಿಗಳ ಕೃತಿಗಳನ್ನು ಹೊರತರುವಲ್ಲಿ ತಮ್ಮ ಜವಾಬ್ದಾರಿಯನ್ನು ನಿಭಾಯಿಸಿದ್ದಾರೆ.ವಿಶೇಷ ಆಸಕ್ತಿ ಕ್ಷೇತ್ರಗಳು: ಕನ್ನಡ ಕಥಾ ಸಾಹಿತ್ಯ, ಜಾನಪದ ಅಧ್ಯಯನ ಮಹಿಳಾ ಸಂವೇದನೆ, ಸಮಕಾಲೀನ ಸಾಮಾಜಿಕ ಚಿಂತನೆ, ಸಾಂಸ್ಕೃತಿಕ ವಿಮರ್ಶೆ.ಇವರ ಮಹಿಳಾ ಪರ ಸೇವೆ ಪರಿಗಣಿಸಿ ಶರಣೆ ಕಾಳವ್ವೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

# ಕೆಬಿಎನ್ ಪಿಎಲ್‌ನಲ್ಲಿ ರೌಝಾ ಸ್ಟಾರ್ಸ್ ಹೊಸ ಇತಿಹಾಸ ಸೃಷ್ಟಿ



291 ರನ್‌ಗಳ ಭಾರೀ ಮೊತ್ತ, ಸ್ಟೇಷನ್ ಈಗಲ್ಸ್‌ನ್ನು 101 ರನ್‌ಗಳಿಂದ ಮಣಿಸಿದ ರೌಝಾ ಸ್ಟಾರ್ಸ್

• ಮಲ್ಲಮ್ಮ ನುಡಿ ವಾರ್ತೆ ,ಗುಲ್ಬರ್ಗಾ:

ಕೆಬಿಎನ್ ಪ್ರೀಮಿಯರ್ ಲೀಗ್‌ನ ಎಂಟನೇ ಆವೃತ್ತಿಯಲ್ಲಿ ಇಂದು ಒಂದು ಹೊಸ ಇತಿಹಾಸ ನಿರ್ಮಾಣವಾಗಿದೆ. ರೌಝಾ ಸ್ಟಾರ್ಸ್ ತಂಡ 291 ರನ್‌ಗಳ ಭಾರೀ ಮೊತ್ತವನ್ನು ಕಲೆಹಾಕುವ ಮೂಲಕ ಕೆಬಿಎನ್ ಪಿಎಲ್ ಇತಿಹಾಸದಲ್ಲೇ ಅತಿದೊಡ್ಡ ಸ್ಕೋರ್ ದಾಖಲಿಸಿದೆ. ಇದಕ್ಕೂ ಮೊದಲು 285 ರನ್‌ಗಳೇ ಟೂರ್ನಿಯ ಗರಿಷ್ಠ ಮೊತ್ತವಾಗಿತ್ತು. ಇಂದು ನಡೆದ ಅತ್ಯಂತ ರೋಚಕ ಪಂದ್ಯದಲ್ಲಿ ರೌಝಾ ಸ್ಟಾರ್ಸ್ 291 ರನ್‌ಗಳನ್ನು ಗಳಿಸಿ, ಸ್ಟೇಷನ್ ಈಗಲ್ಸ್ ತಂಡವನ್ನು 101 ರನ್‌ಗಳ ಭಾರೀ ಅಂತರದಿಂದ ಸೋಲಿಸಿ ಟೂರ್ನಿಯಲ್ಲಿ ತನ್ನ ಪ್ರಾಬಲ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿದೆ.

ಮೊದಲು ಬ್ಯಾಟಿಂಗ್ ಮಾಡಿದ ರೌಝಾ ಸ್ಟಾರ್ಸ್ ತಂಡ ನಿಗದಿತ 20 ಓವರ್‌ಗಳಲ್ಲಿ ಕೇವಲ 2 ವಿಕೆಟ್ ಕಳೆದುಕೊಂಡು 291 ರನ್‌ಗಳ ಪರ್ವತದಂತಹ ಮೊತ್ತವನ್ನು ಕಟ್ಟಿತು. ಈ ಭಾರೀ ಗುರಿಯನ್ನು ಹಿಂಬಾಲಿಸಿದ ಸ್ಟೇಷನ್ ಈಗಲ್ಸ್ ತಂಡ ಸಾಕಷ್ಟು ಪ್ರಯತ್ನಿಸಿದರೂ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 190 ರನ್‌ಗಳಿಗೆ ಮಾತ್ರ ಸೀಮಿತವಾಯಿತು.

ರೌಝಾ ಸ್ಟಾರ್ಸ್ ಪರ ಲುವ್ನಿತ್ ಸಿಸೋದಿಯಾ ಈ ಪಂದ್ಯದಲ್ಲಿ ನಿಸ್ಸಂದೇಹವಾಗಿ ಹೀರೋ ಆಗಿದ್ದರು. ಸಿಸೋದಿಯಾ ರನ್‌ಗಳ ಮಳೆಯನ್ನೇ ಸುರಿಸಿದರು. ಅವರು 66 ಬಾಲ್‌ಗಳಲ್ಲಿ 163 ರನ್‌ಗಳ ಅದ್ಭುತ ಇನ್ನಿಂಗ್ಸ್ ಆಡಿದರು. ಈ ವೇಳೆ 15 ಫೋರ್ ಮತ್ತು 14 ಭರ್ಜರಿ ಸಿಕ್ಸರ್‌ಗಳು ಅವರ ಬ್ಯಾಟ್‌ನಿಂದ ಹೊರಬಂದವು. ಮೈದಾನದ ಎಲ್ಲ ದಿಕ್ಕುಗಳಿಗೂ ಆಕರ್ಷಕ ಶಾಟ್‌ಗಳನ್ನು ಆಡಿದ ಅವರು ಫೀಲ್ಡರ್‌ಗಳನ್ನು ಅಸಹಾಯಕರಾಗಿಸಿದರು. ಅವರ ಆಕ್ರಮಣಕಾರಿ ಬ್ಯಾಟಿಂಗ್‌ನ್ನು ಕಂಡು ಕ್ರಿಕೆಟ್ ಅಭಿಮಾನಿಗಳು ಮನಸಾರೆ ಚಪ್ಪಾಳೆ ತಟ್ಟಿದರು. ಡಬಲ್ ಸೆಂಚುರಿಯ ಕನಸಿನಲ್ಲಿದ್ದ ಸಿಸೋದಿಯಾ, 17ನೇ ಓವರ್‌ನಲ್ಲಿ ಪುನೀತ್ ಕುಮಾರ್ ಎಸೆತದಲ್ಲಿ ಕ್ಯಾಚ್ ನೀಡಿ ಪೆವಿಲಿಯನ್‌ಗೆ ಮರಳಿದರು. ಆದರೆ ಅಷ್ಟರಲ್ಲೇ ಪಂದ್ಯ ಸಂಪೂರ್ಣವಾಗಿ ರೌಝಾ ಸ್ಟಾರ್ಸ್ ಹಿಡಿತದಲ್ಲಿತ್ತು.

ಸಿಸೋದಿಯಾ ಬಳಿಕ ತಿಪ್ಪಾ ರೆಡ್ಡಿ ಜವಾಬ್ದಾರಿಯುತ ಹಾಗೂ ಆಕ್ರಮಣಕಾರಿ ಬ್ಯಾಟಿಂಗ್ ಪ್ರದರ್ಶಿಸಿ 41 ಬಾಲ್‌ಗಳಲ್ಲಿ ಅಜೇಯ 77 ರನ್‌ಗಳನ್ನು ಗಳಿಸಿದರು. ಯೂನಸ್ ಅಲಿ ಬೇಗ್ ಕೇವಲ 10 ಬಾಲ್‌ಗಳಲ್ಲಿ 38 ರನ್‌ಗಳನ್ನು ಸಿಡಿಸಿ ತಂಡದ ಮೊತ್ತವನ್ನು 291ಕ್ಕೆ ಕೊಂಡೊಯ್ದರು. ಸ್ಟೇಷನ್ ಈಗಲ್ಸ್ ಪರ ಪುನೀತ್ ಕುಮಾರ್ ಮತ್ತು ಶರಣ ಬಸವ ತಲಾ ಒಂದೊಂದು ವಿಕೆಟ್ ಪಡೆದರೂ, ಒಟ್ಟಾರೆ ಬೌಲರ್‌ಗಳು ಪರಿಣಾಮಕಾರಿಯಾಗಿ ಎದುರಿಸಲು ವಿಫಲರಾದರು. ಆರಂಭದಲ್ಲೇ ರೌಝಾ ಸ್ಟಾರ್ಸ್‌ಗೆ ಸಣ್ಣ ಆಘಾತವಾಗಿದ್ದು, ವಿಕೆಟ್ ಕೀಪರ್ ಮೊಹಮ್ಮದ್ ಮುನೀರ್ ಕೇವಲ 3 ರನ್‌ಗಳಿಗೆ ಔಟ್ ಆಗಿದ್ದರು.292 ರನ್‌ಗಳ ಕಠಿಣ ಗುರಿಯನ್ನು ಬೆನ್ನಟ್ಟಿದ ಸ್ಟೇಷನ್ ಈಗಲ್ಸ್ ಆರಂಭದಲ್ಲಿ ವೇಗವಾಗಿ ಆಡಿತು. ತುಷಾರ್ ಸಿಂಗ್ 12 ಬಾಲ್‌ಗಳಲ್ಲಿ 30 ರನ್‌ಗಳ ತ್ವರಿತ ಇನ್ನಿಂಗ್ಸ್ ಆಡಿ ಭರವಸೆ ನೀಡಿದರು. ಆದರೆ ವಿಕ್ಕಿ ಅಟ್ವಾಲ್ ಎಸೆತದಲ್ಲಿ ಕ್ಯಾಚ್ ಆಗಿ ಔಟ್ ಆದರು. ಕೆದಾರನಾಥ್ ಎನ್ ಕೂಡ ಶೀಘ್ರದಲ್ಲೇ ಸಂತೋಖ್ ಸಿಂಗ್ ಬೌಲಿಂಗ್‌ನಲ್ಲಿ ಪೆವಿಲಿಯನ್ ಸೇರಿದರು. ನಾಯಕ ಮೋಹಿತ್ ಬಿ.ಎ 18 ಬಾಲ್‌ಗಳಲ್ಲಿ 43 ರನ್‌ಗಳ ಚುರುಕು ಇನ್ನಿಂಗ್ಸ್ ಆಡಿದರೂ, ಶ್ರೀಧರ್ ಜಗಟಾಪ್ ಎಸೆತದಲ್ಲಿ ಕ್ಯಾಚ್ ಹಿಡಿಯಲ್ಪಟ್ಟರು. ಧೀರಜ್ ಎಂ, ಶರಣ ಬಸವ ಹಾಗೂ ಅಮಯ್ ಕೂಡ ಕ್ರಮೇಣ ಔಟ್ ಆಗುತ್ತಾ ಹೋದರು.ಮಧ್ಯ ಓವರ್‌ಗಳಲ್ಲಿ ಸಯೀದ್ ಜಹಾಂಗೀರ್‌ದಾರ್ ಮತ್ತು ಸಿದ್ಧಾಂತ್ ನವಾಳೆ ಸ್ವಲ್ಪ ಪ್ರತಿರೋಧ ನೀಡಿದರೂ ಅಗತ್ಯ ರನ್‌ರೇಟ್ ಅತಿಯಾಗಿ ಹೆಚ್ಚಾಗಿತ್ತು. ಮರಿ ಬಸವ ಶ್ರೇಷ್ಠ ಬೌಲಿಂಗ್ ಪ್ರದರ್ಶನ ನೀಡಿ 4 ಓವರ್‌ಗಳಲ್ಲಿ 40 ರನ್ ನೀಡಿ 3 ಪ್ರಮುಖ ವಿಕೆಟ್‌ಗಳನ್ನು ಕಬಳಿಸಿ ಸ್ಟೇಷನ್ ಈಗಲ್ಸ್ ಬೆನ್ನೆಲುಬು ಮುರಿದರು. ತಿಪ್ಪಾ ರೆಡ್ಡಿ ಮತ್ತು ಶ್ರೀಧರ್ ಜಗಟಾಪ್ ತಲಾ ಎರಡು ವಿಕೆಟ್‌ಗಳನ್ನು ಪಡೆದು ತಂಡದ ಗೆಲುವಿಗೆ ಕೈಜೋಡಿಸಿದರು.ಈ ರೀತಿಯಾಗಿ ರೌಝಾ ಸ್ಟಾರ್ಸ್ ಎಲ್ಲಾ ವಿಭಾಗಗಳಲ್ಲೂ ಮೇಲುಗೈ ಸಾಧಿಸಿ ಸ್ಟೇಷನ್ ಈಗಲ್ಸ್ ತಂಡವನ್ನು ಏಕಪಕ್ಷೀಯವಾಗಿ ಸೋಲಿಸಿ, ಕ್ರಿಕೆಟ್ ಅಭಿಮಾನಿಗಳಿಗೆ ಮರೆಯಲಾಗದ ಪಂದ್ಯವನ್ನು ಕಾಣುವ ಅವಕಾಶ ನೀಡಿತು. ಅದ್ಭುತ ಬ್ಯಾಟಿಂಗ್ ಪ್ರದರ್ಶನಕ್ಕಾಗಿ ಲುವ್ನಿತ್ ಸಿಸೋದಿಯಾ ಅವರಿಗೆ 'ಮ್ಯಾನ್ ಆಫ್ ದ ಮ್ಯಾಚ್' ಪ್ರಶಸ್ತಿ ನೀಡಲಾಯಿತು.

# ಜ.27ರಿಂದ ಜಿಲ್ಲಾ ಮಟ್ಟದ ಸರಕಾರಿ ನೌಕರರ ಕ್ರೀಡಾಕೂಟ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ,



ಬೀದರ್ ನಗರದ ನೆಹರು ಕ್ರೀಡಾಂಗಣದಲ್ಲಿ ಜ.27 ಮತ್ತು 28ರಂದು ರಾಜ್ಯ ಸರಕಾರಿ ನೌಕರರ ಸಂಘ ಮತ್ತು ಯುವ ಸಬಲೀಕರಣ ಇಲಾಖೆ ಸಹಯೋಗದಲ್ಲಿ ಜಿಲ್ಲಾ ಮಟ್ಟದ ಸರಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು ಹಮ್ಮಿಕೊಳ್ಳಲಾಗಿದೆ ಆಸಕ್ತ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ತಾಲೂಕು ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ ಬನ್ನಾಳೆ ಮನವಿ ಮಾಡಿದ್ದಾರೆ. ಕ್ರೀಡಾಕೂಟದಲ್ಲಿ ಹೆಸರು ನೋಂದಣಿಗೆ ಜ.25 ಕೊನೆಯ ದಿನವಾಗಿದ್ದು ಈ ಕೆಳಗಿನ https://bidarsports2026.wasmer.app ಲಿಂಕ್ ಬಳಸಿ ಆನ್‌ಲೈನ್ ಮೂಲಕ ಹೆಸರು ನೋಂದಾಯಿಸಬೇಕು ಎಂದು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ಸಂಯೋಜಕರ ಹುದ್ದೆಗೆ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ,ರಾಯಚೂರು:

ಜಿಲ್ಲೆಯ ಸಿಂಧನೂರು ತಾಲೂಕಿನ ತುರ್ವಿಹಾಳ ಶಿಶು ಅಭಿವೃದ್ಧಿ ಯೋಜನಾ ಕಚೇರಿಯಲ್ಲಿ ಪೋಷಣ್ ಅಭಿಯಾನ ಯೋಜನೆಯಡಿ ತಾಲ್ಲೂಕು ಕಾರ್ಯಕ್ರಮ ಸಂಯೋಜಕರ ಒಂದು ಹುದ್ದೆ ಖಾಲಿಯಿದ್ದು, ಈ ಹುದ್ದೆಯು ನೇರಗುತ್ತಿಗೆ ಅಥವಾ ಗೌರವಧನ ಸೇವೆಯ ಆಧಾರದಲ್ಲಿ ನೇಮಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.ಆಸಕ್ತ ಅಭ್ಯರ್ಥಿಗಳು ಯಾವುದಾದರೂ ಪದವಿ ಹೊಂದಿರತಕ್ಕದ್ದು, 2 ವರ್ಷದ ತಾಂತ್ರಿಕ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವ ಕಡ್ಡಾಯ ಹೊಂದಿರತಕ್ಕದ್ದು, ಸ್ಥಳೀಯ ಅಭ್ಯರ್ಥಿಗೆ ಆದ್ಯತೆ ನೀಡಲಾಗುವುದು, ನಿಗದಿತ ಅರ್ಜಿ ನಮೂನೆಯನ್ನು ಉಪ ನಿರ್ದೇಶಕರ ಕಚೇರಿ ಹಾಗೂ ಶಿಶು ಅಭಿವೃದ್ಧಿ ಯೋಜನೆಯ ತುರ್ವಿಹಾಳ ಕಚೇರಿಯಲ್ಲಿ ಪಡೆದು ಅರ್ಜಿಗಳನ್ನು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಖುದ್ದಾಗಿ ಕಚೇರಿ ಸಮಯದಲ್ಲಿ ಜನವರಿ 31ರ ಸಂಜೆ 05.30ರೊಳಗಾಗಿ ಸಲ್ಲಿಸಬಹುದಾಗಿದೆ.ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರಾಯಚೂರು, ದೂರವಾಣಿ ಸಂಖ್ಯೆ: 08532–295646 ಅಥವಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ತುರ್ವಿಹಾಳ ಕಚೇರಿ ಇವರನ್ನು ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜ, 26 ರಂದು ಗಣರಾಜ್ಯೋತ್ಸವದ ಧ್ವಜಾರೋಹಣ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಕಲಬುರಗಿ ನಗರದ ಡಿ.ಎ.ಆರ್. ಪೊಲೀಸ್ ಪರೇಡ್ ಮೈದಾನದಲ್ಲಿ ಜನವರಿ 26ರಂದು ಸೋಮವಾರ ಬೆಳಿಗ್ಗೆ 9 ಗಂಟೆಗೆ ಭಾರತದ 77ನೇ ಗಣರಾಜ್ಯೋತ್ಸವ ದಿನಾಚರಣೆಯ ರಾಷ್ಟ್ರ ಧ್ವಜಾರೋಹಣವನ್ನು ನೆರವೇರಿಸುವರು.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ರಾಜ್ಯಸಭಾ ಸದಸ್ಯ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಘನ ಉಪಸ್ಥಿತಿ ವಹಿಸುವರು. ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಖಾತೆ ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ, ಆಳಂದ ಶಾಸಕ ಹಾಗೂ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾದ ಬಿ.ಆರ್. ಪಾಟೀಲ, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ನಿಯಮಿತದ ಅಧ್ಯಕ್ಷೆ ಹಾಗೂ ಉತ್ತರ ಶಾಸಕಿ ಕನೀಜ್ ಫಾತೀಮಾ, ಜೇವರ್ಗಿ ಶಾಸಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಜಯಸಿಂಗ್ ಅವರು ಗೌರವ ಉಪಸ್ಥಿತಿವಹಿಸುವರು.

ಕಲಬುರಗಿ ಲೋಕಸಭಾ ಸದಸ್ಯ ರಾಧಾಕೃಷ್ಣ ದೊಡ್ಡಮನಿ, ಬೀದರ ಲೋಕಸಭಾ ಸದಸ್ಯ ಸಾಗರ ಖಂಡ್ರೆ, ಶಾಸಕರುಗಳಾದ ಎಂ.ವೈ. ಪಾಟೀಲ, ಬಸವರಾಜ ಮತ್ತಿಮಡು, ಡಾ. ಅವಿನಾಶ ಉಮೇಶ ಜಾಧವ, ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಶಾಸಕರುಗಳಾದ ಶಶೀಲ ಜಿ. ನಮೋಶಿ, ಡಾ. ಬಿ.ಜಿ.ಪಾಟೀಲ, ಡಾ. ಚಂದ್ರಶೇಖರ ಪಾಟೀಲ ಹುಮನಾಬಾದ, ತಿಮ್ಮಣ್ಣಪ್ಪ ಕಮಕನೂರ, ಸುನೀಲ್ ವಲ್ಲ್ಯಾಪುರೆ, ಡಾ. ತಳವಾರ ಸಾಬಣ್ಣ, ಜಗದೇವ ಗುತ್ತೇದಾರ್, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವಿಂದ್ರಪ್ಪ ಮರತೂರ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷ ಸೈಯದ್ ಮುಹಮ್ಮದ್ ಅಲಿ ಅಲ್ ಹುಸೇನಿ, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಬ್ದುಲ್ ರಶೀದ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ್ ಎಂ.ವೈ. ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಸೈಯ್ಯದ್ ಮಹೆಬೂಬ್ ಚಿಸ್ತಿ ಸಾಹೇಬ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್ ಹಾಗೂ ಮಹಾನಗರಪಾಲಿಕೆ ಮಹಾಪೌರ ವರ್ಷಾ ರಾಜೀವ ಜಾನೆ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್, ಕಲಬುರಗಿ ಈಶಾನ್ಯ ವಲಯದ ಪೊಲೀಸ್ ಉಪ ಮಹಾನಿರೀಕ್ಷಕ ಶಾಂತನು ಸಿನ್ಹಾ, ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಭಾಜಪೇಯಿ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿ ನಲಿನ್ ಅತುಲ್, ಕೆ.ಕೆ.ಆರ್.ಟಿ.ಸಿ. ವ್ಯವಸ್ಥಾಪಕ ನಿರ್ದೇಶಕಿ ಡಾ. ಬಿ. ಸುಶೀಲಾ, ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತ ಪಾಂಡ್ವೆ ರಾಹುಲ್ ತುಕಾರಾಮ್, ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್, ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವರ್ ಸಿಂಗ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸುಲು ಹಾಗೂ ಮಹಾನಗರ ಪಾಲಿಕೆಯ ಆಯುಕ್ತರಾದ ಅವಿನಾಶ ಶಿಂಧೆ ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು.

# ಅಂಬಿಗರ ಚೌಡಯ್ಯ ಜಯಂತಿ ಆಚರಣೆ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ತಾಲೂಕಿನ ಬಳಿಚಕ್ರ ಗ್ರಾಮದ ಬಹುಜನ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ)ಯ ಜ್ಞಾನ ದೀಪ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ನಿಜಶರಣ ಅಂಬಿಗರ ಚೌಡಯ್ಯ ಜಯಂತಿಯನ್ನು ಆಚಾರಣೆ ಮಾಡಲಾಯಿತು. ಶಾಲೆಯ ಅಧ್ಯಕ್ಷರಾದ ಭೀಮರಾಯ ಕೊಟಗಾರ. ಮುಖ್ಯಗುರುಗಳಾದ ಶ್ರೀ ಮತಿ ಅಶ್ವಿನಿ ಬಿ ಕೋಟಗಾರ ಸಹ ಶಿಕ್ಷಕರು ಗೌರಮ್ಮ, ರೇಣುಕಾ ಮುಂತಾದವರು ಇದ್ದರು.



• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:**

ಇಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾದ ಈಶ್ವರ ಖಂಡ್ರೆ ಅವರನ್ನು ಗುರುವಾರದಂದು ಬೆಂಗಳೂರಿನಲ್ಲಿ ಶಾಸಕರಾದ ಡಾ.ಸಿದ್ದು ಪಾಟೀಲ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದ್ದರು. ಈ ಸಂದರ್ಭದಲ್ಲಿ ಪಕ್ಷದ ಬೀದರ ದಕ್ಷಿಣ ಕ್ಷೇತ್ರದ ಜನಪ್ರಿಯ ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ , ಮಾಜಿ ಬೀದರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರಾದ ಶ್ರೀ ಬಾಬು ವಾಲಿ ಉಪಸ್ಥಿತರಿದ್ದರು.

# ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಮಳಿಗೆಗಳ ಮೇಲೆ ನಗರ ಸಭೆ ದಾಳಿ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ಯಾದಗಿರಿ ನಗರ ಸಭೆ ಪೌರಾಯುಕ್ತ ಉಮೇಶ್ ಚವಾಣ ಹಾಗೂ ಪರಿಸರ ಅಭಿಯಂತರರು ಪ್ರಶಾಂತ್ ಸೂರ್ಯವಂಶಿ, ಕರ್ನಾಟಕ ರಾಜ್ಯ ನಿಯಂತ್ರಣ ಮಂಡಳಿ ನೇತೃತ್ವ ತಂಡವು ಜನವರಿ 20 ರಂದು ನಿಷೇಧಿತ ಮೈಕ್ರೋ ಪ್ಲಾಸ್ಟಿಕ್ ಅನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಮಳಿಗೆಗಳ ಮೇಲೆ ದಾಳಿ ನಡೆಸಿ 500ಕೆಜಿ ಪ್ಲಾಸ್ಟಿಕ್ ವಶಪಡಿಸಿಕೊಂಡು ಹಾಗೂ 10000/–ಸಾವಿರ ರೂಪಾಯಿ ದಂಡ ವಿಧಿಸಲಾಯಿತು. ಇದು ಮುಂದುವರೆದರೆ ಪ್ರಕರಣ ದಾಖಲಿಸಲಾಗುವುದು ಎಂದು ಅಂಗಡಿ ಮಾಲೀಕರಿಗೆ ಎಚ್ಚರಿಕೆ ನೀಡಿದರು. ಈ ವೇಳೆಯಲ್ಲಿ ಆರೋಗ್ಯ ನಿರೀಕ್ಷಕರಾದ ಮಂಜುನಾಥ್ ಚವಾಣ್, ಶಿವಪುತ್ರ ಸೂಪರ್ವೈ, ಅರುಣ್ ಗೌಡಗೇರಾ, ಪೌರಕಾರ್ಮಿರು ಇದ್ದರು.

# ಕ್ರೀಡೆಯಲ್ಲಿ ಕಲಿತ ಶಿಸ್ತು, ಒಗ್ಗಟ್ಟು ಕಚೇರಿಗೆ ಒಯ್ಯಬೇಕು: ಕೊಟ್ಟೆಪ್ಪಗೋಳ

(ವರದಿ. ಡಿ. ಕೆ. ಪ್ರಹ್ಲಾದ). ಮಲ್ಲಮ್ಮ ನುಡಿ ವಾರ್ತೆ.



ಬಸವಕಲ್ಯಾಣ :– ಕ್ರೀಡೆಯಲ್ಲಿ ಸೋಲು–ಗೆಲವು ಸಾಮಾನ್ಯ ಆದರೆ ಕ್ರೀಡೆಯಲ್ಲಿ ಕಲಿತ ಶಿಸ್ತು ಮತ್ತು ಒಗ್ಗಟ್ಟಿನ ಗುಣಗಳು ಕಚೇರಿಗೆ ಒಯ್ಯಬೇಕು ಎಂದು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳಾದ ಶರಣಬಸಪ್ಪ ಕೊಟ್ಟೆಪ್ಪಗೋಳ ಹೇಳಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಜಿಲ್ಲಾ ಪಂಚಾಯತ್ ಬೀದರ್ ಹಾಗೂ ತಾಲ್ಲೂಕು ಪಂಚಾಯತ್ ಸಂಯುಕ್ತಾಶ್ರಯದಲ್ಲಿ ನಗರದ ದೊಡ್ಡಪ್ಪ ಅಪ್ಪ ಕ್ರೀಡಾಂಗಣದಲ್ಲಿ ಮೂರು ದಿವಸ ಹಮ್ಮಿಕೊಂಟಿದ್ದ ಕ್ರೀಡಾ ಕೂಟದ ಸಮಾರೋಪ ಸಮಾರಂಭದ ನಿಮಿತ್ಯ ನಡೆದ ಪ್ರಶಸ್ತಿ ಪ್ರದಾನ ಮತ್ತು ಸಾಂಸ್ಕೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ದಿನನಿತ್ಯ ನಾವು ನಮ್ಮ ದೇಹವನ್ನು ದಂಡಿಸಬೇಕು ಮತ್ತು ಶ್ರಮದಾನ ಮಾಡಬೇಕು ಅಂದಾಗ ಮಾತ್ರ ನಾವು ದೈಹಿಕ ಹಾಗೂ ಮಾನಸಿಕವಾಗಿ ಸದೃಢವಾಗಿರುತ್ತೆವೆ ಎಂದು ತಿಳಿಸಿದರು.

ಪರಿಸ್ಥಿತಿಯ ಅನುಗುಣವಾಗಿ ನಾವಿಂದು ಕೆಲಸದ ಒತ್ತಡಕ್ಕೆ ಒಳಗಾಗಿರುವುದು ಸಾಮಾನ್ಯ. ಆದರೆ ಅದರಿಂದ ಹೊರ ಬರಬೇಕಾದರೆ ಇತರಹ ಕ್ರೀಡಾ ಉತ್ಸವಗಳು ಮೇಲಿಂದ ಮೇಲೆ ನಡೆಸಬೇಕು. ಇದರಿಂದ ಒತ್ತಡ ಕಡಿಮೆ ಆಗಲು ತುಂಬಾ ಅವಶ್ಯಕವಾಗಿತ್ತದೆ ಜೊತೆಗೆ ಮೇಲಾಧಿಕಾರಿಗಳು ಹಾಗೂ ಕೆಳ ಸಿಬ್ಬಂದಿ ಎಂಬ ಭಾವನೆ ಅಳಿದು ಭಾತೃತ್ವದ ಬಾಂಧವ್ಯ ಬೆಸೆಯಲು ಸಹಾಯಕವಾಗುತ್ತದೆ ಎಂದರು.

ಸಹಾಯಕ ಆಯುಕ್ತರಾದ ಪ್ರಕಾಶ ಕುದರೆ ಮಾತನಾಡಿ, ಸಹಜವಾಗಿ ಎಲ್ಲಾ ಇಲಾಖೆಗಳಲ್ಲಿ ಸರ್ಕಾರ ಆದೇಶದನ್ವಯ ರೂಪಿಸಿದ ವಿವಿಧ ಯೊಜನೆಗಳನ್ನು ಸಾರ್ವಜನಿಕರ ಮನೆ ಬಾಗಿಲಿಗೆ ತಲುಪಿಸುವ ನಿಟ್ಟಿನಲ್ಲಿ ಕೆಸಲದ ಒತ್ತಡ ಹೆಚ್ಚಾಗಿದೆ. ಜೊತೆಗೆ ಸಿಬ್ಬಂದಿಯ ಕೊರತೆ ನಡುವೆಯು ಎಲ್ಲಾ ಯೋಜನೆಗಳು ಪಾರದರ್ಶಕವಾಗಿ ಕೆಲಸ ಮಾಡುತ್ತಿದ್ದೆವೆ. ಹೀಗಾಗಿ ಒತ್ತಡ ತಗ್ಗಿಸಲು ಸರ್ಕಾರ ಪ್ರತಿವರ್ಷ ಇಂಥಹ ಕ್ರೀಡಾ ಕೂಟ ನಡೆಸುವುದು ಕಡ್ಡಾಯವಾಗಿ ಆದೇಶ ಮಾಡಬೇಕು ಎಂದು ತಿಳಿಸಿದರು.

ತಾ.ಪಂ.ಕಾ.ನಿ.ಅ.ರಮೇಶ ಸುಲ್ಪಿ ಸರ್ ಮಾತನಾಡಿ, ಆರ್.ಡಿ.ಪಿ.ಆರ್. ಇಲಾಖೆ ಆಗಿರುವುದರಿಂದ ಹತ್ತು ಹಲವು ಯೋಜನೆಗಳು ಇರುವುದರಿಂದ ಕೆಲಸ ಒತ್ತಡ ಇರುತ್ತದೆ. ಒಂದು ದಿನದ ಒತ್ತಡ ದಿಂದ ಹೊರಬರಲು ಮತ್ತು ಮಾನಸಿಕವಾಗಿ ಹೊರಬರಲು ಕ್ರೀಡಾ ಆಯೋಜಿಸಿದ್ದೆವೆ. ಇದರಲ್ಲಿ ಗ್ರಾ.ಪಂ.ಒಬ್ಬ ಸಿಬ್ಬಂದಿ ಹಿಡಿದು ಕ್ರೀಡಾ ಉತ್ಸವದಲ್ಲಿ ಭಾಗವಹಿಸುವುದು ಮೂಲಕ ನಾವೆಲ್ಲರು ಒಂದೇ ಭಾವನೆ ಮೂಡಿದೆ ಎಂದರು. ಈ ಸಂದರ್ಭದಲ್ಲಿ ತಹಶೀಲ್ದಾರ ಶಿವಾನಂದ ಮೇತ್ರೆ, ತಾ.ಪಂ.ಸ.ನಿ.ಮಹ್ಮದ್ ಸಲೀಂ, ಅರುಣಕುಮಾರ ಪಾಟೀಲ್, ತಾ.ಪಂ. ವ್ಯವಸ್ಥಾಪಕ ರಾಜರೆಡ್ಡಿ ಪಾಟೀಲ್, ಪಿಡಿಒ ಸಂಘದ ಅಧ್ಯಕ್ಷರಾದ ರಮೇಶ ರಾಠೋಡ, ಎಡಿಪಿಸಿ ದೀಪಕ ಕಡ್ಡಿಮನಿ, ಸ.ನೌ.ಸಂ.ಎ.ಕೆ. ಆನಂದ, ಡಿಇಒ ಸಂಘದ ಅಧ್ಯಕ್ಷ ಸಂಜುರೆಡ್ಡಿ, ಟಿಸಿ ಶಿವರಾಜ ಪಾಟೀಲ್, ಟಿಐಎಂಸಿ ವರದಾ ಶಂಕರ, ಐಇಸಿ ಸಂಯೋಜಕ ವೀರಾರೆಡ್ಡಿ ಸೇರಿದಂತೆ ಇಲಾಖೆಯ ಎಲ್ಲಾ ಸಿಬ್ಬಂದಿಗಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಅರ್ಜುನ ಶಿಂಧೆ ನಿರೂಪಿಸಿದರು. ರಮೇಶ ರಾಠೋಡ ಸ್ವಾಗತಿಸಿ ವಂದಿಸಿದರು.

# ಶಾಂತಿವರ್ಧಕ ಪ.ಪೂ ಕಾಲೇಜಿನಲ್ಲಿ ಅಂಬಿಗರ ಚೌಡಯ್ಯ ಜಯಂತಿ ಆಚರಣೆ




• **ಮಲ್ಲಮ್ಮ ನುಡಿ ವಾರ್ತೆ,ಕಮಲನಗರ:**

ಪಟ್ಟಣದ ಶಾಂತಿವರ್ಧಕ ವಿಜ್ಞಾನ, ಕಲಾ ಹಾಗೂ ಪದವಿ ಪೂರ್ವ ವಾಣಿಜ್ಯ ಕಾಲೇಜಿನಲ್ಲಿ ಬುಧವಾರ 12ನೇ ಶತಮಾನದ ಶಿವಶರಣ ಅಂಬಿಗರ ಚೌಡಯ್ಯ ಅವರ 906ನೇ ಜಯಂತಿ ಆಚರಿಸಲಾಯಿತು.

ಅಂಬಿಗರ ಚೌಡಯ್ಯ ಅವರ ಭಾವಚಿತ್ರಕ್ಕೆ ಪ್ರಾಚಾರ್ಯ ಶಿವಾಜಿ ಆರ್.ಎಚ್ ಪೂಜೆ ಸಲ್ಲಿಸಿ ಮಾತನಾಡಿದರು. ಅಂಬಿಗರ ಚೌಡಯ್ಯ ಅವರ ವಚನ ಮೂಡ ನಂಬಿಕೆ ಮತ್ತು ಡಾಂಬಿಕ ಭಕ್ತಿಯನ್ನು ಕಟುವಾಗಿ ಟೀಕಿಸಿದರು. 12ನೇ ಶತಮಾನದ ಒಬ್ಬ ಶ್ರೇಷ್ಠ ವಚನಕಾರ ಅನೇಕ ಸಮಾಜಕ್ಕೆ ಸರಿದಾರಿ ನೀಡುವ ಅನೇಕ ವಚನಗಳು ಬರದ್ದಿದ್ದಾರೆ. ಯುವಕರು ಅವರ ವಚನಗಳು ಓದಿಬೇಕೆಂದು ತಿಳಿಸಿದರು. ಈ ಸಂದರ್ಭದಲ್ಲಿ

ಸಂಯೋಜಕ ಸಂಜುಕುಮಾರ ಚನ್ನಾಳೆ, ರಾಷ್ಟ್ರೀಯ ಸೇವಾ ಯೋಜನಾಧಿಕಾರಿ ವಿಜಯಕುಮಾರ ವಾರದ, ಉಪನ್ಯಾಸಕರಾದ ಓ.ಕೆ ಸೂರ್ಯವಂಶಿ, ನಾಗನಾಥ ಕೊಳ್ಳ, ಕಾಳಿದಾಸ ಬೌಥೆ, ವೆಂಕಟ್ ಮೊರೆ, ಶ್ರೀಕಾಂತ ಪ್ಯಾಗೆ, ಸುನೀಲ್, ಶಿವಶಂಕರ ಕಾಂಬಳೆ, ಶಿವಶಂಕರ ಒಡೆಯಾರ, ಶಿವಕುಮಾರ ಪಾಟೀಲ್, ಬಸವಾಂಬಿಕಾ, ಕಾದಂಬಿನಿ, ವಿಜಯಲಕ್ಷ್ಮೀ ಹಾಗೂ ವಿದ್ಯಾರ್ಥಿಗಳು ಇದ್ದರು.

# ಆಧುನಿಕ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ : ಶತ್ರುಘ್ನ

• **ಮಲ್ಲಮ್ಮ ನುಡಿ ವಾರ್ತೆ,ಕಮಲನಗರ:**



ನೀರು ಅತ್ಯಮೂಲ್ಯವಾಗಿದ್ದು. ರೈತರು ಅದನ್ನು ಪೋಲು ಮಾಡುವುದು ಹೆಚ್ಚಾಗಿ ಕಂಡು ಬರುತ್ತಿದೆ. ಮಿತವಾಗಿ ಬಳಕೆ ಮಾಡುವ ಆಧುನಿಕ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು ಎಂದು ಕಮಲನಗರ ವಲಯ ಕೃಷಿ ಅಧಿಕಾರಿ ಶತ್ರುಘ್ನ.ಎಸ್ ಹೇಳಿದರು.

ತಾಲೂಕಿನ ಡೋಣಗಾಂವ್(ಎಂ) ಗ್ರಾಮದಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಗ್ರಾಮೀಣ ಕೃಷಿ ಅಭಿವೃದ್ಧಿ ಮತ್ತು ಸಂಶೋಧನೆ ಟ್ರಸ್ಟ್ ಸಹಯೋಗದಲ್ಲಿ ನಡೆದ ಉನ್ನತ ಕೃಷಿ ಪ್ರದರ್ಶನ ಅಭಿಯಾನದಲ್ಲಿ ಅವರು ಮಾತನಾಡಿದರು.

ಬೇಸಾಯದಿಂದ ಬೇಸತ್ತು ನಗರಗಳ ಕಡೆ ಮುಖ ಮಾಡುತ್ತಿರುವ ಈಗಿನ ಸಂದರ್ಭದಲ್ಲಿ ಸಮಗ್ರ ಕೃಷಿ ಜತೆಗೆ ಭಾರತದಲ್ಲಿ ಅಭಿವೃದ್ಧಿ ಪಡಿಸಿದ ಹೊಸತಳಿಯ ತೊಗರಿಕಾಯಿ(ಐಸಿಪಿಎಚ್–2740) ಹೆಚ್ಚು ಉತ್ಪಾದನೆಯ ಸಂಸ್ಕರಿಸಿದ ತೊಗರಿಕಾಯಿ ಒಂದು ಕಾಯಿಯಲ್ಲಿ ಸರಾಸರಿ 6–8 ಕಾಳುಗಳು ದೊಡ್ಡದಾಗಿದ್ದು ಮತ್ತು ಗುಣಮಟ್ಟದ ಉತ್ತಮ ಬೆಳೆಯಾಗಿದೆ. ಹಾಗೂ ವ್ಯಾಪಾರ ಮತ್ತು ಕೃಷಿಗೆ ಸೂಕ್ತವಾದ ಬೆಳೆ 170–180 ದಿನಗಳಲ್ಲಿ ರಾಶಿ ಬೆಳೆ ಕೈಸೇರುತ್ತೇ ಎಂದು ತಿಳಿಸಿದರು.

ರೈತ ಸಮೂಹ ಸಂಪನ್ಮೂಲ ವ್ಯಕ್ತಿ ರಾಜೇಂದ್ರ ಮಾಳಿ ಮಾತನಾಡಿ, ಸರ್ಕಾರದಿಂದ ಬರುವ ಎಲ್ಲಾ ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಕೃಷಿ ಹೊಂಡದಿಂದ ಹಿಡಿದು ಉಳಿದ ಎಲ್ಲ ಯೋಜನೆಯ ಸೌಲಭ್ಯಗಳನ್ನು ಬಳಸಿಕೊಂಡು ಕೃಷಿಯಲ್ಲಿ ಖುಷಿ ಕಂಡುಕೊಂಡ ಬಾಬುರಾವ ಸೋಮೂರೆ ಅವರು ಇತರ ರೈತರಿಗೆ ಮಾದರಿಯಾಗಿದ್ದಾರೆ ಎಂದು ಬಣ್ಣಿಸಿದರು.

ರಾಜ್ಯ ಕೃಷಿರತ್ನ ರೈತ ಪುರಸ್ಕೃತ ಮುಧೋಳ ಗ್ರಾಮದ ಹಾವಗಿರಾವ ವಟಗೆ ಮಾತನಾಡಿ, ಸೇಂದ್ರಿಯ ಕೃಷಿ, ಹೊಂಡ ಕೆರೆ ನೀರಾವರಿ ಮತ್ತು ಮೀನುಗಾರಿಕೆ ಪೂರಕ, ಕೋಳಿ ಸಾಗಾಣಿಕೆ, ರೈತರಿಗೆ ವರಮಾನ, ಎರೆಹುಳು ಗೊಬ್ಬರ ತಯಾರಿಕೆ, ಹೊಸತಳಿ ತೊಗರಿಕಾಯಿ, ಕೃಷಿಯನ್ನು ಉಳಿಸಿಬೇಕಾದರೆ ನೀರಿನ ಸಂರಕ್ಷಣೆವೇ ಏಕೈಕ ಮಾರ್ಗ, ಭಾರತೀಯ ಗೀರ್ ಹಸು ಸಾಕಾಣಿಕೆ ಒಟ್ಟಾರೆಯಲ್ಲಿ ಕೃಷಿಯ ಜೊತೆಗೆ ಇತರೆ ಪದ್ಧತಿಗಳು ಬೆಳೆಯುವ ಬೆಳೆಗಳಿಗೆ ರೋಗಗಳು ತಗುಲದಂತೆ ಅಧಿಕ ಲಾಭ ಗಳಿಸಬಹುದಾಗಿದೆ ಎಂದರು.

# ಕೋನಪ್ಪ ಶಾಲೆಯಲ್ಲಿ ಹಳ್ಳಿ ಸೊಗಡಿನ ಹಬ್ಬ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ಯಾದಗಿರಿ ನಗರದ ಲಿಂಗೇರಿ ಕೋನಪ್ಪ ಶಿಕ್ಷಣ ಸಂಸ್ಥೆಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿನಿಯರಿಂದ ಹಳ್ಳಿ ಸೊಗಡಿನ ಹಬ್ಬ ಎನ್ನುವ ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಆಚರಿಸಲಾಗುವ ಸಂಕ್ರಾಂತಿ ಹಬ್ಬದ ವೈಭವ ಅದರ ಅಂಗವಾಗಿ ಹಳ್ಳಿಗಳಲ್ಲಿ ಮಾಡುವ ಊಟದ ವೈಭವ ಜೊತೆಗೆ ಸಜ್ಜಯ ರೊಟ್ಟಿ ಹೋಳಿಗೆ ಸಂಡಿಗೆ ಹಪ್ಪಳ ಮತ್ತು ಹಲವಾರು ವಿಧದ ತರಕಾರಿಗಳಿಂದ ಕೂಡಿದ ಬಂದ ವಿದ್ಯಾರ್ಥಿನಿಯರು ಅಡುಗೆ ಪ್ರದರ್ಶನ ಕಾರ್ಯಕ್ರಮವನ್ನು ಕೂಡ ವೈಭವದಿಂದ ಪ್ರದರ್ಶನ ಮಾಡಿದರು, ಈ ಅಡುಗೆ ಕಾರ್ಯಕ್ರಮದಲ್ಲಿ ವಿವಿಧ ರುಚಿಕರವಾದ ತರೆಯವಾರಿ ತಿಂಡಿಗಳ ಜೊತೆಗೆ ಪಾನಿಪುರಿ, ಪಾಪಡ್, ಸಾಲಡ್, ಐಸ್ ಕ್ರೀಮ್ ಹಾಗೂ ವಿವಿಧ ಪ್ರಕಾರದ ಜ್ಯೂಸ್ ತಯಾರಿಸಿ ಬಂದ ಪ್ರೇಕ್ಷಕರಿಗೆ ಹಂಚುತ್ತಿದ್ದರು, ಗ್ರಾಮೀಣ ಪ್ರದೇಶದ ಮಾರುಕಟ್ಟೆಯನ್ನು ಬಿಂಬಿಸುವ ತರಕಾರಿ ಮಾರುಕಟ್ಟೆ ಬಟ್ಟೆಗಳನ್ನು ಮಾಡುವುದು ದವಸ ಧಾನ್ಯಗಳನ್ನು ಮಾರುವುದು ಇದರ ಜೊತೆಗೆ ಒಕ್ಕಲುತನದ ವೈಭವವನ್ನು ಕೂಡ ಚಿತ್ರಿಸಲಾಗಿತ್ತು, ಮಹಿಳಾ ಶಿಕ್ಷಣ ಅಧಿಕಾರಿಗಳು ಕಾರ್ಯಕ್ರಮವನ್ನು ಉದ್ಘಾಟಿಸಿ ಆಧುನಿಕತೆಯಲ್ಲಿ ಇಂತ ವಿಶಿಷ್ಟ ಕಾರ್ಯಕ್ರಮಗಳು ಮಾಡುವುದು ಬಹಳ ಅತ್ಯುತ್ತಮ ಇದರೊಂದಿಗೆ ಮಕ್ಕಳಲ್ಲಿರುವ ಗ್ರಾಮೀಣ ಪ್ರತಿಭೆಯನ್ನು ಬರಹ ಹಾಕಬಹುದು ಎಂದು ತಿಳಿಸುತ್ತಾ ವಿದ್ಯಾರ್ಥಿನಿಯರು ತಂದ ವಿವಿಧ ಬಗೆಯ ಭಕ್ಷ ಭೋಜಗಳನ್ನು ಸವಿದು ಸಂತಸ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾದ ರಾಜು ಗುಂಜನೂರ್, ಆಡಳಿತ ಮಂಡಳಿಯ ಸುಧಾರಣಾ ಸಮಿತಿ ಅಧ್ಯಕ್ಷ ಆಡಳಿತ ಅಧಿಕಾರಿಗಳು



ಖಾದ್ಯಗಳನ್ನು ತಯಾರಿಸಲಾಗಿತ್ತು. ಪುಟ್ಟ ಮಕ್ಕಳು ಸಾಂಪ್ರದಾಯಿಕವಾದ ಉಡುಗೆಯೊಂದಿಗೆ ಆಧುನಿಕ ಯುಗದ ಮರೆಮಾಚುವಿಕೆಯನ್ನು ನೆನಪಿಸುವಂತೆ ಸಾಂಪ್ರದಾಯಿಕ ಇಲಕಲ್ ಸೀರೆಗಳನ್ನು ಉಟು ಪುಟ್ಟ ಪುಟ್ಟ ನಡಿಗೆಯೊಂದಿಗೆ ವಿದ್ಯಾರ್ಥಿನಿಯರು ನಲಿಯುತ್ತ ಸಂಭ್ರಮಿಸಿದರು. ಜೊತೆಗೆ ವಿವಿಧ ಬಗೆಯಲ್ಲಿ ಅಡುಗೆಗಳನ್ನು ಮಾಡಿಕೊಂಡು ವಿದ್ಯಾರ್ಥಿನಿಯರು ಸಾಂಪ್ರದಾಯಿಕ ಸೀರೆಯೊಂದಿಗೆ ಹೂಲಗಳಲ್ಲಿ ರೈತ ಪದಗಳನ್ನು ಆಡುತ್ತ ಭತ ನಾಟಿ ಮಾಡುವ ಕಾರ್ಯಕ್ರಮ ಎಲ್ಲರ ಗಮನ ಸೆಳೆಯುವಂತೆ ಮಾಡಿತ್ತು. ಜೋಳ ಹುಟ್ಟುವುದು ಬೀಸುವದು ಜೊತೆಗೆ ಹಳ್ಳಿಗಳಲ್ಲಿ ನಡೆಯುವ ಗ್ರಾಮ ಸಭೆ ಕಾರ್ಯಕ್ರಮವನ್ನು ಕೂಡ ಬಹಳ ಅಚ್ಚುಕಟ್ಟಾಗಿ ನೆರವೇರಿಸಲಾಗಿತ್ತು, ಈ ಕಾರ್ಯಕ್ರಮವನ್ನು ಸಂಸ್ಥೆಯ ಅಧ್ಯಕ್ಷರು ಹಾಗೂ ಮತ್ತು ಚಂದ್ರಶೇಖರ ಪದವಿ ಮಹಾ ವಿದ್ಯಾಲಯದ ಪ್ರಾಚಾರ್ಯರು ಬಸವೇಶ್ವರ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯರು ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳು ಮತ್ತು ವಿದ್ಯಾರ್ಥಿನಿಯರ ಪಾಲಕರು ಪೋಷಕರು ಹಾಜರಿದ್ದರು, ಶಾಲೆಯ ಎಲ್ಲಾ ಶಿಕ್ಷಕಿಯರು ಶಿಕ್ಷಕರು ಸಾಂಪ್ರದಾಯಿಕ ಉಡುಗೆಗಳೊಂದಿಗೆ ಸಂಭ್ರಮಿಸಿದರು.

# ಶಿಕ್ಷಕರು ಫಲಿತಾಂಶ ಸುಧಾರಣೆಗೆ ಕ್ರಿಯಾಯೋಜನೆ ರೂಪಿಸಿ: ಈರಣ್ಣ ಕನ್ನಳ್ಳಿ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ಶಿಕ್ಷಕರು ಬೋಧನೆಯಲ್ಲಿ ನೂತನ ಪದ್ಧತಿ ಹಾಗೂ ಸೃಜನಾತ್ಮಕ ಚಟುವಟಿಕೆ ಅಳವಡಿಸಿಕೊಂಡು ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಸುಧಾರಿಸಲು ಶ್ರಮಿಸಬೇಕು ಎಂದು ಪ್ರೌಢ ಶಾಲಾ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಈರಣ್ಣ ಕನ್ನಳ್ಳಿ ಅವರು ನಿರ್ದೇಶಿಸಿದರು. ಯಾದಗಿರಿ ತಾಲೂಕಿನ ಮಲ್ಹಾರ ಕ್ಲಸ್ಟರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಲಿಂಗೇರಿ ಯಲ್ಲಿ ಮಲ್ಹಾರ ಕ್ಲಸ್ಟರ್ ಮಟ್ಟದ 1–5 ಈಐಓ (ಮೂಲಭೂತ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನ) ಆಧಾರಿತ ಕಲಿಕಾ ಹಬ್ಬದ ಕಾರ್ಯಕ್ರಮದಲ್ಲಿ ಮಾತನಾಡಿದರು. ಹತ್ತನೇ ತರಗತಿಯ ಫಲಿತಾಂಶ ಸುಧಾರಿಸುವ ನಿಟ್ಟಿನಲ್ಲಿ ಶಿಕ್ಷಕರು ಮಕ್ಕಳಲ್ಲಿ ಮೂಲಭೂತ ಸಾಕ್ಷರತೆ ಹಾಗೂ ಸಂಖ್ಯಾ ಜ್ಞಾನ ಕ್ಕೆ ಸಂಬಂಧಿಸಿದ ಸಾಮರ್ಥ್ಯಗಳನ್ನು ಚಟುವಟಿಕೆದಾಯಕ ಹಾಗೂ ಅನುಭವ ಆಧಾರಿತ ಮತ್ತು ಸಂತಸದಾಯಕದಿಂದ ಬೋಧಿಸಬೇಕು, ಪೋಷಕರಾದವರು ಶಿಕ್ಷಕರಿಗೆ ಬೆಂಬಲವಾಗಿ ನಿಲ್ಲಬೇಕೆಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಕ್ಷೇತ್ರ ಸಮನ್ವಯಾಧಿಕಾರಿಗಳಾದ ಜಗದೀಶ್ ಸಜ್ಜನ್, ಶಿಕ್ಷಣ ಸಂಯೋಜಕರಾದ ಚಂದ್ ಸಾಬ್ ಚೌಕಿ, ಕಿಶನ್ ಪವರ್. ಸಿಆರ್‌ಪಿ ಯಲ್ಲಪ್ಪ, ಮಲ್ಲಪ್ಪ, ಷಣ್ಮುಖ, ಕರ್ನಾಟಕ ರಾಜ್ಯ(6–8) ಪದವೀಧರ ಪ್ರಾಥಮಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಮಲ್ಲಯ್ಯ ಸಂಜೀವಿನಿ, ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷ ಹೊನ್ನಪ್ಪ, ಉಪಾಧ್ಯಕ್ಷ ರವಿ ಸ್ವಾಮಿ, ಗ್ರಾಮ ಪಂಚಾಯಿತಿ ಸದಸ್ಯ ರಾಚಪ್ಪ, ಮುಖ್ಯ ಗುರುಗಳಾದ ಶ್ರೀಮತಿ ಸುಜಾತ ಮುಂತಾದವರು ಉಪಸ್ಥಿತರಿದ್ದರು, ಶಿಕ್ಷಕರಾದ ತಾಯಪ್ಪ ನಿರೂಪಿಸಿ, ತಿಮ್ಮಣ್ಣ ಹಕ್ಕಿ ಸ್ವಾಗತಿಸಿ, ಲಕ್ಷ್ಮಿಕಾಂತ್ ವಂದಿಸಿದರು.

# ಭಾರತಕ್ಕೆ ಶ್ರೇಷ್ಠ ಸಂವಿಧಾನ ನೀಡಿ ಬೆಳಕಾದ ಡಾ. ಬಾಬಾ ಸಾಹೇಬರು

ವರದಿ: ಡಿ.ಕೆ. ದೇವಿಂದ್ರ ಯಾದಗಿರಿ.

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**



ಡಾ. ಬಿ.ಆರ್. ಅಂಬೇಡ್ಕರ್ ಅವರು ಭಾರತೀಯ ಸಂವಿಧಾನದ ಮುಖ್ಯ ಶಿಲ್ಪಿ ಆಗಿದ್ದರು. ಸ್ವಾತಂತ್ರ್ಯ ಪಡೆದ ನಂತರ ಭಾರತವು ಒಂದು ಪ್ರಜಾಸತ್ತಾತ್ಮಕ, ಧರ್ಮನಿರಪೇಕ್ಷ ಹಾಗೂ ಸಾಮಾಜಿಕ ನ್ಯಾಯ ಆಧಾರಿತ ರಾಷ್ಟ್ರವಾಗಿ ರೂಪುಗೊಳ್ಳಲು ಅವರು ಸಂವಿಧಾನವನ್ನು ರೂಪಿಸಿದರು. ಭಾರತೀಯ ಸಂವಿಧಾನವು ಸಮಾನತೆ, ಸ್ವಾತಂತ್ರ್ಯ, ಬಂಧುತ್ವ ಮತ್ತು ನ್ಯಾಯ ಎಂಬ ಮೂಲ ಮೌಲ್ಯಗಳ ಮೇಲೆ ನಿರ್ಮಿತವಾಗಿದೆ. ಜಾತಿ, ಧರ್ಮ, ಲಿಂಗ, ಭಾಷೆ ಯಾವುದನ್ನೂ ಗಮನಿಸದೆ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಹಕ್ಕುಗಳನ್ನು ಒದಗಿಸಲಾಗಿದೆ. ದಲಿತರು, ಹಿಂದುಳಿದ ವರ್ಗಗಳು, ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವುದಕ್ಕೆ ಸಂವಿಧಾನದಲ್ಲಿ ವಿಶೇಷ ಕಲಂಗಳನ್ನು ಸೇರಿಸಲಾಗಿದೆ.

ಸಂವಿಧಾನದಲ್ಲಿನ ಮೂಲ ಹಕ್ಕುಗಳು, ನಿರ್ದೇಶಕ ತತ್ವಗಳು ಮತ್ತು ಮೂಲ ಕರ್ತವ್ಯಗಳು ದೇಶದ ಆಡಳಿತ ವ್ಯವಸ್ಥೆಗೆ ದಿಕ್ಕು ತೋರಿಸುತ್ತವೆ. ಈ ಸಂವಿಧಾನವು ಜಗತ್ತಿನ ಅತಿ ದೀರ್ಘ ಹಾಗೂ ಸಮಗ್ರ ಸಂವಿಧಾನಗಳಲ್ಲಿ ಒಂದಾಗಿದೆ. ಹೀಗಾಗಿಡಾ. ಅಂಬೇಡ್ಕರ್ ಅವರು ಭಾರತಕ್ಕೆ ನೀಡಿದ ಸಂವಿಧಾನವು ಪ್ರಜಾಸತ್ತೆ, ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಭದ್ರ ಅಡಿಪಾಯವಾಗಿದ್ದು, ಅದನ್ನು ಶ್ರೇಷ್ಠ ಸಂವಿಧಾನವೆಂದು ಕರೆಯಲಾಗುತ್ತದೆ

ಅಜ್ಞಾನ ಅಂಧಕಾರಕ್ಕೆ ಅಕ್ಷರದ ದೀಪ ಹಚ್ಚಿದ ಗುರು,

ಸಂವಿಧಾನದಲ್ಲಿ ಸಮಾನತೆಯ ಸೂರ್ಯೋದಯ ತಂದವರು. ಶೋಷಿತರ ಕಣ್ಣೀರು ಒರೆಸಿದ ಕೈ,

ಧೈರ್ಯದ ದಾರಿ ತೋರಿದ ಮನಸ್ಸು, ನ್ಯಾಯ, ಮಾನವತೆ, ಸ್ವಾಭಿಮಾನ ಇವೆಲ್ಲಕ್ಕೂ ಅಡಿಪಾಯವಾದವರು. ಇಂದು ನಾವು ನಡೆಯುವ ದಾರಿಯಲ್ಲಿ ಅವರ ವಿಚಾರಗಳೇ ದೀಪವಾಗಿವೆ, ಭಾರತದ ಭವಿಷ್ಯಕ್ಕೆ ಅಂಬೇಡ್ಕರ್ ಎಂದೆಂದಿಗೂ ಬೆಳಕು.



**ಜಿ.ಎಸ್ ಮಂಜುನಾಥ.**
**ಶಿಕ್ಷಕರು ಯಾದಗಿರಿ**
**ಮೊ.9731817236**

- ಜಾತಿ, ಅಸಮಾನತೆಯ ಕತ್ತಲೆಗೆ
- ಜ್ಞಾನ, ಸಂವಿಧಾನದ ದೀಪ ಹಚ್ಚಿದ ಮಹಾನ್.
- ಶೋಷಿತರ ಧ್ವನಿಯಾಗಿ, ಶಕ್ತಿಯ ಸಂಕೇತವಾಗಿ
- ಮಾನವ ಘನತೆಯನ್ನು ಉಳಿಸಿದ ನಾಯಕ.
- ಶಿಕ್ಷಣವೇ ಶಕ್ತಿ ಎಂದು ಬೋಧಿಸಿ,
- ಹಕ್ಕುಗಳ ಜೊತೆಗೆ ಕರ್ತವ್ಯಗಳ ದಾರಿಯೂ ತೋರಿಸಿ,
- ಸಮಾನ ಸಮಾಜದ ಕನಸಿಗೆ ರೂಪ ಕೊಟ್ಟ
- ಭಾರತದ ಅಮರ ಬೆಳಕು ಅಂಬೇಡ್ಕರ್. ಅಂಧಕಾರದ ನಡುವೆ ಜ್ವಲಿಸಿದ ಜ್ಞಾನ ದೀಪ,
- ಅನ್ಯಾಯದ ವಿರುದ್ಧ ಧೈರ್ಯದ ಧ್ವನಿ.
- ಸಮಾನತೆ, ಸ್ವಾತಂತ್ರ್ಯ, ಸಹೋದರತ್ವದ ದಾರಿ ತೋರಿಸಿದರು, ಅವರ ಚಿಂತನೆಗಳು ಇಂದು ಕೂಡ
- ಭಾರತಕ್ಕೆ ದಿಕ್ಕು ತೋರಿಸುವ ಅಚಲ ಬೆಳಕು.

## ಬಜೆಟ್ ನಲ್ಲಿ 5 ಲಕ್ಷ ರೂಪಾಯಿ ಮೀಸಲಿಡಿ




• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**

ಜಿಲ್ಲಾ ಕೇಂದ್ರದ ಪತ್ರಕರ್ತರಿಗೆ ವೈದ್ಯಕೀಯ ನಿಧಿಯಡಿ ನಗರಸಭೆಯ 2026–2027 ಸಾಲಿನ ಬಜೆಟ್ ನಲ್ಲಿ 5 ಲಕ್ಷ ರೂಪಾಯಿ ಮೀಸಲಿಡುವಂತೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಪೌರಾಯುಕ್ತ ಉಮೇಶ್ ಚವ್ಹಾಣ ಅವರಿಗೆ ಮನವಿ ಸಲ್ಲಿಸಲಾಯಿತು.

ಬಜೆಟ್ ನಲ್ಲಿ ಪ್ರತಿವರ್ಷ ಪತ್ರಕರ್ತರು ಮತ್ತು ಅವರ ಕುಟುಂಬದ ಸದಸ್ಯರು ಚಿಕಿತ್ಸೆ ಪಡೆಯಲು ಅನುದಾನ ಬಜೆಟ್ ನಲ್ಲಿ ಮೀಸಲು ಇಡಲಾಗುತ್ತದೆ. ಇದನ್ನು ಈ ಬಾರಿಯೂ ಕೂಡ ಮುಂದುವರೆಯಿಸಬೇಕು ಎಂದುರು.

ಪತ್ರಕರ್ತರು ತಮ್ಮ ಜೀವಸ ಹಂಗು ತೊರೆದು ಕರ್ತವ್ಯ ನಿರ್ವಹಿಸುತ್ತಾರೆ. ಆರೋಗ್ಯ ಸಮಸ್ಯೆ ಉಂಟಾದಾಗ ನಗರಸಭೆಯ ನಿಧಿಯಡಿ ಇರುವ ಆರ್ಥಿಕ ನೆರವಿನಿಂದ ಸಾಕಷ್ಟು ಅನುಕೂಲವಾಗುತ್ತದೆ. ಹೀಗಾಗಿ ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ತಿಳಿಸಿದರು.

ಪತ್ರಕರ್ತರ ಸೇವೆ ಅನನ್ಯವಾಗಿದೆ. ಸರಕಾರದಿಂದ ದೊರೆಯುವ ಎಲ್ಲ ಸೌಲಭ್ಯಗಳನ್ನು ಕಲ್ಪಿಸುವಂತೆ ಸಂಘದ ವತಿಯಿಂದ ಇದೇ ವೇಳೆ ಪೌರಾಯುಕ್ತರಿಗೆ ಕೋರಲಾಯಿತು. ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ ಲಿಂಗೇರಿ, ರಾಜ್ಯ ಪರಿಷತ್ ಸದಸ್ಯ ಸಾಗರ್ ದೇಸಾಯಿ, ಜಿಲ್ಲಾ ಖಜಾಂಚಿ ರಾಜು ನಲ್ಲಿನಕರ್, ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಆನಂದ ಗೋರ್ಕಲ್, ವಡಗೇರಾ ತಾಲ್ಲೂಕು ಅಧ್ಯಕ್ಷ ನಾಗಪ್ಪ ಕುಂಬಾರ ನಾಯ್ಕಲ್, ಪತ್ರಕರ್ತರಾದ ಗಣೇಶ್ ಪಾಟೀಲ್, ನಾಗರಾಜ ಮುಗದುಮ್, ಭೀರಲಿಂಗಪ್ಪ ಕಿಲ್ಲನಕೇರಾ ಇದ್ದರು.

## ಶ್ರೀರಾಮನ ಆದರ್ಶವೇ ಯುವಕರಿಗೆ ಮಾದರಿ



ಕಲಘಟಗಿ ಶ್ರೀರಾಮನ ಬದುಕು ಆದರ್ಶಮಯವಾಗಿದ್ದು ಅದು ಸರ್ವಕಾಲಕ್ಕೂ ಯುವಕರಿಗೆ ಮಾದರಿಯಾಗಿದೆ ಅದನ್ನು ಪರಿಪಾಲಿಸಿದರೇ ನಮ್ಮ ಬದುಕು ಆದರ್ಶ ಮಯವಾಗಿರುತ್ತದೆ ಎಂದು ಬಿ.ಜೆ.ಪಿ ಪಕ್ಷದ ನಗರಘಟಕದ ಅಧ್ಯಕ್ಷ ರಾಘವೇಂದ್ರ ಅಳಣಾವರ ಮಾತನಾಡಿದರು.

ಅವರು ಪಟ್ಟಣದ ಆಂಜನೇಯ ಸರ್ಕಲ ಬಳಿ ಅಯೋಧ್ಯೆಯ ಶ್ರೀರಾಮನ ಪ್ರತಿಷ್ಠಾಪನೇಯ ಎರಡನೆ ವಾರ್ಷಿಕೋತ್ಸವದ ನಿಮಿತ್ಯ ಬೃಹತ್ ಶ್ರೀರಾಮನ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಮಾತನಾಡಿದರು.

ಬಾ.ಜಪ ಪಕ್ಷದ ಜಿಲ್ಲಾಯುವ ಮೂರ್ಚಾ ಉಪಾಧ್ಯಕ್ಷ ಪರಶುರಾಮ ಹುಲಿಹೊಂಡ ಮಾತನಾಡಿ ಇವತ್ತಿನ ಸಂಘಟನೆಯ ಮೂಲಕ ಶ್ರೀ ರಾಮನ ಆದರ್ಶಗಳನ್ನು ಯುವಕರಿಗೆ ಹಂಚಲಾಗುತ್ತಿದ್ದು ಶ್ರೀರಾಮ ತಂದೆ,ತಾಯಿ ಭಕ್ತಿ ಗುರು ಭಕ್ತಿ ದೇಶಪ್ರೇಮದಂತಹ ಆದರ್ಶಗಳನ್ನು ಯುವಕರಲ್ಲಿ ಬಿಂಬಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಐ.ಸಿ ಗೊಕೂಲ, ಗಂಗಾಧರ ಗೌಳಿ,ಯಲ್ಲಾರಿ ಶಿಂಧೆ,ಮಂಗಲಪ್ಪ ಲಮಾಣಿ,ಸುರೇಶ ಶಿಲವಂತರ,ಬಸವರಾಜ ಕಡ್ಲಾಸ್ಕರ,ಪರಶುರಾಮ ರಜಪೂತ,ಸಾಗರ ಸುತಾರ ರಾಜು ದೊಡಮನಿ,ಪ್ರಕಾಶ ದಲಬಂಜನ,ಶ್ರೀಕಾಂತ ಪಾಟೀಲ,ಗಂಗಯ್ಯ ಹಿರೇಮಠ, ಸತೀಶ ಮಾದರ,ಯಲ್ಲಪ್ಪ ಮೇಲಿನಮನಿ,ಇದ್ದರು.

ಕಾರ್ಯಕ್ರಮದಲ್ಲಿ ಪ್ರಸಾದ ವ್ಯವಸ್ಥೆಮಾಡಲಾಗಿತ್ತು.

## ಉಚಿತ ವಿದ್ಯುತ್ ಚಾಲಿತ ಹೊಲಿಗೆ ಯಂತ್ರ ವಿತರಣೆಗೆ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ವಿಜಯನಗರ:**

ಗ್ರಾಮೀಣ ಭಾಗದ ಮಹಿಳೆಯರು ಸ್ವಯಂ ಉದ್ಯೋಗ ಕೈಗೊಳ್ಳಲು 'ಉಚಿತ ಸುಧಾರಿತ ಸರಬರಾಜು ಯೋಜನೆ'ಯಡಿ 279 ವಿದ್ಯುತ್ ಚಾಲಿತ ಹೊಲಿಗೆ ಯಂತ್ರಗಳನ್ನು ವಿತರಿಸಲಾಗುತ್ತಿದೆ.

ಕೊನೆಯ ದಿನಾಂಕ, ಫೆಬ್ರವರಿ 15, 2026.

ಆಸಕ್ತರು www.vijayanagara.nic.in ಜಾಲತಾಣದ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

ಸಂಪರ್ಕಕ್ಕೆ ಹೊಸಪೇಟೆಯವರು 9035547140, ಹಡಗಲಿ, ಹರಪನಹಳ್ಳಿ ಕೂಡ್ಲಿಗಿ, ಕೊಟ್ಟೂರು ತಾಲ್ಲೂಕಿನವರು 9844200579 ಮೊಬೈಲ್ ಗೆ ಕರೆ ಮಾಡಲು ಕೋರಿದೆ.

## ಪಕ್ಷೇಕರನ್ನು ರಂಜಿಸಿದ ದನಕಾಯುವವರ ದೊಡ್ಡಾಟ



ಬಳ್ಳಾರಿ,: ಸಂಸ್ಕಾರ ಪಡೆದ ವ್ಯಕ್ತಿ ದೇಶದ ಭವಿಷ್ಯ ರೂಪಿಸುವ ಕಾರ್ಯದಲ್ಲಿ ಬಹುದೊಡ್ಡ ಕೊಡುಗೆ ನೀಡಬಲ್ಲ ಎಂದು ಗುತ್ತಿಗೆದಾರ ಮಸೀದಿಪುರ ಎಂ. ಚಂದ್ರಶೇಖರಗೌಡ ಅಭಿಪ್ರಾಯಪಟ್ಟಿದ್ದಾರೆ

ಅವರು ಮೊನ್ನೆ ಸಂಜೆ ನಗರದ ಬ್ಯಾಂಕ್ ಕಾಲೋನಿಯ ಪಾರ್ಕ್ ನಲ್ಲಿ ಶ್ರೀಮಾರುತಿ ತೊಗಲುಗೊಂಬೆ ಕಲಾ ಟ್ರಸ್ಟ್ ಹಾಗೂ ಸಂಸ್ಕಾರ ಭಾರತಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಸಂಕ್ರಾಂತಿ ಸಂಭ್ರಮ ಕಾರ್ಯಕ್ರಮಕ್ಕೆ ಚಾಲನೆ ಮಾತನಾಡಿದರು.

ನಮ್ಮ ಭಾರತದ ಸಂಸ್ಕೃತಿ, ಸಂಸ್ಕಾರ ವಿಶಿಷ್ಟವಾದುದು. ಜಗತ್ತಿನಿತರೇ ದೇಶಗಳಿಗೆ ಮಣ್ಣು ಒಂದು ವಸ್ತುವಾದರೆ, ಇಲ್ಲಿ ಪೂಜಿಸುವ ವಸ್ತುವಾಗಿದೆ ನಮ್ಮ ಪೂರ್ವಿಕರು ಅಂತಹ ಸಂಸ್ಕಾರ ನೀಡಿದ್ದಾರೆ. ದೇಶವನ್ನು ಭಾರತ ಮಾತೆ ಎಂದು ಪೂಜಿಸಲ್ಪಡುತ್ತಿದೆ. ಇಂತಹ ಸಂಸ್ಕಾರ ಇಂದಿನ ಮಕ್ಕಳಿಂದ ದೂರವಾಗುತ್ತಿದೆ. ಅದಕ್ಕಾಗಿ ನಾವು ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಕಲಿಸಿದಾಗ ಮಾತ್ರ ವಿಕಸಿತ ಭಾರತ ನಿರ್ಮಿಸಲು ಸಾಧ್ಯ ಎಂದರು.

ವೀರಶೈವ ವಿದ್ಯಾವರ್ಧಕ ಸಂಘದ ಮಾಜಿ ಕಾರ್ಯದರ್ಶಿ ಚೋರನೂರು ಟಿ.ಕೊಟ್ರಪ್ಪ ಮಾತನಾಡಿ ಸಂಸ್ಕಾರ ಎಂಬುದು ಹೇಳಿಕೊಟ್ಟರೆ ಬಾರದು ಅದನ್ನು ಹಿರಿಯರಿಂದ ಮೈಗೂಡಿಸಿಕೊಳ್ಳುವ ಕೆಲಸ ಮಕ್ಕಳಿಂದ ಆಗಬೇಕು ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಎನ್. ವೀರಭದ್ರ ಗೌಡ ಮಾತನಾಡಿ. ನುಡಿ ನಡೆ ಒಂದಾಗಿದ್ದರೆ ಮಾತ್ರ ಪ್ರಾಮಾಣಿಕತೆಯಿಂದ ಸಮೃದ್ಧ ಭಾರತದ ಕಲ್ಪನೆ ಸಾಧ್ಯ ಎಂದರು ಸಂಸ್ಕಾರ ಭಾರತಿ ಸಂಸ್ಥೆಯ ಗುರುರಾಜ್ ಸಸಿಹಿತ್ತು, ಅಮರೇಶ ಎಚ್. ಎಂ. ಮಾರುತಿ ತೊಗಲುಗೊಂಬೆ ಕಲಾ ಟ್ರಸ್ಟ್ ನ ಸುಬ್ಬಣ್ಣ, ಸಂಸ್ಕಾರ ಭಾರತಿ ಸಂಸ್ಥೆಯ ಅಧ್ಯಕ್ಷ ಹಾಗೂ ಜಾನಪದ ಕಲಾವಿದ ಯಲ್ಲನಗೌಡ ಶಂಕರಬಂಡೆ, ಕಲಾವಿದ ತಿಪ್ಪೇಸ್ವಾಮಿ ಮುದ್ದಟನೂರು ಇದ್ದರು

ಹುಲುಗಪ್ಪ ತಂಡದಿಂದ ಜಾನಪದಗೀತೆಗಳ ಗಾಯನ ಗಮನ ಸೆಳೆಯಿತು. ಹಂದಿಹಾಳು ಶ್ರೀ ಮಹಾದೇವತಾತ ಕಲಾ ಸಂಘದಿಂದ ದನ ಕಾಯೋರ ದೊಡ್ಡಾಟ ಹಾಸ್ಯ ನಾಟಕ ಪುರುಷೋತ್ತಮ ಹಂದ್ಯಾಳು ಅವರ ನಿರ್ದೇಶನದಲ್ಲಿ ಪ್ರದರ್ಶನಗೊಂಡು ನೆರೆದ ನೂರಾರು ಜನರನ್ನು ನಗೆ ಗಡಲಲ್ಲಿ ತೇಲಿಸಿತು

## ಕಲಾ ಪ್ರತಿಭಾ ವಿವಿಧ ಸ್ಪರ್ಧೆಗಳ ಕಾರ್ಯಕ್ರಮ



ಕಲಘಟಗಿ: ಬಾಲ ಭವನ ಸೊಸೈಟಿ ಬೆಂಗಳೂರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಪಂಚಾಯತ , ಜಿಲ್ಲಾ ಬಾಲ ಭವನ ಸಮಿತಿ ಧಾರವಾಡ ಜಿಲ್ಲೆ, ತಾಲೂಕು ಬಾಲ ಭವನ ಸಮಿತಿ , ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ತಾಲೂಕು ಮಕ್ಕಳ ಸಾಹಿತ್ಯ ಪರಿಷತ್ತು ಕಲಘಟಗಿ ಇವರುಗಳ ಸಂಯುಕ್ತಾಶ್ರಯದಲ್ಲಿ 2025 –26 ನೇ ಸಾಲಿನ ಮಕ್ಕಳ ಕಲಾ ಪ್ರತಿಭಾ ಕಾರ್ಯಕ್ರಮ ಮತ್ತು ಪಠ್ಯೇತರ ಚಟುವಟಿಕೆಗಳು ಹಾಗೂ ವಿವಿಧ ಸ್ಪರ್ಧೆಗಳನ್ನು ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಹಿರೇಹೊನ್ನಿಹಳ್ಳಿ ಗ್ರಾಮದ ಕಿತ್ತೂರ ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಜರುಗಿತು .

ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ, ದ್ವಿತೀಯ, ತೃತೀಯ ಮತ್ತು ಸಮಾಧಾನಕರ ಸ್ಥಾನವನ್ನು ಪಡೆದುಕೊಂಡ ವಿದ್ಯಾರ್ಥಿಗಳಿಗೆ ಪದಕ ಹಾಗು ಪ್ರಮಾಣ ಪತ್ರಗಳನ್ನು ವಿತರಿಸಿ ಸನ್ಮಾನಿಸಲಾಯಿತು. ವಸತಿ ಶಾಲೆಯ ಪ್ರಾಂಶುಪಾಲ ಆಸಿಫ್ ಅಲಿ ನದಾಫ ಅವರಿಗೆ ಬಾಲ ಭವನದ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು,

ತಾಲೂಕು ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಲಿಂಗ ಒಡೆಯರ ಜಿಲ್ಲಾ ಬಾಲ ಭವನದ ಸಹಾಯಕ ಸಂಯೋಜಕಿ ಶ್ರೀಮತಿ ನಿರ್ಮಲಾ ಭುಜಂಗನವರ , ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಶೋಭಾ ಬರದೇಲಿ, ಕಾಸರಗೋಡು ಕನ್ನಡ ಭವನದ ಜಿಲ್ಲಾ ಅಧ್ಯಕ್ಷ ಪ್ರಭುಲಿಂಗ ರಂಗಾಪುರ, ಕರ್ನಾಟಕ ಸಂಗ್ರಾಮ ಸೇನೆಯ ತಾಲೂಕಾಧ್ಯಕ್ಷ ಸಾತಪ್ಪ ಕುಂಕೂರ, ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ತಾಲೂಕಾಧ್ಯಕ್ಷ ವೀರಣ್ಣ ಕುಬಸದ, ಕರ್ನಾಟಕ ರತ್ನ ಡಾ//ರಾಜಕುಮಾರ ಕನ್ನಡ ಸಾಂಸ್ಕೃತಿಕ ವೇದಿಕೆ ತಾಲೂಕಾಧ್ಯಕ್ಷ ರವಿರಾಜ ಬಡಿಗೇರ ಸೇರಿದಂತೆ ಗ್ರಾಮದ ಅಂಗನವಾಡಿ ಕಾರ್ಯಕರ್ತೆ–ಯರು, ಬೋಧಕ ಬೋಧಕೇತರ ಸಿಬ್ಬಂದಿ, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಪ್ರವಾಸ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯ–ಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಅವರು ಜನವರಿ 26ರಂದು ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಜನವರಿ 26ರ ಬೆಳಿಗ್ಗೆ 6.10ಕ್ಕೆ ಕಲಬುರಗಿ ನಗರದಿಂದ ನಿರ್ಗಮಿಸಿ ರಾಯಚೂರು ನಗರಕ್ಕೆ ಆಗಮಿಸಿ ಬೆಳಿಗ್ಗೆ 9 ಗಂಟೆಗೆ ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಭೇಟಿ ನೀಡುವರು. ಬಳಿಕ ಬೆಳಿಗ್ಗೆ 10 ಗಂಟೆಗೆ ರಾಯಚೂರಿನಿಂದ ಹೊರಟು ಬೆಳಿಗ್ಗೆ 11ಕ್ಕೆ ದೇವದುರ್ಗ ತಾಲೂಕಿನ ಗಬ್ಬೂರಿನ ಶ್ರೀಬೂದಿ ಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಳ್ಳಲಾದ್ದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಮಧ್ಯಾಹ್ನ 1.45ಕ್ಕೆ ದೇವದುರ್ಗ ತಾಲೂಕು ಆಸ್ಪತ್ರೆಗೆ ಬಳಿಕ 3 ಗಂಟೆಗೆ ದೇವದುರ್ಗ ಪೊಲೀಸ್ ಠಾಣೆಗೆ ಭೇಟಿ ನೀಡುವರು. ಸಂಜೆ 4.30ಕ್ಕೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಪೋಸ್ಟ್ ಮೆಟ್ರಿಕ್ ಬಾಲಕಿಯರ ವಸತಿ ನಿಲಯಕ್ಕೆ ಭೇಟಿ ನೀಡುವರು.

ಸಂಜೆ 5.30ಕ್ಕೆ ದೇವದುರ್ಗದಿಂದ ನಿರ್ಗಮಿಸಿ ರಾಯಚೂರಿಗೆ ಆಗಮಿಸಿ ರಾತ್ರಿ 11.10ಕ್ಕೆ ರಾಯಚೂರಿನಿಂದ ರೈಲು ಮಾರ್ಗವಾಗಿ ಕೇಂದ್ರ ಸ್ಥಾನ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಧಿಕಾರಿಗಳು ನಿಖರ ಮಾಹಿತಿ ನೀಡಿ: ಜಿಲ್ಲಾಧಿಕಾರಿ ಇಟ್ನಾಳ

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ಸುಸ್ಥಿರ ಜಿಲ್ಲಾ ಅಭಿವೃದ್ಧಿ ದೂರದೃಷ್ಟಿ ಯೋಜನೆ–2031 ವರದಿಯನ್ನು ತಯಾರಿಸುವ ಸಂಬಂಧ ಸಂಪನ್ಮೂಲ ವ್ಯಕ್ತಿಗಳಿಗೆ ವಿವಿಧ ಇಲಾಖೆಯ ಅಧಿಕಾರಿಗಳು ನಿಖರ ಮಾಹಿತಿ ನೀಡಬೇಕೆಂದು ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಹೇಳಿದರು.

ಅವರು ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಕೊಪ್ಪಳ ಇವರ ಸಹಯೋಗದಲ್ಲಿ ಜಿಲ್ಲಾ ಪಂಚಾಯತ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮಾನವ ಅಭಿವೃದ್ಧಿ ವರದಿ–2025 ಹಾಗೂ ಸಮಗ್ರ ಮತ್ತು ಸುಸ್ಥಿರ ಜಿಲ್ಲಾ ಅಭಿವೃದ್ಧಿ ದೂರದೃಷ್ಟಿ ಯೋಜನೆ–2031 ವರದಿಯನ್ನು ತಯಾರಿಸುವ ಕುರಿತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ಹಮ್ಮಿಕೊಂಡಿದ್ದ ಒಂದು ದಿನದ ತರಬೇತಿ ಕಾರ್ಯಾಗಾರದ ಅಧ್ಯಕ್ಷತೆವಹಿಸಿ ಮಾತನಾಡಿದರು.

ಕೃಷಿ, ತೋಟಗಾರಿಕೆ, ಪಶು ಸಂಗೋಪನೆ ಸೇರಿದಂತೆ ಇತರೆ ವಿವಿಧ ಇಲಾಖೆಯ ,ಆದಾಯ ಹೇಗೆ ಹೆಚ್ಚಿಸಬೇಕು ಎಂಬುದರ ಕುರಿತು ಮುಂದಾಲೋಚನೆ ಜೊತೆಗೆ ಎಲ್ಲಿ ಗ್ಯಾಪಗಳಿವೆ ಅವುಗಳನ್ನು ಹೇಗೆ ಸರಿಪಡಿಸಬೇಕು ಎಂಬುದರ ಕುರಿತು ಎಲ್ಲರೂ ನಿಖರವಾದ ಮಾಹಿತಿ ನೀಡಬೇಕು. ತಾವು ನೀಡುವ ಮಾಹಿತಿ ಬರುವ ದಿನಗಳಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಪೂರಕವಾಗಲಿದೆ ಎಂದು ಅಧಿಕಾರಿಗಳಿಗೆ ಹೇಳಿದರು.

1999 ರಿಂದ ಈ ವರದಿಯನ್ನು ಕರ್ನಾಟಕದಲ್ಲಿ ಮಾಡಲು ಶುರು ಆಯಿತು. ಇದನ್ನು ಪುನ: ಆಗಾಗ ಮಾಡಲಾಗುತ್ತದೆ. 2015 ವರದಿಯನ್ನು




2025 ಹೋಲಿಕೆ ಮಾಡಲಾಗುತ್ತದೆ. ಶಿಕ್ಷಣ, ಆರೋಗ್ಯ, ಜನರ ಜೀವನ ಮಟ್ಟ ಇದರಿಂದ ತಿಳಿಯುತ್ತದೆ. 2022 ರ ವರದಿ ಪ್ರಕಾರ ಬಡತನ ಜಿಲ್ಲೆಗಳ ಪಟ್ಟಿ ತೆಗೆದುಕೊಂಡರೆ ಅದರಲ್ಲಿ ಕೊಪ್ಪಳ ಜಿಲ್ಲೆಯ ಹೆಸರು ಬರುತ್ತದೆ. ನಮ್ಮ ವರದಿ ಜಿಲ್ಲೆಯ ಅಭಿವೃದ್ಧಿಗೆ ಪೂರವಾಗಿರುವುದರ ಜೊತೆಗೆ ನಿಖರವಾಗಿರಬೇಕು. ಈ ಹಿಂದೆ ಉಡುಪಿ ಮತ್ತು ವಿಜಯಪುರ ಜಿಲ್ಲೆಯ ವರದಿಗಳು ರಾಷ್ಟ್ರಮಟ್ಟದಲ್ಲಿ ಅಕ್ಷೆಪ್ಪ ಮಾಡಿದ್ದರು. ತಾವು ಸರಿಯಾದ ಪ್ಯಾರಾಮೀಟರ್ ಪ್ರಕಾರವೇ ಮಾಹಿತಿ ನೀಡಿ ಎಂದು ಹೇಳಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ ಅವರು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿ ಇಂದಿನ ತರಬೇತಿ ಕಾರ್ಯಾಗಾರದ ಉದ್ದೇಶ ಜಿಲ್ಲೆಯ ಮಾನವ ಅಭಿವೃದ್ಧಿ ಯೋಜನೆ ತಯಾರಿಸುವ ಕುರಿತು ಮಾಹಿತಿ ನೀಡುವುದಾಗಿದೆ. ಈ ಕುರಿತು ಸಂಪನ್ಮೂಲ ವ್ಯಕ್ತಿಗಳು ತಮಗೆ ವಿವರವಾದ ಮಾಹಿತಿ ನೀಡಲಿದ್ದಾರೆ. ಅಧಿಕಾರಿಗಳು ಯಾವುದೇ ಸುಳ್ಳು ಮಾಹಿತಿ ಕೊಡಭಾರದು. ಸರಿಯಾದ ಮಾಹಿತಿ ನೀಡುವ ಮೂಲಕ ಈ ಕಾರ್ಯಕ್ರಮ ಯಶಸ್ವಿಗೆ ಎಲ್ಲರೂ ಸಹಕಾರ ನೀಡಬೇಕೆಂದರು.

ಈ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ನಿವೃತ್ತ ಜಂಟಿ ನಿರ್ದೇಶಕರಾದ ಶ್ರೀ ನಿವಾಸ, ಹಾವೇರಿ ವಿಶ್ವವಿದ್ಯಾಲಯ ಕುಲಸಚಿವರು ಹಾಗೂ ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ಪ್ರೋ. ಎಸ್.ಟಿ ಬಾಗಲಕೋಟಿ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಪ್ರೋ. ಹೆಚ್. ಹೆಚ್. ಭರಡಿ ಹಾಗೂ ಸರಕಾರಿ ಪ್ರಥಮ ದರ್ಜೆ ಕಾಲೇಜು ನರಗುಂದ ಪ್ರಾಧ್ಯಾಪಕರಾದ ಡಾ. ದುರ್ಗೇಶ ಪೂಜಾರ ಅವರು ಸಮಗ್ರ ಮತ್ತು ಸುಸ್ಥಿರ ಜಿಲ್ಲಾ ಅಭಿವೃದ್ಧಿ ದೂರದೃಷ್ಟಿ ಯೋಜನೆ–2031 ವರದಿಯನ್ನು ತಯಾರಿಸುವ ಕುರಿತು ಅಧಿಕಾರಿಗಳಿಗೆ ಸವಿವರವಾದ ಮಾಹಿತಿ ನೀಡಿದರು.

ಈ ಕಾರ್ಯಾಗಾರದಲ್ಲಿ ಜಿಲ್ಲಾ ಪಂಚಾಯತ ಯೋಜನಾಧಿಕಾರಿ ಡಿ.ಮಂಜುನಾಥ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಮಂಜುನಾಥ ಗುಂಡೂರ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಅಜ್ಜಪ್ಪ ಸೊಗಲದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ವೈ. ಶೆಟ್ಟೆಪ್ಪನವರ್, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಜಗದೀಶ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿಠಲ ಜಾಬಗೌಡರ್, ಲೀಡಬ್ಯಾಂಕ್ ಮ್ಯಾನೇಜರ್ ಮಾರುತಿ ಸೇರಿದಂತೆ ಇತರೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಗ್ರಾಮೀಣ ಪ್ರದೇಶದಲ್ಲಿ ಜನವರಿ 23ರಂದು ವಿದ್ಯುತ್ ವ್ಯತ್ಯಯ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ವ್ಯಾಪ್ತಿಗೆ ಬರುವ 33/11 ಕೆವಿ ಇಡಪನೂರು ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಜನವರಿ 23ರ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 03 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ವಿದ್ಯುತ್ ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಉತ್ಸವ: ಫೆ, 4ರಿಂದ ಹೆಲಿಕ್ಯಾಪ್ಟರ್ ರೈಡ್

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ಅಂಗವಾಗಿ ಫೆಬ್ರವರಿ 4ರಿಂದ 9ರವರೆಗೆ ರಾಯಚೂರು ಜಿಲ್ಲೆಯ ನಾಗರೀಕರಿಗೆ ಬಾನಂಗಳದಿಂದ ರಾಯಚೂರು ವೀಕ್ಷಣೆಗೆ ರಾಯಚೂರು ಬೈಸ್ಕಯ್ ಎಂಬ ವಿಶೇಷ ಹೆಲಿಕ್ಯಾಪ್ಟರ್ ರೈಡ್ ಕಾರ್ಯಕ್ರಮವನ್ನು ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಹೆಲಿಕ್ಯಾಪ್ಟರ್ ರೈಡ್ ಕಾರ್ಯಕ್ರಮವು ಫೆಬ್ರವರಿ 4ರಿಂದ 9ರವರೆಗೆ ಪ್ರತಿ ದಿನ ಬೆಳಗ್ಗೆ 8 ರಿಂದ ಮಧ್ಯಾಹ್ನ 12 ಗಂಟೆವರೆಗೆ ಹಾಗೂ ಮಧ್ಯಾಹ್ನ 12.30 ರಿಂದ ಸಂಜೆ 4.30ರವರೆಗೆ ಇರುತ್ತದೆ. ಪ್ರತಿಯೊಬ್ಬರಿಗೆ 3,500 ರೂ. ಶುಲ್ಕ ಇರುತ್ತದೆ. 2 ವರ್ಷದೊಳಗಿನ ಮಕ್ಕಳಿಗೆ ಉಚಿತವಾಗಿರುತ್ತದೆ.

ಆನ್‌ಲೈನ್ ಟಿಕೇಟ್ ಬುಕ್ಕಿಂಗ್‌ಗೆ ವೆಬ್‌ಸೈಟ್ ವಿಳಾಸ: www.helitaxii.com ಅಥವಾ https://share.google/cEDrwhwrhJ-dOvBFYK ಮೂಲಕ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಫ್‌ಲೈನ್ ಟಿಕೇಟ್‌ಗಾಗಿ ಮೊಬೈಲ್ ಸಂಖ್ಯೆ: 9482565016, 9448527188, 9611112356, 7676522104, 6362238100ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಾಂಗ್ರೆಸ್ ನಡೆಗೆ ಆಕ್ರೋಶ

• **ಮಲ್ಲಮ್ಮ ನುಡಿವಾರ್ತೆ ಬಾಗಲಕೋಟೆ:**

ವಿಧಾನ ಮಂಡಲದ ಜಂಟಿ ಅಧಿವೇಶನದ ಭಾಷಣಕ್ಕೆ ಆಗಮಿಸಿದ್ದ ರಾಜ್ಯಪಾಲರ ಮೇಲೆ ದೂಂಡಾ ವರ್ತನೆ ತೋರಿರುವ ಕಾಂಗ್ರೆಸ್ ಸದಸ್ಯರನ್ನು ಅಮಾನತಿನಲ್ಲಿಡಬೇಕು ಎಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಒತ್ತಾಯಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ರಾಜ್ಯಪಾಲರು ರಾಜ್ಯದ ಸಾಂವಿಧಾನಿಕ ಮುಖ್ಯಸ್ಥರಾಗಿರುತ್ತಾರೆ. ಏನು ಭಾಷಣ ಮಾಡಬೇಕೆಂಬುದು ಅವರ ವಿವೇಚನೆಗೆ ಬಿಟ್ಟ ವಿಷಯವಾಗಿರುತ್ತದೆ. ರಾಜ್ಯ ಸರ್ಕಾರ ನೀಡಿದೆಲ್ಲವನ್ನೂ ಓದಲೇಬೇಕೆಂಬುದು ಪ್ರಜಾಪ್ರಭುತ್ವ ವಿರೋಧಿ ನಡೆಯಾಗಿದೆ. ವಿಧಾನಸಭೆಯಲ್ಲಿನ ಕೈ ಸದಸ್ಯರ ವರ್ತನೆ ದೇಶದ ಎದುರು ರಾಜ್ಯ ತಲೆತಗ್ಗಿಸುವಂತೆ ಮಾಡಿದೆ ಎಂದು ಕಿಡಿಕಾರಿದ್ದಾರೆ. ಕಾಂಗ್ರೆಸ್ ಹಿರಿಯ ನಾಯಕ ಬಿ.ಕೆ. ಹರಿಪ್ರಸಾದ್ ರಾಜ್ಯಪಾಲರ ಮೇಲೆ ಎರಗಿ ಹೋಗಿರುವುದು ಖಂಡನೀಯ. ಆ ಸ್ಥಾನಕ್ಕೆ ಅಗೌರವ ತೋರುವ ರೀತಿಯಲ್ಲಿ ಅವರು ನಡೆದುಕೊಂಡಿದ್ದಾರೆ. ಚುನಾವಣೆಗಳಲ್ಲಿನ ನಿರಂತರ ಸೋಲಿನಿಂದ ಹತಾಶರಾಗಿರುವ ಕಾಂಗ್ರೆಸ್ ನಾಯಕರು ಕೇಂದ್ರ ಸರ್ಕಾರದ ಪ್ರತಿಯೋಜನೆಗೂ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಸುಳ್ಳು ಹೇಳುವುದರ ಮೂಲಕ ಜನರ ದಾರಿ ತಪ್ಪಿಸುತ್ತಿದ್ದಾರೆ. ತಾವು ಬರೆದುಕೊಡುವ ಸುಳ್ಳನ್ನು ಒತ್ತಾಯಪೂರ್ವಕವಾಗಿ ರಾಜ್ಯಪಾಲರ ಮೂಲಕ ಹೇಳಿಸಲು ಹೊರಟಿರುವುದು ಅಕ್ಷಮ್ಯ ಎಂದು ತಿಳಿಸಿದ್ದಾರೆ.

## ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ರಾಜ್ಯ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿಗಳು ಸಮರ್ಪಕವಾಗಿ ಅನುಷ್ಠಾನಿಸಲು ಕೊಪ್ಪಳ ತಾಲೂಕ ಮಟ್ಟದ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯು ಬಾಲಚಂದ್ರನ್. ಎಸ್ ರವರ ಅಧ್ಯಕ್ಷತೆಯಲ್ಲಿ ಮುನಿರಾಬಾದ ಡ್ಯಾಂ ಗ್ರಾಮ ಪಂಚಾಯತಿಯ ಸಭಾಂಗಣದಲ್ಲಿ ಜರುಗಿತು.

ಗೃಹಲಕ್ಷ್ಮಿ ಫಲಾನುಭವಿಗಳಿಗೆ ಸಪ್ಟಂಬರ್–2025ರವರೆಗೆ ಅನುದಾನ ಜಮೆಯಾಗಿರುವ ಕುರಿತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾಧಿಕಾರಿಗಳು ಸಭೆಯಲ್ಲಿ ಗಮನಕ್ಕೆ ತಂದರು. ಅಕ್ಟೋಬರ್–2025ರ ಪಾವತಿಗೆ ಬಾಕಿ ಇದ್ದು ಖಜಾನೆಯಿಂದ ಹೊಂದಾಣಿಕೆ ಮಾಡಬೇಕಾಗಿರುತ್ತದೆ.

ಸದಸ್ಯರಾದ ರಮೇಶ ಹ್ಯಾಟಿ ಮಾತನಾಡಿ ಐಟಿ, ಜಿಎಸ್‌ಟಿ ನೊಂದಣಿಯಾದ ಫಲಾನುಭವಿಗಳು ಸೌಲಭ್ಯ ಪಡೆಯಲು ಅನರ್ಹರಾಗಿರುತ್ತಾರೆ. ಈ ಕುರಿತು ಕ್ರಮವಹಿಸುವಂತೆ ತಾಲೂಕ ಮತ್ತು ಜಿಲ್ಲಾ ಅಧ್ಯಕ್ಷರಲ್ಲಿ ಮನವಿ ಮಾಡಿದರು. ಇದು ರಾಜ್ಯಮಟ್ಟದ ಸಮಸ್ಯೆಯಾಗಿರುವದರಿಂದ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇರುವದರಿಂದ ಮತ್ತೋಮ್ಮೆ ರಾಜ್ಯಮಟ್ಟದ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅಧ್ಯಕ್ಷರಾದ ರಡ್ಡಿ ಶ್ರೀನಿವಾಸ ಸಭೆಗೆ ವಿವರಿಸಿದರು. ಸದಸ್ಯೆ ಜ್ಯೋತಿ ಗೊಂಡಬಾಳ ಮಾತನಾಡಿ ಫೆಬ್ರುವರಿ ಮತ್ತು ಮಾರ್ಚ–2025ರ ಅನುದಾನ ಇದುವರೆಗೆ ಜಮೆಯಾಗಿರುವದಿಲ್ಲ. ಈ ವಿಷಯ ರಾಜ್ಯಮಟ್ಟದ ಸಮಸ್ಯೆ ಇದ್ದು ಬೆಳಗಾವಿ ಅಧಿವೇಶನದಲ್ಲಿ ಚರ್ಚೆಯಾಗಿದೆ ತಾಂತ್ರಿಕ ಸಮಸ್ಯೆಯಾಗಿದ್ದು ಅನುದಾನ ಬಿಡುಗಡೆಗೆ ಕ್ರಮವಹಿಸುವ ಕುರಿತು ಜಿಲ್ಲಾಧ್ಯಕ್ಷರು ವಿವರಿಸಿದರು.

ಸದಸ್ಯರಾದ ಅನ್ನದಾನಯ್ಯಸ್ವಾಮಿ ಮಾತನಾಡಿ ಅಳವಂಡಿ ಮಾರ್ಗದಾಳು ಮತ್ತು ಬೆಟಗೇರಿ ಗ್ರಾಮ ವಿದ್ಯುತ್ ಪ್ರತಿನಿಧಿ ಬಿಲ್ ವಿತರಿಸುವಾಗ ಗ್ರಾಹಕರ ಜೊತೆಗೆ ಅನುಚಿತವಾಗಿ ವರ್ತಿಸುತ್ತಾರೆ ಈ ಬಗ್ಗೆ ಅವರ ಮೇಲೆ ಸೂಕ್ತ ಕ್ರಮವಹಿಸುವಂತೆ ಸಭೆಯ ಗಮನಕ್ಕೆ ತಂದರು. ಜೆಸ್ಕಾಂ ಅಧಿಕಾರಿಗಳು ಈಗಾಗಲೇ ಅವರಿಗೆ ನೋಟಿಸ್ ನೀಡಲಾಗಿದ್ದು ಮತ್ತೊಮ್ಮೆ ನೋಟಿಸ್ ಜಾರಿ ಮಾಡಿ ಸೂಕ್ತ ಕ್ರಮ ಜರುಗಿಸಲಾಗುವದು ಸಭೆಗೆ ವಿವರಿಸಿದರು. ಸದಸ್ಯರಾದ ದೇವರಾಜ ನಡುವಿನಮನಿ ಮಾತನಾಡಿ ಹೇಮರಡ್ಡಿ ಮಲ್ಲಮ್ಮನ ಗುಡಿ ಜಂಗಲ್ ಕಟಿಂಗ್ ಮಾಡುವಂತೆ ತಿಳಿಸಿದರು. ಹೇಮರಡ್ಡಿ ಮಲ್ಲಮ್ಮನ ಗುಡಿ ಹತ್ತಿರ ವಿದ್ಯುತ್ ಕಂಬಗಳ ಸ್ಥಳಾಂತರಗೊಳಿಸಿದ್ದು ವೈಯರ ಹಾಗೇ ಬಿಟ್ಟಿದ್ದು ಈ ಬಗ್ಗೆ ಸೂಕ್ತ ಕ್ರಮವಹಿಸಲು ಅಧಿಕಾರಿಗಳಿಗೆ ತಿಳಿಸಿದರು.

ಮುನಿರಾಬಾದ ಡ್ಯಾಂ ಗ್ರಾಮದಲ್ಲಿ ಬಸ್ ನಿಲ್ದಾಣಕ್ಕೆ ಬರದೇ ಹೊರಗಡೆಯಿಂದ ಸಂಚರಿಸುವ ಕುರಿತು ಈ ಹಿಂದಿನ ಸಭೆಯಲ್ಲಿ ತಿಳಿಸಲಾಗಿತ್ತು. ಅದರಂತೆ ಕೆಲವೋಂದು ಬಸ್ ಗಳು ಒಳಗಡೆ ಬರುತ್ತಿಲ್ಲವಾದ್ದರಿಂದ ಮತ್ತೋಮ್ಮೆ ಮಾರ್ಗಸೂಚಿ ಪ್ರಕಾರ ಮುನಿರಾಬಾದ ಡ್ಯಾಂ ಗ್ರಾಮದಲ್ಲಿ ಬಸ್ ನಿಲ್ದಾಣಕ್ಕೆ ಬರುವಂತೆ ಕ್ರಮವಹಿಸಲು ಅಧ್ಯಕ್ಷರು ಇಲಾಖಾಧಿಕಾರಿಗಳಿಗೆ ಸೂಚಿಸಿದರು. ಸದಸ್ಯರಾದ ಪರಶುರಾಮ ಕೊರವರ ಮಾತನಾಡಿ 50 ಕಿ.ಮಿ ಒಳಗಡೆ ಸಂಚರಿಸುವ ವಾಹನಗಳಲ್ಲಿ ಜನಸಂದಣಿ ಹೆಚ್ಚಿರುವದರಿಂದ 2+2 ಆಸನ ವ್ಯವಸ್ಥೆ ಇರುವ ವಾಹನ ಖರೀದಿಸಲು ಬೇಡಿಕೆ ಸಲ್ಲಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು. ಸದಸ್ಯರಾದ ಮಾನ್ವಿ ಪಾಶಾ ಮಾತನಾಡಿ ಕೊಪ್ಪಳ ಕೇಂದ್ರ ಬಸ್ ನಿಲ್ದಾಣದಲ್ಲಿ ಶೌಚಾಲಯ ನಿರ್ಮಾಣವಾಗಿ ಹಲವು ವರ್ಷಗಳಾಗಿದ್ದು ಇನ್ನುವರೆಗೆ ಬಳಕೆಗೆ ಮುಕ್ತವಾಗಿಲ್ಲ.



ವಿಳಂಬವಾಗಿರುವ ಕುರಿತು ಸಭೆಯಲ್ಲಿ ಪ್ರಶ್ನಿಸಿದರು. ಶುಲ್ಕ ಸಹಿತ ಅಥವಾ ಶುಲ್ಕರಹಿತ ಉಪಯೋಗ ಮಾಡುವ ಕುರಿತು ಮಾರ್ಗಸೂಚಿ ಬಂದಿರುವದಿಲ್ಲ. ಈ ಬಗ್ಗೆ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಪತ್ರ ವ್ಯವಹಾರ ಮಾಡಲಾಗಿದೆ ಘಟಕ ವ್ಯವಸ್ಥಾಪಕರು ವಿವರಿಸಿದರು.

ಸದಸ್ಯರಾದ ಜ್ಯೋತಿ ಗೊಂಡಬಾಳ ಮಾತನಾಡಿ ನ್ಯಾಯಬೆಲೆ ಅಂಗಡಿಗಳಲ್ಲಿ ಪರಿಶೀಲನಾ ವೇಳೆಯಲ್ಲಿ ಅಗತ್ಯವಿರುವ ದಾಖಲಾತಿಗಳನ್ನು ನಿರ್ವಹಿಸಿರುವದಿಲ್ಲ. ಈ ಬಗ್ಗೆ ಕ್ರಮವಹಿಸಲು ಆಹಾರ ನಿರಿಕ್ಷಕರಿಗೆ ತಿಳಿಸಿದರು. ಪಡಿತರ ಚೀಟಿಗಳು ಬಹಳಷ್ಟು ರದ್ದಾಗಿದ್ದು ಅವುಗಳಿಗೆ ಸ್ಥಾನಿಕ ಪರಿಶೀಲನೆ ಮಾಡಿ ಅವಶ್ಯಕ ದಾಖಲಾತಿಗಳನ್ನು ಪಡೆದು ಹೊಸದಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕ್ರಮವಹಿಸಲಾಗುವದು ಮತ್ತು ನ್ಯಾಯಬೆಲೆ ಅಂಗಡಿಗಳ ಬಗ್ಗೆ ಏನಾದರೂ ದೂರುಗಳಿದ್ದಲ್ಲಿ ಲಿಖಿತವಾಗಿ ದೂರು ಸಲ್ಲಿಸಿದಲ್ಲಿ ಸನ್ನದುದಾರರ ಮೇಲೆ ಕ್ರಮಜರುಗಿಸಲಾಗುವದು ಎಂದು ತಹಶೀಲ್ದಾರರಾದ ವಿಠ್ಠಲ್ ಚೌಗಲಾ ವಿವರಿಸಿದರು.

ಯುವ ನಿಧಿ ಸೌಲಭ್ಯ ಕುರಿತು ಇಲಾಖಾ ವತಿಯಿಂದ ಹೆಚ್ಚಿನ ಪ್ರಮಾಣದಲ್ಲಿ ಪ್ರಚಾರ ಕೈಗೊಂಡು ನಿರುದ್ಯೋಗ ಯುವಕರು ಯುವ ನಿಧಿ ಸೌಲಭ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯುವಂತೆ ಇಲಾಖಾಧಿಕಾರಿಗಳಿಗೆ ಸಭಾಧ್ಯಕ್ಷರು ನಿರ್ದೇಶನ ನೀಡಿದರು.

ಸಭೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ, ತಾಲೂಕ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ, ತಹಶೀಲ್ದಾರ ವಿಠ್ಠಲ್ ಚೌಗಲಾ, ಅನುಷ್ಠಾನ ಸಮಿತಿ ಸದಸ್ಯರಾದ ದೇವರಾಜ ನಡುವಿನಮನಿ, ಜ್ಯೋತಿ ಗೊಂಡಬಾಳ, ರಮೇಶ ಹ್ಯಾಟಿ, ಮಾನ್ವಿ ಪಾಶಾ, ಅನ್ನದಾನಯ್ಯಸ್ವಾಮಿ, ಪರಶುರಾಮ ಕೊರವರ,ಲಕ್ಷ್ಮಣ ಡೊಳ್ಳಿನ, ಪಂಚ ಗ್ಯಾರಂಟಿ ಯೋಜನೆಗಳ ಇಲಾಖಾಧಿಕಾರಿಗಳು, ಗ್ರಾಮ ಪಂಚಾಯತ ಅಧ್ಯಕ್ಷರಾದ ಆಯೂಬ್ ಖಾನ್, ಉಪಾಧ್ಯಕ್ಷರಾದ ಸೌಭಾಗ್ಯ ನಾಗರಾಜ, ಸರ್ವ ಸದಸ್ಯರು, ಪಂಚಾಯತ ಅಭಿವೃದ್ಧಿ ಅಧಿಕಾರಿ ಮಹೇಶ ಸಜ್ಜನ, ತಾಲೂಕ ಪಂಚಾಯತಿ ಸಿಬ್ಬಂದಿಗಳು ಹಾಜರಿದ್ದರು.

# ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಭಾರತದ ಚುನಾವಣಾ ಆಯೋಗ, ಜಿಲ್ಲಾ ಚುನಾವಣಾಧಿಕಾರಿಗಳ ಕಾರ್ಯಾಲಯ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ 'ನನ್ನ ಭಾರತ, ನನ್ನ ಮತ' ಎನ್ನುವ ಘೋಷವಾಕ್ಯದಡಿ ಜ.25 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಜಿಲ್ಲಾ ಪಂಚಾಯತ್ ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ. ಶಾಂತಿ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಜಿಲ್ಲಾ ಚುನಾವಣಾಧಿಕಾರಿ ಆಗಿರುವ ಜಿಲ್ಲಾಧಿಕಾರಿ ನಾಗೇಂದ್ರಪ್ರಸಾದ್. ಕೆ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್. ಹೊಸಮನೆ, ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರಿಸ್ ಸುಮೇರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪೆನ್ನೇಕರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್., ಮಹಾನಗರ ಪಾಲಿಕೆಯ ಆಯುಕ್ತ ಪಿ.ಎಸ್.ಮಂಜುನಾಥ, ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಜಿಲ್ಲಾಡಳಿತ ಪ್ರಕಟಣೆ ತಿಳಿಸಿದೆ.

# ಮೀನುಗಾರಿಕೆ ಸಲಕರಣೆ ಕಿಟ್ ವಿತರಣೆ: ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಮೀನುಗಾರಿಕೆ ಇಲಾಖೆ ವತಿಯಿಂದ 2025-26ನೇ ಸಾಲಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀನುಗಾರರಿಗೆ ಉಚಿತ ಮೀನುಗಾರಿಕೆ ಸಲಕರಣೆಗಳ ಕಿಟ್ ವಿತರಿಸಲು ಉದ್ದೇಶಿಸಲಾಗಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಅಗತ್ಯ ದಾಖಲೆಗಳೊಂದಿಗೆ ಆನ್ ಲೈನ್ ವೆಬ್ ಸೈಟ್ https://ballari.nic.in ಅಥವಾ ಬಳ್ಳಾರಿ, ಸಂಡೂರು ತಾಲ್ಲೂಕಿನ ಮೀನುಗಾರಿಕೆ ಇಲಾಖೆಯ ಕಚೇರಿಯ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜ.31 ಕೊನೆಯ ದಿನ.

ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕರ ಕಚೇರಿ ಅಥವಾ ಬಳ್ಳಾರಿ, ಸಂಡೂರು ತಾಲ್ಲೂಕು ಸಹಾಯಕ ನಿರ್ದೇಶಕರ ಕಚೇರಿಗೆ ಭೇಟಿ ನೀಡಬಹುದು ಎಂದು ಮೀನುಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 24 ರಂದು ವಿದ್ಯುತ್ ವ್ಯತ್ಯಯ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ-2 ರ ವ್ಯಾಪ್ತಿಯಲ್ಲಿ 110/11ಕೆ.ವಿ ಜಿಲ್ಲಾ ಕೋರ್ಟ್ ಲೈನುಗಳ ನಿರ್ವಹಣೆ ಕಾರ್ಯ ಕೈಗೊಳ್ಳುತ್ತಿರುವುರಿಂದ ಜ.24 ರಂದು ಬೆಳಿಗ್ಗೆ 09 ರಿಂದ ಸಂಜೆ 06 ಗಂಟೆಯವರೆಗೆ ಎಫ್-6 ರ ವ್ಯಾಪ್ತಿಯ ತಾಳೂರು ರೋಡ್, ಸ್ನೇಹ ಕಾಲೋನಿ, ಶ್ರೀನಗರ, ರೇಣುಕಾ ನಗರ, ಭಗತ್‌ಸಿಂಗ್ ನಗರ, ಕನ್ನಡ ನಗರ, ಮಹಾನಂದಿ ಕೊಟ್ಟಂ, ಪಾರ್ವತಿ ನಗರ, ಎಸ್.ಪಿ.ಸರ್ಕಲ್, ಶಾಸ್ತ್ರೀ ನಗರ, ಬ್ಯಾಂಕ್ ಕಾಲೋನಿ, ಬಸವನಕುಂಟೆ, ಸಿರುಗುಪ್ಪ ರೋಡ್, ರಾಮ ನಗರ, ಅವಂಬಾವಿ, ಜಿಲ್ಲಾ ಕೋರ್ಟ್ ಸಂಕೀರ್ಣ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಹಾಗಾಗಿ ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


# CITATION

**IN THE COURT OF THE V ADDL. J.M.F.C AT KALABURAGI**

**Crl. Misc. No. 113/2025**

1) **KALYANIS/OSHIVASHARANAPPA** Age: 33 years, Occ: agriculture

2) **SHANTAPPAS/OSHIVASHARANAPPA** Age: 39 years, Occ: agriculture Both are R/o, Ashtaga village. Tq: Dist: Kalaburagi (Grameein Police Station Kalaburagi)

...Petitioners...

…V/S…

The Registration of Birth & Deaths
The Tahasildar Kalaburagi …
**Respondent..**

**PETITION U/SEC. 13(3) OF BIRTH & DEATH REGISTRATION ACT**

Whereas, the petitioners herein have filed the above petition for issue of directions to the respondent office, for issuing the death certificate that, the father of the petitioner deceased father by name i.e, Late. Shivasharanappa S/o Eshwarappa Kusumbi, was expired on: 04-11-1990 in natural death at in the above said address.

Therefore, the persons interested in the matter relating to issue of directions for issue death certificate of Late. Shivasharanappa S/o Eshwarappa Kusumbi, was expired on: 04-11-1990, are hereby directed to appear in person or pleader duly instructed on: 27/2/2026 at 11.00am falling which the matter will be heard and decided on merits

**Given under my hand and seal of the court on this the 21th day of Jan-2026 at Kalaburagi.**

( By order of court)
Chief Ministerial officer,
V AddI JMFC Court, Kalaburagi.


## ಇದೇನು ಸುವರ್ಣ ಬಳ್ಳಾರಿಯಾ ಗುಂಡಿಗಳ ಬಳ್ಳಾರಿಯಾ

# ರಸ್ತೆಗಳ ಗುಂಡಿ ಮುಚ್ಚಲು ಆಗ್ರಹಿಸಿ ಕರವೇ ಪ್ರತಿಭಟನೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,:

ನಗರದ ರಸ್ತೆಗಳ ಗುಂಡಿ ಮುಚ್ಚಲು ಆಗ್ರಹಿಸಿ ಇಂದು ಇಲ್ಲಿ ರಸ್ತೆಯಲ್ಲಿನ ಕುಣಿಗಳಲ್ಲಿ ಗಿಡಗಳನ್ನು ಇಡುವ ಮೂಲಕ ಪ್ರವೀಣ ಶೆಟ್ಟಿ ಬಣದ ಕರ್ನಾಟಕ ರಕ್ಷಣಾ ವೇದಿಕೆಯ ಮುಖಂಡರು, ಕಾರ್ಯಕ್ರತರು ಪ್ರತಿಭಟನೆ ನಡೆಸಿ ಕೂಡಲೇ ಕುಣಿಗಳನ್ನು ಮುಚ್ಚಲು ಮುಂದಾಗಬೇಕೆಂದು ಪಾಲಿಕೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದೆ.

ಇದೇನು ಸುವರ್ಣ ಬಳ್ಳಾರಿಯಾ ಇಲ್ಲಾ ಗುಂಡಿಗಳ ಬಳ್ಳಾರಿಯಾ ಎಂದು ಘೋಷಣೆ ಕೂಗುತ್ತ. ನಗರದ ನಾರಾಯಣ ರಾವ್ ಪಾರ್ಕ್ ನಿಂದ ಗಡಗಿ ಚೆನ್ನಪ್ಪ ಸರ್ಕಲ್ ಗೆ ಆಗಮಿಸಿ ಪ್ರತಿಭಟನೆ ನಡೆಸಲಾಯ್ತು.

ಜನರು ಮತ್ತು ವಾಹನಗಳು ನೆಮ್ಮದಿಯಾಗಿ ಓಡಾಡಬೇಕೆಂದರೆ ರಸ್ತೆಗಳು ಉತ್ತಮವಾಗಿರಬೇಕು. ಉತ್ತಮ ರಸ್ತೆಗಳನ್ನು ಹೊಂದಿದ ನಗರ ಅಭಿವೃದ್ಧಿಯ ಸಂಕೇತವಾಗಿರುತ್ತದೆ. ಆದರೆ ಗಣಿನಾಡು ನಮ್ಮ ಬಳ್ಳಾರಿ ಇದಕ್ಕೆ ಅಪವಾದ ಎನ್ನುವಂತಿದೆ.

ಒಂದಡೆ ಜನಪ್ರತಿನಿಗಳು,ಶಾಸಕರು, ಪಾಲಿಕೆ ಸದಸ್ಯರು, ಸಂಸದರು ಬಳ್ಳಾರಿಯನ್ನು ಸುವರ್ಣ ಬಳ್ಳಾರಿ ಮಾಡುತ್ತೇವೆಂದು ಬೃಹತ್ ಗೋಪುರ ನಿರ್ಮಿಸಿದ್ದಾರೆ. ಒಂದೆರೆಡು ರಸ್ತೆ, ಸರ್ಕಲ್ ಅಗಲೀಕರಣ ಮಾಡಿ ಅಭಿವೃದ್ಧಿ ಮಾಡಿದ್ದಾರೆ ಅವು ಸಹ ಇನ್ನು ಪೂರ್ಣ ಪ್ರಮಾಣದಲ್ಲಿ ಆಗಿಲ್ಲ.

ಮಾತ್ತೆತ್ತಿದರೆ ನಮ್ಮದು ಸುವರ್ಣ ಬಳ್ಳಾರಿ ಎಂದು ಮಾತನಾಡುವವರು. ನಗರದಲ್ಲಿನ ನೂರಾರು ರಸ್ತೆಗಳಲ್ಲಿನ ಕುಣಿಗಳನ್ನು ಮಾತ್ರ ಮುಚ್ಚಲು ಮನಸ್ಸು ಮಾಡುತ್ತಿಲ್ಲ.

ಮಳೆಗಾಲ ಹೋಯ್ತು, ಚಳಿಗಾಲಾನೂ ಹೋಗುತ್ತಿದೆ. ಬೇಸಿಗೆ

ಕಾಲಬರುತ್ತಿದ್ದರೂ ರಸ್ತೆಗಳಲ್ಲಿನ ಗುಂಡಿಗಳಿಗೆ ಮಾತ್ರ ಮುಕ್ತಿ ಇಲ್ಲ. ಇದರಲ್ಲಿ ಪಾಲಿಕೆಗೆ, ಪಿಡಬ್ಲುಡಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ರಸ್ತೆಗಳೂ ಸೇರಿವೆ.

ನಗರದ ಏರ್ ಪೋರ್ಟ್ ರಸ್ತೆ, ಕೆ.ಸಿ.ರಸ್ತೆ, ಬ್ರಾಹ್ಮಣ ರಸ್ತೆ, ಕಾಳಮ್ಮ ರಸ್ತೆ, ಕಣೇಕಲ್ ರಸ್ತೆ, ರೂಪನಗುಡಿ ರಸ್ತೆ, ಬೆಂಗಳೂರು ರಸ್ತೆ, ತೇರು ಬೀದಿ, ರೇಡಿಯೋ ಪಾರ್ಕ್ ರಸ್ತೆ, ಹೀಗೆ ಯಾವುದೇ ರಸ್ತೆಗೆ ಹೋದರೂ ಗುಂಡಿಗಳ ಸ್ವಾಗತ ದೊರೆಯುತ್ತಿದೆ.

ರಸ್ತೆಯಲ್ಲಿನ ಗುಂಡಿಗಳಿಂದ ವಾಹನಗಳೂ ಹಾಳಾಗುತ್ತಿವೆ, ಸಮಯಕ್ಕೆ ಸರಿಯಾಗಿ ಕಚೇರಿ, ಮನೆ,ಶಾಲೆ,ಕಾಲೇಜಿಗೆ ಹೋಗಲೂ ಆಗುತ್ತಿಲ್ಲ. ಇನ್ನು ಗುಂಡಿ ತಪ್ಪಿಸಲು ವಾಹನಗಳು ಆಕಡೆ ಈ ಕಡೆ ಹೋಗಿ ಅಪಘಾತಗಳಿಗೂ ಕಾರಣ ವಾಗುತ್ತಿದೆ.

ಪಾಲಿಕೆಯಲ್ಲಿ ಸಭೆಯಲ್ಲಿ ಗುಂಡಿ ಮುಚ್ಚಲು 40 ಲಕ್ಷ ರೂ ತೆಗೆದಿರಿಸಿದ ಬಗ್ಗೆ ಮಾಧ್ಯಮಗಳಲ್ಲಿ ಪ್ರಕಟ ಆಗಿತ್ತು. ಆ ಹಣ ಏನಾಯ್ತು. ಕೆಲವುಕಡೆ ವೆಟ್ ಮಿಕ್ಸ್ ಹಾಕಿ, ಇಲ್ಲಾ ಗರಸು ಹಾಕಿ ಬಿಡಲಾಗಿದೆ. ಇದು ಸಹ ವಾಹನಗಳ ಓಡಾಟಕ್ಕೆ ಅನಾನೂಕೂಲವಾಗುತ್ತದೆ.

ಡಾಂಬರ್ ಮೂಲಕ ನಗರದ ನೂರಾರು ರಸ್ತೆಗಳಲ್ಲಿನ ಸಾವಿರಾರು ಗುಂಡಿಗಳನ್ನು ತಕ್ಷಣ ಮುಚ್ಚಲು ಮುಂದಾಗಬೇಕು.

ಕುಣಿ ಮುಚ್ಚದಿದ್ದರೆ ಇದನ್ನು ಸುವರ್ಣ ಬಳ್ಳಾರಿ ಎಂಬುದರ ಬದಲಿ ಗುಂಡಿಗಳ ಬಳ್ಳಾರಿ ಎಂದು ಕರೆಯಬೇಕಾಗುತ್ತದೆಂದು ಕರವೇ ಜಿಲ್ಲಾ ಅಧ್ಯಕ್ಷ ವಿ.ಹೆಚ್.ಹುಲುಗಪ್ಪ ಎಚ್ಚರಿಕೆ ನೀಡಿದರು. ಸಂಘಟನೆಯ ಮುಖಂಡರುಗಳಾದ ಅದ್ದಿಗೇರಿ ರಾಮಣ್ಣ,ವಿ.ವೆಂಕಟೇಶ್.ರಾಮಯ್ಯ, ಕೆ.ವೆಂಕಟೇಶ್ ಮೊದಲಾದವರು ಇದ್ದರು.

# ನಗರದಲ್ಲಿ ಪಿಸ್ತಾ ಹೌಸ್ ರೆಸ್ಟೋರೆಂಟ್ ಆರಂಭ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ, :

ನಗರದ ಹೊಸಪೇಟೆ ರಸ್ತೆಯಲ್ಲಿನ ಕಾಮೀನೇನಿ ಆಸ್ಪತ್ರೆ ಪಕ್ಕದಲ್ಲಿ ಫೈವ್ ಸ್ಟಾರ್ ಸ್ಪೆಷಾಲಿಟಿಯೊಂದಿಗೆ ರೆಸ್ಟೋರೆಂಟ್ ಕ್ಷೇತ್ರದಲ್ಲಿ ಪ್ರಸಿದ್ಧ ಆಹಾರ ಬ್ರಾಂಡ್ ಹೆಸರು ಹೊಂದಿರುವ ಪಿಸ್ತಾ ಹೌಸ್ ರೆಸ್ಟೋರೆಂಟ್ ನಿನ್ನೆ ಸಂಜೆಯಿಂದ ಆರಂಭಗೊಂಡಿದೆ.

ನಗರ ಶಾಸಕ ಭರತ್ ರೆಡ್ಡಿ ಈ ರೆಸ್ಟೋರೆಂಟ್ ಉದ್ಘಾಟನೆ ಮಾಡಿ, ಅಂತರ ರಾಷ್ಟ್ರೀಯ ಮಟ್ಟದ ರೆಸ್ಟೋರೆಂಟ್ ಒಂದು ನಮ್ಮ ನಗರದಲ್ಲಿ ಆರಂಭವಾಗಿರುವುದು ಸಂತೋಷದ ವಿಷಯ. ಜನರ ಇದರಲ್ಲಿರುವ ರುಚಿಕರವಾದ ಖಾದ್ಯ ಸವಿದು ಸಂತಸ ಪಡಲಿ ಎಂದರು.

ಈ ಪಿಸ್ತಾ ಹೌಸ್ ಮಾಲೀಕ ಮಲ್ಲಿಕಾರ್ಜುನ ರೆಡ್ಡಿ ಮಾತನಾಡಿ, ಪಿಸ್ತಾ ಹೌಸ್ ಬ್ರಾಂಡ್ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಶಿಷ್ಟ ಗುರುತನ್ನು ಪಡೆದಿದೆ. ಇಲ್ಲಿ ಶುಚಿ ರುಚಿ ಆಹಾರ ದೊಂದಿಗೆ, ಸ್ವಚ್ಛತೆಗೆ ಆಧ್ಯತೆ ನೀಡಿದೆ. ಪಿಸ್ತಾ ಹೌಸ್ ವಿಶೇಷತೆಗಳಾದ ಜಾಫ್ರಾನಿ ಬಿರಿಯಾನಿ, ಬೇಕರಿ ಉತ್ಪನ್ನಗಳು ಮತ್ತು ಜಾಫ್ರಾನಿ ಟೀ ಪಿಸ್ತಾ ಹೌಸ್‌ನ ಪ್ರಮುಖವಾದ ಖಾದ್ಯ ಮತ್ತು ಪಾನೀಯಗಳನ್ನು ಗ್ರಾಹಕರು ಪಡೆಯಬಹುದು ಎಂದರು. ಈ ರೆಸ್ಟೋರೆಂಟ್‌ನಲ್ಲಿ ವೆಜ್ ಮತ್ತು ನಾನ್ ವೆಜ್ ತಯಾರಿಕೆಗೆ ಪ್ರತ್ಯೇಕ ಕಿಚನ್ ವ್ಯವಸ್ಥೆ ಮಾಡಿದೆಂದು ಹೇಳಿದರು.

# ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಲು ಅವಕಾಶ

ರಾಯಚೂರು: ಉತ್ತರ ಕರ್ನಾಟಕ ಭಾಗದ ಯುವನಿಧಿ ಫಲಾನುಭವಿಗಳಿಗೆ ಹಾಗೂ ವಿವಧ ಕ್ಷೇತ್ರಗಳಲ್ಲಿ ವಿದ್ಯಾರ್ಹತೆಯನ್ನು ಹೊಂದಿರುವ ನಿರುದ್ಯೋಗ ಯುವಕ-ಯುವತಿಯರಿಗೆ ಉದ್ಯೋಗ ಕಲ್ಪಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖಾ ಸಚಿವರ ನೇತೃತ್ವದಲ್ಲಿ ವಿಜಯಪುರ ನಗರದ ಸ್ಟೇಷನ್ ರಸ್ತೆಯಲ್ಲಿನ ದರಬಾರ ಸ್ಕೂಲ್ ಆವರಣದಲ್ಲಿ ಫೆಬ್ರವರಿ 2ರ ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆವರೆಗೆ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿದೆ.

ಈ ಯುವ ಸಮೃದ್ಧಿ ಹಾಗೂ ಉದ್ಯೋಗ ಮೇಳದಲ್ಲಿ ಕಲ್ಯಾಣ ಕರ್ನಾಟಕ ವಿಭಾಗೀಯ ಭಾಗದ ಜಿಲ್ಲೆಗಳ ಅಭ್ಯರ್ಥಿಗಳನ್ನು ಒಳಗೊಂಡಂತೆ ಇತರೆ ಜಿಲ್ಲೆಗಳಿಂದಲೂ ಸಹ ಅಂದಾಜು 20,000 ಕ್ಕೂ ಅಧಿಕ ಅಭ್ಯರ್ಥಿಗಳು, 150ಕ್ಕೂ ಹೆಚ್ಚು ಅಧಿಕ ಕಂಪನಿಗಳು ಭಾಗವಹಿಸುವ ನಿರೀಕ್ಷೆಯಿದ್ದು, ಈ ಉದ್ಯೋಗ ಮೇಳದಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಇಂಜಿನಿಯರಿಂಗ್ ಹಾಗೂ ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರುವ ಜಿಲ್ಲೆಯ ನಿರುದ್ಯೋಗ ಯುವಕ/ಯುವತಿಯರು ವಿಭಾಗೀ ಯ ಉದ್ಯೋಗ ಮೇಳದಲ್ಲಿ ಭಾ ಗವ ಹಿಸಬಹುದು.ಈ ಉದ್ಯೋಗ ಮೇಳವು ಉದ್ಯೋಗಾಕಾಂಕ್ಷಿಗಳನ್ನು ಹಾಗೂ ಉದ್ಯೋಗದಾತರನ್ನು ಒಂದೇ ವೇದಿಕೆಯಡಿ ತರುವ ಪ್ರಯತ್ನವಾಗಿದೆ. ಉದ್ಯೋಗದಾತರು ಈ ಉದ್ಯೋಗ ಮೇಳದಲ್ಲಿ ಭಾಗವಹಿಸಿ ಅವರ ಸಂಸ್ಥೆಗಳಲ್ಲಿ ಖಾಲಿ ಇರುವ ವಿವಿಧ ಉದ್ಯೋಗಗಳಿಗೆ ಅರ್ಹ ಉದ್ಯೋಗಾಕಾಂಕ್ಷಿಗಳನ್ನು ಆಯ್ಕೆ ಮಾಡಿಕೊಳ್ಳಲಿದ್ದಾರೆ ಹಾಗೆಯೇ ಉದ್ಯೋಗಾಕಾಂಕ್ಷಿಯುವಕ/ಯುವತಿಯರು ತಮ್ಮ ಕೌಶಲ್ಯಕ್ಕೆ ಅನುಗುಣವಾಗಿ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ.ಈ ಉದ್ಯೋಗ ಮೇಳದಲ್ಲಿ ಭಾಗವಹಿಸಲು ಇಚ್ಛಿಸುವ ಉದ್ಯೋಗಾಕಾಂಕ್ಷಿಗಳು ಜಾಲತಾಣ hhttps://udyogamela.ksdck-arnataka.com ನಲ್ಲಿ ಆನ್‌ಲೈನ್ ಮೂಲಕ ನೋಂದಾಯಿಸಿಕೊಂಡು ಭಾಗವಹಿಸಬಹುದಾಗಿರುತ್ತದೆ.ಹಾಗೂ ಈ ಉದ್ಯೋಗ ಮೇಳದಲ್ಲಿ ಭಾಗವಹಿಸಲು ಇಚ್ಛಿಸುವ ಉದ್ಯೋಗದಾತರು/ಕಂಪನಿಗಳು ಸಹ ತಮ್ಮಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳ ವಿವರಗಳೊಂದಿಗೆ hhttps://employer.ksdckarnataka.com/login ಈ ಜಾಲತಾಣದಲ್ಲಿ ನೋಂದಾಯಿಸಿಕೊಂಡು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದಾಗಿದೆ.

# ಜಾತ್ರೆಗಳು ಭಾವೈಕ್ಯತೆ ಹಾಗೂ ಏಕತೆಗೆ ಸಾಕ್ಷಿಯಾಗಲಿ ಕಾಶೀನಾಥ ಸ್ವಾಮಿಗಳು



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:

ಜಿಲ್ಲೆಯಲಬುರ್ಗಾ ಪಟ್ಟಣದಲ್ಲಿ ನೆಡೆದ ಕಾರ್ಯಕ್ರಮ ದಲ್ಲಿ ಭಕ್ತಿ ಜ್ಞಾನ ವೈರಾಗ್ಯದಿಂದ ಕೂಡಿದ ಜಾತ್ರೆಯು

ಭಾವೈಕ್ಯತೆಯ ಪ್ರತೀಕ ಹಾಗೂ ಏಕತೆಯ ಸಂಕೇತ ವಾಗಿದೆ ಎಂದು ಗುಳೇದಗುಡ್ಡದ ಮುರಾಘಮಠದ ಕಾಶೀನಾಥ ಸ್ವಾಮಿಗಳು ಹೇಳಿದರು.

ಪಟ್ಟಣದ ಶ್ರೀಧರ ಮುರಡಿ ಹಿರೇಮಠದ ಜಾತ್ರಾ ಮಹೋತ್ಸವ ಮೂರನೇ ದಿನ ಕಾರ್ಯಕ್ರಮದ ಹಾಗೂ ಬಸವಲಿಂಗೇಶ್ವರ ಶಿವಾಚಾರ್ಯರ 24ನೇ ವರುಷದ ಪೀಠಾರೋಹಣದ ಸಾನಿಧ್ಯವಹಿಸಿ ಆಶೀರ್ವಚನ ನೀಡಿದ ಅವರು ತ್ಯಾಗ ದಾನ ಹಾಗೂ ದಾಸೋಹ ಮಾಡುವ ಮೂಲಕ ಜೀವನ ಸಾರ್ಥಕಗೊಳಿಸಕೊಳ್ಳಬೇಕು ಎಂದರಲ್ಲದೆ . ಯಾವುದೇ ವ್ಯಕ್ತಿಯ ಗೌರವವನ್ನು ಸಂಪತ್ತಿನಿಂದ ಅಳೆಯಬಾರದು ಅವರು ಹೊಂದಿರುವ ಜ್ಞಾನದಿಂದ ಗೌರವ ದೊರಕುವಂತೆ ಆಗಬೇಕು. ಯಾರ ಮೇಲೆಯೂ ಅವಲಂಬನ ಆಗಬಾರದು . ಸಂಸ್ಕಾರದಿಂದ ದೊಡ್ಡವರಾಗಬೇಕು ಎಂದ ಅವರು ಬಸವಲಿಂಗೇಶ್ವರ ಶ್ರೀಗಳು ಸಮನ್ವಯಮೂರ್ತಿಗಳು ಎಲ್ಲರನ್ನು ಪ್ರೀತ್ಯಾಧಾರದಿಂದ ಕಾಣುವ ಹಾಗೂ ಅನ್ನ ಅಕ್ಷರ ಮತ್ತು ಜ್ಞಾನ ದಾಸೋಹ ಗಳ ಮೂಲಕ ಎಲ್ಲರ ಮನೆ ಮನದಲ್ಲಿ ನೆಲೆಸಿರುವ ಶ್ರೇಷ್ಠ ಗುರುಗಳಾಗಿದ್ದಾರೆ ಎಂದು ಬಣ್ಣಿಸಿದರು.

ಮಕ್ಕಳ್ಳಿಯ ಶಿವಾನಂದ ಸ್ವಾಮಿಗಳು ಹಾಗೂ ಕುಕನೂರಿನ ಅನ್ನದಾನೀಶ್ವರ ಮಠದ ಡಾ! ಮಹಾದೇವ ಸ್ವಾಮಿಗಳು ಹಾಗೂ ಜೀಗೇರಿಯ ಗುರುಸಿದ್ಧೇಶ್ವರ ಶ್ರೀಗಳು ಮಾತನಾಡಿ ನಿನ್ನ ನೀನು ಅರಿಯುವುದು ಆಧ್ಯಾತ್ಮ ನಮ್ಮೊಳಗೆ ಪರಮಾತ್ಮನನ್ನು ಕಾಣಬೇಕು ಅದು ದೇವರಲ್ಲಿ ನಮ್ಮ ಮನಸ್ಸನ್ನು ಲೀನಮಾಡಿಕೊಂಡಾಗ ಸಾಧ್ಯವಾಗುವುದು ಎಂದರು.

ಆರೋಗ್ಯ ಇಲಾಖೆಯ ನೌಕರರಾದ ದಾದೇಸಾಬ ಮುದಗಲ್ಲರವರ ಚೊಚ್ಚಲ ಕ್ರತಿ "ಪರಿವರ್ತನೆಯ ಪರಿಕಲ್ಪನೆ " ಇದೆ ಸಂದರ್ಭದಲ್ಲಿ ಬಿಡುಗಡೆ ಗೊಳಿಸಲಾಯಿತು ಕ್ರತಿ ಪರಿಚಯಿಸಿ ವೈದ್ಯಕೀಯ ವಿದ್ಯಾರ್ಥಿ ತೋಷಫ್ ಮುದಗಲ್ಲ ಮಾತನಾಡಿ ಆಧ್ಯಾತ್ಮದ ಪರಿಕಲ್ಪನೆ ದಾನದ ಮಹಿಮೆ ಕಾರುಣ್ಯ ನಡಾವಳಿಕೆ ಪ್ರೀತಿಯ ಮಹತ್ವ ಹೀಗೆ ಹಲವಾರು ಸಕರಾತ್ಮಕ ನುಡಿಗಳನ್ನು ಒಳಗೊಂಡಿರುವ ಪುಸ್ತಕದಲ್ಲಿ ಬದುಕಿನ ಮೌಲ್ಯಗಳ ಅನಾವರಣಗೊಂಡಿವೆ ಎಂದರು. ಎಸ್.ಬಿ.ಐ ದ ನಿವ್ರತ್ತ ಕ್ಯಾಶಿಯರ್ ಜಗನ್ನಾಥ ದೇಸಾಯಿ ದಂಪತಿಗಳಿಂದ ಕರಮುಡಿಯ ಮರ್ಧಾನಸಾಬ ಮುಲ್ಲಾ ದಂಪತಿಗಳಿಂದ ಹಾಗೂ ಆರೋಗ್ಯ ಇಲಾಖೆಯ ದಾದೇಸಾಬ ಮುದಗಲ್ಲ ದಂಪತಿಗಳಿಂದ ಬಸವಲಿಂಗೇಶ್ವರ ಶ್ರೀಗಳಿಗೆ ತುಲಾಭಾರ ಸೇವೆ ಮಾಡಿ ಭಕ್ತಿ ಸಮರ್ಪಣೆ ಗೈದರು.

ಕರಮುಡಿಯ ಸಂಗಪ್ಪ ಬಂಡಿ ಹಾಗೂ ಶಾಮಿದ್ ಸಾಬ ಮುಲ್ಲಾರವರು ಪ್ರಸಾದ ಸೇವೆ ಗೈದರು. ವೇದಿಕೆಯ ಮೇಲೆ ಕೆ.ಜಿ. ಪಲ್ಲೇದ ಅಮರೇಶ ಹುಬ್ಬಳ್ಳಿ ಕಳಕಪ್ಪ ತಳವಾರ ಅಶೋಕ ಅರಕೇರಿ ಜಯಸಿಂಗ್ ಅಲ್ವಾರಿ,ಮಲ್ಲಿಕಾರ್ಜುನ ಉಳ್ಳಾಗಡ್ಡಿ,ಸಿದ್ಧರಾಮಪ್ಪ ದೇಸಾಯಿ , ಸುಭಾಷ ಬಟಗೇರಿ, ಆಶೀಫ್ ಮುದಗಲ್ಲ ಜುಲೇಖಾ ಇನ್ನುಳಿದವರು ಉಪಸ್ಥಿತರಿದ್ದರು.

# ಅಂಬಿಗರ ಚೌಡಯ್ಯನವರ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ:

ತಾಲೂಕಾಡಳಿತದ ವತಿಯಿಂದ ತಹಶೀಲ್ದಾರ್ ಕಾರ್ಯಾಲಯದ ಸಭಾಂಗಣದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಜಯಂತಿ ಅರ್ಥಪೂರ್ಣವಾಗಿ ಆಚರಿಸಲಾಯಿತು. ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ,ಪಿಎ. ಜ್ಯೋತಿ ಖೋತ್,ಸಿ.ಆರ್.ಸಿ.ರಾಜು ವಿಜಾಪುರ,ಇಬ್ರಾಹೀಮ ಆಲಮೇಲ, ಸಮಾಜದ ಅಧ್ಯಕ್ಷ ರಮೇಶ ಮೂಕಿಹಾಳ, ಪುರಸಭೆ ಮಾಜಿ ಸದಸ್ಯ ಪರಶುರಾಮ ತಂಗಡಗಿ, ನ್ಯಾಯವಾದಿ ಎಂ.ಎಸ್.ಜೋಲಿ, ಚಂದ್ರಕಾಂತ ಯರಗಲ್,ಶಶಿಕಾಂತ ಮೂಕಿಹಾಳ,ಕಾಶಿನಾಥ ಮದರಿ, ಬಸವರಾಜ ತಳವಾರ, ಸಂಗನಬಸಪ್ಪ ಚಳ್ಳಗಿ, ಮಲ್ಲಿಕಾರ್ಜುನ ನಾಯ್ಕೋಡಿ, ಸಂಗಮೇಶ ಚಳ್ಳಗಿ, ಮಾನಪ್ಪ ನಾಯ್ಕೋಡಿ, ಮಲ್ಲಿಕಾರ್ಜುನ ನಾಟಿಕರ್, ದತ್ತು ಕೋಲಕಾರ, ಮಲ್ಲಿಕಾರ್ಜುನ ಅಸ್ಕಿ, ಭೀಮಣ್ಣ ತಳವಾರ, ಮಲ್ಲಿಕಾರ್ಜುನ್ ನೆಲ್ಲಗಿ ಹಾಗೂ ಕಂದಾಯ ಇಲಾಖೆಯ ಸಿಬ್ಬಂದಿಗಳು.

# ಜಿಪಂ ಉಪಕಾರ್ಯದರ್ಶಿಗಳಿಂದ ಪುಸ್ತಕಗೂಡು ವೀಕ್ಷಣೆ



• ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು:

ತಾಲೂಕು ಹ್ಯಾಳ್ಯ ಗ್ರಾಮ ಪಂಚಾಯಿತಿಯ ಬಸ್ ನಿಲ್ದಾಣದಲ್ಲಿ ಆರಂಭಿಸಿರುವ ಪುಸ್ತಕಗೂಡಿನ ಸ್ಥಳಕ್ಕೆ ಜಿಲ್ಲಾ ಪಂಚಾಯಿತಿಯ ಮಾನ್ಯ ಉಪ ಕಾರ್ಯದರ್ಶಿಗಳು ಶ್ರೀ ಕೆ.ತಿಮ್ಮಪ್ಪ ಅವರು ಬುಧವಾರ ಭೇಟಿ ನೀಡಿ ವೀಕ್ಷಣೆ ಮಾಡಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ರಾಜೀವ್ ಗಾಂಧಿ ಫೆಲೋಶಿಪ್, ಗ್ರಾಮ ಪಂಚಾಯಿತಿಯ ನಿಧಿಯಡಿ ಗ್ರಾಮದ ಬಸ್ ನಿಲ್ದಾಣದಲ್ಲಿ *ಪುಸ್ತಕ ಗೂಡನ್ನು* ಕಳೆದ 2024 ರಲ್ಲಿ ಆರಂಭಿಸಲಾಗಿದೆ. ಅಲ್ಲಿಂದ ಇಲ್ಲಿಯ ವರೆಗೆ ಗ್ರಾಮಸ್ಥರು, ವಿದ್ಯಾರ್ಥಿಗಳು, ಹಿರಿಯರು, ಪ್ರಯಾಣಿಕರು ಪುಸ್ತಕ ಗೂಡಿನ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ.

ಮಾನ್ಯಕಾರ್ಯನಿರ್ವಾಹಕಅಧಿಕಾರಿಗಳಾದ ಶ್ರೀಡಾ.ಬಾಳಪ್ಪನವರ ಆನಂದಕುಮಾರ ಅವರ ನಿರ್ದೇಶನದಂತೆ ಪುಸ್ತಕ ಗೂಡಿನ ಸಂರಕ್ಷಣೆಗಾಗಿ ತಾಲೂಕು ಪಂಚಾಯಿತಿಯ ಅನುದಾನದಡಿ ಸಿಸಿಟಿವಿ ಅಳವಡಿಸಲಾಗಿದೆ.

ಇಂದು ಜಿಲ್ಲಾ ಪಂಚಾಯಿತಿಯ ಉಪಕಾರ್ಯದರ್ಶಿಗಳು ಮಾನ್ಯ ಶ್ರೀ ಕೆ.ತಿಮ್ಮಪ್ಪ ಅವರು ವೀಕ್ಷಿಸಿದರು. ಬಳಿಕ ಅರಿವು ಕೇಂದ್ರಕ್ಕೆ ಭೇಟಿ ನೀಡಿ ಮೂಲಸೌಕರ್ಯಗಳ ಬಗ್ಗೆ ಚರ್ಚಿಸಿದರು. ವೈಫೈ ಬ್ರಾಡ್ ಬ್ಯೆಂಡ್ ವ್ಯವಸ್ಥೆ ಕಲ್ಪಿಸುವಂತೆ ಪಿಡಿಒರವರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಪಂನ ಅಧಿಕಾರಿಗಳಾದ ಶ್ರೀ ಲೋಕೇಶ್ ಬಾಬು, ಎಡಿಪಿಸಿ ಶ್ರೀ ಬಸವರಾಜ್, ಗ್ರಾಪಂ ಅಭಿವೃದ್ಧಿ ಅಧಿಕಾರಿ ಶ್ರೀ ಸಿಎಚ್ ಎಂ ಗಂಗಾಧರ್, ಗ್ರಂಥಪಾಲಕರಾದ ಶ್ರೀ ಬಿ.ಲೋಕೇಶ್, ಗ್ರಾಪಂ ಸಿಬ್ಬಂದಿ ಇದ್ದರು.

# ತೊಗರಿ ಕೇಂದ್ರಕ್ಕೆ ಶಾಸಕ ರಾಜುಗೌಡ ಪಾಟೀಲ ಚಾಲನೆ

• ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ:



ತಾಲೂಕಿನ ಅಸ್ಕಿ ಗ್ರಾಮದಲ್ಲಿ ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ ಸ್ಥಾಪಿಸಲಾದ ತೊಗರಿ ಖರೀದಿ ಕೇಂದ್ರಕ್ಕೆ ದೇವರ

ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ (ಕು.ಸಾಲವಾಡಗಿ) ಸೋಮವಾರ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಅವರು ಮಾತನಾಡಿ ಒಕ್ಕಲುತನ ಹುಟ್ಟುವಳಿಗಳಿಗೆ ಮಾರುಕಟ್ಟೆಯಲ್ಲಿ ಬೆಲೆಕುಸಿದಾಗ ರೈತರಿಗೆ ಕನಿಷ್ಠ ಬೆಂಬಲ ಬೆಲೆಯಾದರೂ ದೊರಕಿಸಿ ಕೊಡಬೇಕೆಂಬ ಉದ್ದೇಶದಿಂದ ಸರ್ಕಾರ ಜಾರಿ ಮಾಡಿದ ಸದರಿ ಯೋಜನೆಯ ಪ್ರಯೋಜನವನ್ನು ನಮ್ಮ ರೈತರು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಅಸ್ಕಿ ಪಿಕೆಪಿಎಸ್ ಅಧ್ಯಕ್ಷ ಮಡಿವಾಳಪ್ಪ ಕೆ.ಚೌದ್ರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಶಾಸಕ ರಾಜುಗೌಡ ಪಾಟೀಲಗೆ ಸಂಘದ ವತಿಯಿಂದ ಸನ್ಮಾನಿಸಿ ಗೌರಿಸಲಾಯಿತು. ಈ ಸಮಯದಲ್ಲಿ ಪಿಕೆಪಿಎಸ್ ಉಪಾಧ್ಯಕ್ಷ ಶಂಕ್ರಪ್ಪ ಕೆಳಗಿನಮನಿ, ಮುಖಂಡ ಎಸ್.ಎಸ್.ಪಾಟೀಲ,

ಅಸ್ಕಿ ಮಾಜಿ ಗ್ರಾಪಂ ಅಧ್ಯಕ್ಷ ರಾಯಪ್ಪಗೌಡ ಪಾಟೀಲ,ಶಿವನಗೌಡ ಬಿರಾದಾರ,ಪಿಕೆಪಿಎಸ್ ಸದಸ್ಯರಾದ ಹಣಮಗೌಡ ಬಿರಾದಾರ,ಮಲ್ಲನಗೌಡ ಕರಿಗೌಡರ,

ವಿಶ್ವನಾಥರೆಡ್ಡಿ ಬಿರಾದಾರ, ಶಿವರುದ್ರಪ್ಪ ಮಗದಾಳ, ಬಸವರಾಜ ಬ್ಯಾಕೋಡ,ರುದ್ರಗೌಡ ಸಿ.ಬಿರಾದಾರ,ಎಂ.ಬಿ.ಕೊಣ್ಣೂರ, ಹೇಮಾ ಬಿ.ಯಾಳಗಿ ನಾಗಮ್ಮ ಎನ್.ಬಿರಾದಾರ, ಸಿದ್ದರಾಮಪ್ಪ ವಡಗೇರಿ, ಈರಘಂಟೆಪ್ಪ ದೊಡ್ಡಮನಿ,ಸಿಇಓ ಎಂ.ಎಂ. ತಳವಾರ ಮತ್ತಿತರರು ಇದ್ದರು.

## ನಿಜಲಿಂಗಪ್ಪ ಮೆಡಿಕಲ್ ಕಾಲೇಜ್ ವಿದ್ಯಾರ್ಥಿಯ ಸಾಧನೆ
# ವಿಕಸಿತ ಭಾರತ ಯುವನಾಯಕರ ಸಂವಾದದಲ್ಲಿ ವಿಚಾರ ಮಂಡನೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:



ನಗರದ ಬಿ.ವಿ.ವಿ.ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದ ಎಮ್.ಬಿ.ಬಿ.ಎಸ್ ತೃತೀಯ ವರ್ಷದ ವಿದ್ಯಾರ್ಥಿ ಶುಭಂ ಡಂಗಿ ಅವರು 'ವಿಕಸಿತ ಭಾರತ ಯುವನಾಯಕರ ಸಂವಾದ-2026' ಕಾರ್ಯಕ್ರಮದಲ್ಲಿ ತಮ್ಮ ವಿಚಾರ ಮಂಡಿಸಿ ಕಾಲೇಜಿನ ಹಿರಿಮೆಯನ್ನು ಹೆಚ್ಚಿಸಿರುವರು. ಜನವರಿ ತಿಂಗಳಲ್ಲಿ ನವದೆಹಲಿಯಲ್ಲಿ ಆಯೋಜಿಸಿದ್ದ 'ವಿಕಸಿತ ಭಾರತ ಯುವನಾಯಕರ ಸಂವಾದ-2026' ಕಾರ್ಯಕ್ರಮದಲ್ಲಿ ವಿಕಸಿತ ಭಾರತಕ್ಕಾಗಿ ಭವಿಷ್ಯದ ಕಾರ್ಯಯೋಜನೆ ವಿಷಯದ ಕುರಿತು ತಮ್ಮ ವಿಚಾರ ಮಂಡಿಸಿದರು. ದೇಶದ ಪ್ರಧಾನ ಮಂತ್ರಿಗಳೊಂದಿಗೆ ಯುವನಾಯಕರು ತಮ್ಮ ಆಲೋಚನೆಗಳನ್ನು ನೇರವಾಗಿ ಹಂಚಿಕೊಳ್ಳುವ ವಿಶಿಷ್ಟ ವೇದಿಕೆ ಇದಾಗಿದೆ. ಈ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಮನ್ಸುಖ್ ಮಾಂಡವಿಯಾ, ರಕ್ಷಾ ಖಡ್ಸೆ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರರಾದ ಅಜಿತ್ ದೋವಲ್ ಉಪಸ್ಥಿತರಿದ್ದರು.

ಪ್ರತಿವರ್ಷ ದೇಶದ ವಿವಿಧ ರಾಜ್ಯಗಳಿಂದ ಯುವ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ 'ವಿಕಸಿತ ಭಾರತ ಯುವನಾಯಕರ ಸಂವಾದ'ದಲ್ಲಿ ವಿವಿಧ ವಿಷಯಗಳ ಕುರಿತು ತಮ್ಮ ವಿಚಾರಗಳನ್ನು ಮಡಿಸಲು ಅವಕಾಶ ನೀಡಲಾಗುತ್ತದೆ. ಇದಕ್ಕೆ ಪೂರ್ವಭಾವಿಯಾಗಿ ರಾಜ್ಯಮಟ್ಟದಲ್ಲಿ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ, ರಾಷ್ಟ್ರೀಯ ಸ್ವಯಂ ಸೇವಾ ಘಟಕ ಹಾಗೂ ಯುವ ಸಬಲೀಕರಣ ಇಲಾಖೆ ಇವುಗಳ ಸಹಯೋಗದಲ್ಲಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಕರ್ನಾಟಕದಿಂದ ಒಟ್ಟು 45 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿತ್ತು. ಈ ಆಯ್ಕೆಯ ಸಂದರ್ಭ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದ ವಿದ್ಯಾರ್ಥಿ ಶುಭಂ ಡಂಗಿ ಎಲ್ಲ ಮೂರು ಸುತ್ತುಗಳಲ್ಲಿ ವಿಜೇತರಾಗಿ 'ಸಂವಾದ-2026'ರಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗಿದ್ದರು. ಕರ್ನಾಟಕದಿಂದ ಆಯ್ಕೆಯಾದ 45 ವಿದ್ಯಾರ್ಥಿಗಳಲ್ಲಿ ಇವರೊಬ್ಬರೆ ವೈದ್ಯಕೀಯ ವಿದ್ಯಾರ್ಥಿಯಾಗಿದ್ದು ವಿಶೇಷವಾಗಿತ್ತು.

ಎಸ್.ನಿಜಲಿಂಗಪ್ಪ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಸತತ ಎರಡನೇ ವರ್ಷ 'ವಿಕಸಿತ ಭಾರತ ಯುವನಾಯಕರ ಸಂವಾದ'ದಲ್ಲಿ ತಮ್ಮ ವಿಚಾರಗಳನ್ನು ಮಂಡಿಸಿರುವುದು ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ. ತಮ್ಮ ವಿಚಾರ ಮಂಡಿಸಿ ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿರುವ ವಿದ್ಯಾರ್ಥಿ ಶುಭಂ ಡಂಗಿ ಅವರನ್ನು ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಸಿ.ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ ಎನ್. ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಮ್.ಸಜ್ಜನ (ಬೇವೂರ), ಮೆಡಿಕಲ್ ಕಾಲೇಜಿನ ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ, ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ ಹಾಗೂ ಎಲ್ಲ ವಿಭಾಗಗಳ ವೈದ್ಯರು ಮತ್ತು ಸಿಬ್ಬಂದಿ ಅಭಿನಂದಿಸಿರುವರು. ಸಮುದಾಯ ಆರೋಗ್ಯ ವಿಭಾಗದ ಪ್ರಾಧ್ಯಪಕರಾದ ಡಾ.ಉಮೇಶ ರಾಮದುರ್ಗ ಮತ್ತು ಡಾ.ಶ್ರೀನಿವಾಸ ಪಾಟೀಲ ಈ ಸಂದರ್ಭ ಉಪಸ್ಥಿತರಿದ್ದರು.

# ಯೋಗದಿಂದ ಒತ್ತಡ ನಿರ್ವಹಣೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಯೋಗವು ಮನಸ್ಸು, ದೇಹ ಮತ್ತು ಆತ್ಮವನ್ನು ಸಂಯೋಜಿಸುವ ಮೂಲಕ ಒತ್ತಡದ ಜೀವನವನ್ನು ನಿರ್ವಹಿಸಲು ಹಾಗೂ ಆರೋಗ್ಯ ಸುಧಾರಣೆಗೆ ಸಹಕಾರಿಯಾಗಿದೆ ಎಂದು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ತಿಪ್ಪೇರುದ್ರಪ್ಪ ಅವರು ಹೇಳಿದರು.

ವಿವಿಯ ಯೋಗ ಕೇಂದ್ರದಲ್ಲಿ ಬೋಧಕ ಹಾಗೂ ಬೋಧ-ಕೇತರ ಸಿಬ್ಬಂದಿಗಳಿಗೆ ವಾರದಲ್ಲಿ ಮೂರು ದಿನಗಳ 'ಯೋಗ, ಪ್ರಾಣಾಯಾಮ ಮತ್ತು ಧ್ಯಾನ ತರಗತಿಗಳ' ಕಾರ್ಯಕ್ರಮ ಪತಂಜಲಿ ಮಹರ್ಷಿಯವರ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ಯೋಗವನ್ನು ನಮ್ಮಲ್ಲಿ ಅಳವಡಿಸಿಕೊಳ್ಳುವುದರಿಂದ ಗುರಿಸಾಧನೆಗೆ ಸಹಾಯವಾಗುತ್ತದೆ. ಅರೋಗ್ಯಕರ ಜೀವನಶೈಲಿಯನ್ನು ರೂಢಿಸುತ್ತದೆ. ಯೋಗ ಕಾರ್ಯಕ್ರಮದಲ್ಲಿ ಎಲ್ಲ ಸಿಬ್ಬಂದಿ ಭಾಗವಹಿಸಿ ಎಂದರು.

ವಿವಿಯ ಯೋಗ ಅಧ್ಯಯನ ವಿಭಾಗದ ಉಪನ್ಯಾಸಕ ಡಿ.ಮಹೇಶ ಬಾಬು ಅವರು ಯೋಗದ ಮಹತ್ವದ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ವಾಣಿಜ್ಯಶಾಸ್ತ್ರ ವಿಭಾಗದ ಡೀನ್ ಪ್ರೊ.ಸದ್ಯೋಜಾತಪ್ಪ, ಶಿಕ್ಷಣ ನಿಕಾಯದ ಡೀನ್ ಪ್ರೊ.ಸಾಹೇಬ್‌ಅಲಿ ನಿರಗುಡಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗದ ಡಾ.ಶಶಿಧರ ಕೆಲ್ಲೂರ ಗಣ್ಯರನ್ನು ಸ್ವಾಗತಿಸಿ, ನಿರೂಪಿಸಿದರು. ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಮುಖ್ಯಸ್ಥರು, ಸಿಬ್ಬಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಯೋಗಾಭ್ಯಾಸ ಮಾಡಿದರು.

# ಅಂಬಿಗರ ಚೌಡಯ್ಯ ಮಹಾಯೋಗಿ ವೇಮನರು ಸಮಾನತೆ ಸ್ವಾತಂತ್ರ್ಯ ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಿದವರು

ಬಿಜೆಪಿಯಿಂದ ಅಂಬಿಗರ ಚೌಡಯ್ಯ ಮಹಾಯೋಗಿ ವೇಮನರ ಜಯಂತಿ ಆಚರಣೆ



ನಿಜಶರಣ ಅಂಬಿಗರ ಚೌಡಯ್ಯ ಹಾಗೂ ಮಹಾಯೋಗಿ ವೇಮನರ ಜಯಂತಿಯ ಆಚರಣೆ ನಿಮಿತ್ಯ ಅವರ ಭಾವಚಿತ್ರಕ್ಕೆ ಪುಷ್ಪಾಂಜಲಿ ಸಲ್ಲಿಸಲಾಯಿತು.

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:

ಅಂಬಿಗರ ಚೌಡಯ್ಯ; ಮಹಾಯೋಗಿ ವೇಮನರು ಶತಮಾನ ಕಂಡ ದಾರ್ಶನಿಕರು, ಇಬ್ಬರೂ ತಮ್ಮ ನೇರ, ನಿರ್ಭೀತ ವಚನಗಳಿಂದ ಜಾತಿ-ಭೇದಗಳನ್ನು ಖಂಡಿಸಿ, ಸಮಾನತೆ, ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಿದರು ಎಂದು ಮಾಜಿ ಬಿಟಿಡಿಎ ಅಧ್ಯಕ್ಷ ಜಿ.ಎನ್.ಪಾಟೀಲ ಹೇಳಿದರು.

ಅವರು ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರ ಬಾಗಲಕೋಟೆಯಿಂದ ಹಮ್ಮಿಕೊಂಡ ನಿಜಶರಣ ಅಂಬಿಗರ ಚೌಡಯ್ಯ ಹಾಗೂ ಮಹಾಯೋಗಿ ವೇಮನರ ಜಯಂತಿಯ ಆಚರಣೆ ನಿಮಿತ್ಯ ಅವರ ಭಾವಚಿತ್ರಕ್ಕೆ ಪುಷ್ಪಾಂಜಲಿ ಸಲ್ಲಿಸಿ ಮಾತನಾಡಿ ಅವರು ನಿಜಶರಣ ಅಂಬಿಗರ ಚೌಡಯ್ಯ ಮತ್ತು ಮಹಾಯೋಗಿ ವೇಮನರು ಇಬ್ಬರೂ 12ನೇ ಶತಮಾನದ ಶ್ರೇಷ್ಠ ವಚನಕಾರರು, ಸಮಾಜ ಸುಧಾರಕರು ಮತ್ತು ದಾರ್ಶನಿಕರು. ಇಬ್ಬರೂ ತಮ್ಮ ನೇರ, ನಿರ್ಭೀತ ವಚನಗಳಿಂದ ಜಾತಿ-ಭೇದಗಳನ್ನು ಖಂಡಿಸಿ, ಸಮಾನತೆ, ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಿದರು. ಅಂಬಿಗರ ಚೌಡಯ್ಯ "ಅಂಬಿಗರ ಚೌಡಯ್ಯ" ಅಂಕಿತದ ವಚನಗಳ ಮೂಲಕ ಭವಸಾಗರ ದಾಟುವ ಕೌಶಲ್ಯವನ್ನು ಹೇಳಿದರೆ, ವೇಮನರು ತಮ್ಮ ಪದ್ಯಗಳ ಮೂಲಕ ಜನಪದ ಮತ್ತು ತತ್ವಶಾಸ್ತ್ರವನ್ನು ಬೆರೆಸಿ ಸಾರ್ವತ್ರಿಕ ಮೌಲ್ಯಗಳನ್ನು ಸಾರಿದವರು ಎಂದರು.

ಬಸವರಾಜ ಯಂಕಂಚಿ, ಶಿವಾನಂದ ಟವಳಿ ಮಾತನಾಡಿದರು. ಡಾ. ಎಂ.ಎಸ್.ದಡ್ಡೆನ್ನವರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ಗುಂಡುರಾವ ಶಿಂಧೆ, ಭಾಗೀರಥಿ ಪಾಟೀಲ, ರಾಮಣ್ಣ ರಾಮೋಡಗಿ, ಸಿ.ವಿ.ಕೋಟಿ, ಅಯ್ಯಪ್ಪ ವಾಲ್ಮೀಕಿ, ಯಂಕಪ್ಪ ಬಿಚ್ಚೆಲಿ, ಮುದಕಪ್ಪ ಕಟ್ಟಿಮನಿ, ಶ್ರೀಕಾಂತ ಕಟ್ಟಿಮನಿ, ಬಾಲಪ್ಪ ಅಂಬಿಗೇರ, ಶಾಂತಪ್ಪ ಬಾಡದ, ಪ್ರೇಮಾ ಅಂಬಿಗೇರ, ಸರಸ್ವತಿ ಕುರಬರ, ಶಶಿಕಲಾ ಮಜ್ಜಗಿ, ಶಿವಲೀಲಾ ಸಂಬಣ್ಣವರ, ಬಸವರಾಜ ಅಂಬಿಗೇರ, ಸುರೇಶ ಮಜ್ಜಗಿ, ಯಲ್ಲಪ್ಪ ನಾರಾಯಣಿ, ಶಶಿಕುಮಾರ ಗುತ್ತೆನ್ನವರ, ನಗರಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಉಮೇಶ ಹಂಚಿನಾಳ, ಶ್ರೀಧರ ನಾಗರಬೆಟ್ಟ, ರಾಜು ಕೋಟಿಕಲ್, ಚಂದ್ರು ಸರೂರ, ಶಂಕರ ತೇಲಕರ, ಗಿರೀಶ ಭಾಂಡಗೆ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ನೇರ ನಿಷ್ಠುರ ವಚನಕಾರ ಚೌಡಯ್ಯ: ಪಿ.ಎಚ್.ಪೂಜಾರ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:




ಅಂಬಿಗರ ಚೌಡಯ್ಯನವರು ಒಬ್ಬ ನೇರ, ನಿಷ್ಠುರ, ಮಾಮಿಕ ವಚನಕಾರರಾಗಿದ್ದರು ಎಂದು ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಹೇಳಿದರು. ನವನಗರದ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಚೌಡಯ್ಯನವರು ನದಿ ದಾಟಿಸುವ ಅಂಬಿಗರಾಗಿರದೇ ಭವಸಾಗರ ದಾಟಿಸುವ ಅಂಬಿಗರಾಗಿದ್ದರು. ಇವರ ವಚನದಲ್ಲಿ ಕಟೂರತೆ ಇದ್ದರು ಮಾತೃಹೃದಯಿಯಾಗಿದ್ದರು ಎಂದರು.

ಚೌಡಯ್ಯನವರು ಪ್ರಥಮ ದಿನದಲ್ಲಿಯೆ ವಚನಾಂಕಿತ ಪಡೆದಿದ್ದರು. ಇವರು ತಮ್ಮ ವಚನಗಳ ಮೂಲಕ ಸಮಾಜದಲ್ಲಿ ಮೂಢನಂಬಿಕೆ, ಅನಿಷ್ಠಪದ್ದತಿಗಳನ್ನು ನೇರವಾಗಿ ಖಂಡಿಸಿದ್ದರು. ಇವರು ದಡ ಸೇರಿಸುವ ಕಾಯಕ ಮಾಡಿ ನಂಬಿಗಸ್ತರಾದವರು. ಆದರೆ ಕಾಯಕ ಜೀವಿಗಳಾದ ಮತ್ತು ಶೋಷಿತ ಸಮಾಜದವರಾಗಿದ್ದು, ತಮ್ಮ ಅಧಿಕಾರಾವಧಿ ವ್ಯಾಪ್ತಿಗೆ ಬರುವ ಸಹಾಯ, ಸಹಕಾರ ನೀಡುವುದಾಗಿ ತಿಳಿಸಿದರು.

ಉಪನ್ಯಾಸಕರಾಗಿ ಆಗಮಿಸಿದ್ದ ಮಲ್ಲಿಕಾರ್ಜುನ ಕಮತಗಿ ಮಾತನಾಡಿ ನರಸೀಪುರದಲ್ಲಿ ಉದ್ದಾಲಕ ಮುನಿಗಳ ಆಶ್ರಯದಲ್ಲಿ ಸಕಲ ವಿದ್ಯೆ ಪಡೆದ ಚೌಡಯ್ಯನವರು ಬರೆದ ವಚನ ಅವುಗಳಲ್ಲಿ ದೊರೆತ ವಚನಗಳು 719 ವಚನಗಳು. ಅವುಗಳಲ್ಲಿ ನೇರ, ನಿಷ್ಠುರ ಕಲ್ಯಾಣ ಸಂದೇಶಗಳಾಗಿದ್ದವು. ತುಂಗಭದ್ರಾ ನದಿಯ ದಡದಲ್ಲಿ ಅಂಬಿಗರ ವೃತ್ತಿ ಮಾಡುತ್ತಿದ್ದ ಇವರು ಕಲ್ಯಾಣಕ್ಕೆ ಬಂದು ಅನುಭವ ಮಂಟಪದಲ್ಲಿ ವಚನ ಮಂಡನೆ ಮಾಡುತ್ತಿರುವುದಾಗಿ ಬಸವಣ್ಣನವರು ಚೌಡಯ್ಯನವರನ್ನು ಕುರಿತು ಚೌಡಯ್ಯ ಶರಣರಾದವರಿಗೆ ಕಾಯಕ ಮುಖ್ಯ ಆದರೆ ಇಲ್ಲಿ ಇಲ್ಲಿ ತಾವು ಉಪಜೀವನ ಆಗುವುದು ಹೇಗೆ ಯಾಕೆಂದರೆ ಇಲ್ಲಿ ಯಾವುದು ಎಂದಾಗ ನಾನೊಬ್ಬ ನದಿ ದಾಟಿಸುವ ಅಂಬಿಗನಲ್ಲ ಭವಸಾಗರವನ್ನು ದಾಟಿಸುವ ಅಂಬಿಗನಾಗಿದ್ದೇನೆ ಎಂದರು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷ ಅನೀಲಕುಮಾರ ದಡ್ಡಿ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ತಹಶೀಲ್ದಾರ ವಾಸುದೇವಸ್ವಾಮಿ ಸೇರಿದಂತೆ ಸಮುದಾಯದ ಮುಖಂಡರು ಉಪಸ್ಥಿತರಿದ್ದರು. ಶಂಕರಲಿಂಗ ದೇಸಾಯಿ ಕಾರ್ಯಕ್ರಮ ನಿರೂಪಿಸಿದರು.

# ಹಂಪಿ ಉತ್ಸವ: ಯಶಸ್ಸಿಗೆ ಅಧಿಕಾರಿಗಳು ಜವಾಬ್ದಾರಿಯಿಂದ ಶ್ರಮಿಸಿ ಡಿಸಿ



• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ (ಹೊಸಪೇಟೆ):

ವಿಶ್ವವಿಖ್ಯಾತ ಹಂಪಿ ಉತ್ಸವವನ್ನು ಅತ್ಯಂತ ವೈಭವದಿಂದ ಮತ್ತು ಯಶಸ್ವಿಯಾಗಿ ಆಯೋಜಿಸಲು ಅಧಿಕಾರಿಗಳು ತಮಗೆ ವಹಿಸಿದ ಜವಾಬ್ದಾರಿಗಳನ್ನು ಯಾವುದೇ ಲೋಪದೋಷವಿಲ್ಲದೆ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಂಗಳವಾರ ನಡೆದ ಹಂಪಿ ಉತ್ಸವದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಈ ಬಾರಿ ಫೆಬ್ರವರಿ 13 ರಿಂದ 15ರವರೆಗೆ ಮೂರು ದಿನಗಳ ಕಾಲ ಉತ್ಸವ ನಡೆಯಲಿದ್ದು, ಸಿದ್ಧತೆಗಳಿಗಾಗಿ ಈಗಾಗಲೇ 21 ಉಪ ಸಮಿತಿಗಳನ್ನು ರಚಿಸಲಾಗಿದೆ ಎಂದು ಅವರು ತಿಳಿಸಿದರು.

ತಾರಾ ಮೆರುಗು ಮತ್ತು ಐದು ವೇದಿಕೆಗಳು: ಈ ಬಾರಿಯ ಉತ್ಸವದಲ್ಲಿ ಒಟ್ಟು ಐದು ವೇದಿಕೆಗಳನ್ನು ನಿರ್ಮಿಸಲಾಗುತ್ತಿದ್ದು, ಚಂದನವನದ ಖ್ಯಾತ ಕಲಾವಿದರಾದ ಡಾಲಿ ಧನಂಜಯ್, ಧ್ರುವ ಸರ್ಜಾ, ರಚಿತಾ ರಾಮ್, ರುಕ್ಮಿಣಿ ವಸಂತ್, ಉಪೇಂದ್ರ ಹಾಗೂ ಗಾಯಕರಾದ ಸಂಜಿತ್ ಹೆಗ್ಡೆ, ಶ್ರೇಯಾ ಘೋಷಾಲ್ ಸೇರಿದಂತೆ ಹಲವು ಕಲಾವಿದರು ಪಾಲ್ಗೊಳ್ಳಲಿದ್ದಾರೆ. ಇವರೆಲ್ಲರಿಗೂ ಸೂಕ್ತ ವಸತಿ ಮತ್ತು ಶಿಷ್ಟಾಚಾರದಂತೆ ಆತಿಥ್ಯ ನೀಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸುಗಮ ಸಂಚಾರಕ್ಕೆ ಆದ್ಯತೆ, ಹೆಚ್ಚುವರಿ ಬಸ್ ಸೌಲಭ್ಯ: ನೆರೆ ಜಿಲ್ಲೆಗಳಿಂದ ಬರುವ ಪ್ರವಾಸಿಗರಿಗಾಗಿ ಕೆಎಸ್‌ಆರ್‌ಟಿಸಿ ವತಿಯಿಂದ ಹೆಚ್ಚಿನ ಬಸ್ ವ್ಯವಸ್ಥೆ ಮಾಡಲಾಗುವುದು., ರಸ್ತೆ ದುರಸ್ತಿ: ಹಂಪಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿನ 'ಬ್ಲಾಕ್‌ಸ್ಪಾಟ್'ಗಳನ್ನು ಗುರುತಿಸಿ ಕೂಡಲೇ ದುರಸ್ತಿಪಡಿಸಲು ಮತ್ತು ರಸ್ತೆ ಬದಿಯ ಜಂಗಲ್ ತೆರವುಗೊಳಿಸಲು ಸಂಬಂಧಪಟ್ಟ ಇಲಾಖೆಗೆ ನಿರ್ದೇಶನ ನೀಡಲಾಗಿದೆ. ಹಿರಿಯ ನಾಗರಿಕರಿಗೆ ಸೌಲಭ್ಯ: ಹಿರಿಯ

ನಾಗರಿಕರಿಗಾಗಿ ವಿಶೇಷವಾಗಿ 'ಪಿಕಪ್ ಮತ್ತು ಡ್ರಾಪ್' ವ್ಯವಸ್ಥೆಯನ್ನು ಪ್ರಾದೇಶಿಕ ಸಾರಿಗೆ ಇಲಾಖೆ ಮಾಡಲಿದೆ. ಮೂಲಭೂತ ಸೌಕರ್ಯ ಮತ್ತು ಸುರಕ್ಷತೆ, ಜಿಲ್ಲಾ ಪಂಚಾಯತ್ ವತಿಯಿಂದ ಸ್ವಚ್ಛತೆ, ಕುಡಿಯುವ ನೀರು ಮತ್ತು ತಾತ್ಕಾಲಿಕ ಶೌಚಾಲಯಗಳ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡುವಂತೆ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ತಿಮ್ಮಪ್ಪ ಅವರಿಗೆ ಸೂಚಿಸಲಾಯಿತು. ಜನರ ಆರೋಗ್ಯ ರಕ್ಷಣೆಗಾಗಿ ಉತ್ಸವದ ಸ್ಥಳದಲ್ಲಿ 8 ವೈದ್ಯಕೀಯ ಸ್ಟಾಲ್‌ಗಳು ಹಾಗೂ 108 ಅಂಬುಲೆನ್ಸ್ ಸದಾ ಸಿದ್ಧವಿರಲಿವೆ.

ಕೃತಕ ಜೂ ಮತ್ತು ಸ್ತಬ್ದಚಿತ್ರ: ಅರಣ್ಯ ಇಲಾಖೆ ವತಿಯಿಂದ ಕೃತಕ ಮೃಗಾಲಯ ಹಾಗೂ ವಿಜಯನಗರದ ಗತ ವೈಭವ ಸಾರುವ ಸ್ತಬ್ದ ಚಿತ್ರಗಳು ಜನರ ಕಣ್ಮನ ಸೆಳೆಯಲಿವೆ. ಕ್ರೀಡೆ ಮತ್ತು ಸಾಹಿತ್ಯ: ಸಾಹಸ ಕ್ರೀಡೆ, ಗಾಳಿಪಟ ಉತ್ಸವ, ಶಿಲ್ಪಕಲೆ, ರಂಗೋಲಿ ಸ್ಪರ್ಧೆ ಹಾಗೂ ಕವಿಗೋಷ್ಠಿ, ವಿಚಾರಗೋಷ್ಠಿಗಳ ಮೂಲಕ ಸಾಂಸ್ಕೃತಿಕ ಹಬ್ಬವನ್ನು ಆಯೋಜಿಸಲಾಗುವುದು. ಪೊಲೀಸ್ ಇಲಾಖೆಯ ವತಿಯಿಂದ ಬಿಗಿ ಬಂದೋಬಸ್ತ್ ಏರ್ಪಡಿಸಲಾಗುವುದು ಎಂದು ತಿಳಿಸಿದ ಜಿಲ್ಲಾಧಿಕಾರಿಗಳು, ಅಧಿಕಾರಿಗಳು

ಯಾವುದೇ ಗೊಂದಲಗಳಿದ್ದಲ್ಲಿ ನೇರವಾಗಿ ಜಿಲ್ಲಾಧಿಕಾರಿ ಅಥವಾ ಸಿಇಓ ಅವರನ್ನು ಸಂಪರ್ಕಿಸಿ ಪರಿಹಾರ ಕಂಡುಕೊಳ್ಳುವಂತೆ ಸಲಹೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಸಿಇಓ ನೋಂಗ್ಜಾಯ್ ಮಹಮದ್ ಅಲಿ ಅಕ್ರಂ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ, ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ, ಉಪ ಅರಣ್ಯ ಸಂರಕ್ಷಣಾಧಿಕಾರಿ ಅನುಪಮ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# 24 ವರ್ಷದ ಮಹಿಳೆ ನಾಪತ್ತೆ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ (ಹೊಸಪೇಟೆ):

ಹೊಸಪೇಟೆ ತಾಲ್ಲೂಕಿನ ಕಮಲಾಪುರ ಗ್ರಾಮದ ಅಕ್ಕಮ್ಮ.ಕೆ, 24 ವರ್ಷದ ಮಹಿಳೆ ಕಾಣೆಯಾಗಿದ್ದಾರೆ.

ಚಹರೆ: 142 ಸೆಂ.ಮೀ ಎತ್ತರ, ಕಪ್ಪು ಮೈಬಣ್ಣ, ಬಲಗೈ ಮೇಲೆ 'ಪರಶ' ಎಂಬ ಅಚ್ಚೆ ಗುರುತು ಇದೆ. ಹೋಗುವಾಗ ಪಿಂಕ್ ಬಣ್ಣದ ಸೀರೆ ಮತ್ತು ಗೋಲ್ಡ್ ಬಣ್ಣದ ಕುಪ್ಪಸ ಧರಿಸಿದ್ದಾರೆ.

ಮಾಹಿತಿ ಸಿಕ್ಕಲ್ಲಿ ಕಮಲಾಪುರ ಪೊಲೀಸ್ ಠಾಣೆ - 08394-241240 ದೂರವಾಣಿಗೆ ಸಂಪರ್ಕಿಸಲು ತಿಳಿಸಲಾಗಿದೆ.

# ಪಟ್ಟಿ ಪ್ರಕಟ: ಆಕ್ಷೇಪಣೆಗೆ ಅವಕಾಶ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ (ಹೊಸಪೇಟೆ):

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಗುತ್ತಿಗೆ ಆಧಾರಿತ ಎರಡು ನೇತ್ರ ಸಹಾಯಕರ (Ophthalmic Officer) ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳ ಕಚೇರಿಯಲ್ಲಿ ಪ್ರಕಟಿಸಲಾಗಿದೆ. ಆಕ್ಷೇಪಣೆ ಸಲ್ಲಿಸಲು ದಿನಾಂಕ: ಜನವರಿ 28 ರೊಳಗೆ ಲಿಖಿತ ದೂರು ಸಲ್ಲಿಸಲು ಅವಕಾಶವಿದೆ.

# ಮೀಸ್ಟರ್ ಕಲ್ಯಾಣ ಕರ್ನಾಟಕ ಬಾಡಿ ಬಿಲ್ಡಿಂಗ್ ಸ್ಪರ್ಧೆ

ರಾಯಚೂರು : ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ಅಂಗವಾಗಿ ಜನವರಿ 28ರ ಸಂಜೆ 4 ಗಂಟೆಯಿಂದ 6 ಗಂಟೆವರೆಗೆ ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಮೀಸ್ಟರ್ ಕಲ್ಯಾಣ ಕರ್ನಾಟಕ-2026ರ ಪುರುಷರ ದೇಹದಾರ್ಢ್ಯ ಬಾಡಿ ಬಿಲ್ಡಿಂಗ್ ಸ್ಪರ್ಧೆ ಹಮ್ಮಿಕೊಳ್ಳಲಾಗಿದ್ದು, ಆಸಕ್ತ ಬಾಡಿ ಬಿಲ್ಡರಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜನರಿಗೆ ಸಮರ್ಪಕ ಕುಡಿಯುವ ನೀರು ಪೂರೈಕೆಗೆ ಕ್ರಮ: ಹೆಚ್.ಆರ್.ಗವಿಯಪ್ಪ



• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ:

10 ಲಕ್ಷ ಲೀಟರ್ ಸಾಮರ್ಥ್ಯದ ಎರಡು ಜಲಸಂಗ್ರಹಗಾರಗಳಿಗೆ ಭೂಮಿ ಪೂಜೆ ನೆರವೇರಿಸಲಾಗಿದ್ದು ಮುಂದಿನ ದಿನಗಳಲ್ಲಿ ನಗರದ ಜನರಿಗೆ ಸಮರ್ಪಕ ಮತ್ತು ಶುದ್ಧ ಕುಡಿಯುವ ನೀರು ಪೂರೈಸುವ ನಿಟ್ಟಿನಲ್ಲಿ ಅಮೃತನಗರೋತ್ಥಾನ ಯೋಜನೆ ಸಹಕಾರಿಯಾಗಲಿದೆ ಎಂದು ಶಾಸಕರಾದ ಹೆಚ್. ಆರ್.ಗವಿಯಪ್ಪ ತಿಳಿಸಿದರು.

ಅವರು ಬುಧವಾರ ಎಂ.ಜಿ. ನಗರ ಮತ್ತು ಎಂ.ಪಿ ಪ್ರಕಾಶ್ ನಗರದಲ್ಲಿ ತಲಾ 10 ಲಕ್ಷ ಲೀಟರ್ ಸಾಮರ್ಥ್ಯದ ಎರಡು ನೀರಿನ ಟ್ಯಾಂಕ್‌ಗಳ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಒಟ್ಟು ರೂ.4.9 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಇರುವ 38 ಎಂಎಲ್‌ಡಿ (ಒಐಆ) ನೀರು ಸರಬರಾಜನ್ನು ಹೊಸ ಯೋಜನೆಯ ಮೂಲಕ 108-110 ಎಂಎಲ್‌ಡಿಗೆ ಹೆಚ್ಚಿಸಲಾಗುವುದು.

ಈ ಯೋಜನೆಯಿಂದ ಮುಂದಿನ ದಿನಗಳಲ್ಲಿ ಸುಮಾರು 7 ರಿಂದ 8 ಲಕ್ಷ ಜನರಿಗೆ ನೀರಿನ ಸೌಲಭ್ಯ ದೊರೆಯಲಿದೆ.

ಭವಿಷ್ಯದ ಯೋಜನೆ: ಜೋಳದರಾಶಿ ಗುಡ್ಡ, ದೊಣ್ಣೆಹಳ್ಳಿ ಮತ್ತು ಕಾರಿಗನೂರು ಬಳಿ ಪ್ರಮುಖ ಟ್ಯಾಂಕ್‌ಗಳ ನಿರ್ಮಾಣ ಹಾಗೂ 190 ಕೋಟಿ ರೂ. ವೆಚ್ಚದಲ್ಲಿ ಹೊಸ ಪಂಪಿಂಗ್ ಸ್ಟೇಷನ್ ಮತ್ತು ನೀರು ಸಂಸ್ಕರಣಾ ಘಟಕ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದರು.ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷ ಎನ್.ರೂಪೇಶ್, ಪೌರಾಯುಕ್ತ ಶಿವಕುಮಾರ್ ಸೇರಿದಂತೆ ಹಲವು ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

# ಸೇವಾ ಸತ್ಸಂಗ್ ಟ್ರಸ್ಟ್ ವಾರ್ಷಿಕೋತ್ಸವ ಸಾಮೂಹಿಕ ಶ್ರೀಸಾಯಿಸತ್ಯ ವ್ರತ

ಬಳ್ಳಾರಿ,: ನಗರದ ಬಸಲಜಿ ರಾವ್ ರಸ್ತೆಯಲ್ಲಿನ ಲಕ್ಷ್ಮೀದೇವಿ ಎಸ್ ಲಿಂಗಣ್ಣ ಬಲಿಜ ಭವನದಲ್ಲಿ ಇಂದು ಮತ್ತು ನಾಳೆ ನಗರದ ಶ್ರೀ ಶಿರಿಡಿ ಸಾಯಿ ಸೇವಾ ಸತ್ಸಂಗ್ ಟ್ರಸ್ಟ್ ನ 25 ನೇ ವಾರ್ಷಿಕೋತ್ಸವ ಸಮಾರಂಭ ನಡೆಯುತ್ತಿದೆ.



ಇಂದು ಬೆಳಿಗ್ಗೆಯಿಂದ ಸಾಯಿಬಾಬಾ ಪ್ರತಿಮೆ ಪ್ರತಿಷ್ಠಾಪನೆ ಮಾಡಿ, ಸಾಮೂಹಿಕ ಸಾಯಿಸತ್ಯವ್ರತ ನಡೆಯಿತು. 70 ಕ್ಕೂ ಹೆಚ್ಚು ಜನ ದಂಪತಿಗಳು ಇದರಲ್ಲಿ ಪಾಲ್ಗೊಂಡಿದ್ದರು. ಬಾಬನಿಗೆ ಕ್ಷೀರ ಅಭಿಷೇಕ, ಪುಷ್ಪ ಅಭಿಷೇಕದೊಂದಿಗೆ ನಮನ ಸಲ್ಲಿಸಲಾಯ್ತು. ನಂತರ ಪ್ರಸಾದ ವಿನಯೋಗ ನಡೆಯಿತು. ಇದೇ ವೇಳೆ 30 ಕ್ಕೂ ಹೆಚ್ಚು ಜನ ರಕ್ತದಾನ ಮಾಡಿದರು.

ಸಂಜೆ 5 ಕ್ಕೆ ಮದನಪಲ್ಲಿಯ ಪ್ರಕೃತಿ ವನ ಸಂಸ್ಥಾಪಕ ಪ್ರಕೃತಿ ಪ್ರಸಾದ್ ಅವರಿಂದ ಆರೋಗ್ಯ ಜಾಗೃತಿ ಹಮ್ಮಿಕೊಂಡಿದೆ. ಜೊತೆಗೆ ಮಹಿಳೆಯರಿಗೆ ಸಂಕ್ರಾಂತಿ ವಿಶೇಷ ತಿಳಿಸುವುದು, ಸೀರೆ ಅಲಂಕಾರ ಕಲಶ, ಆರತಿ ತಟ್ಟೆ ಅಲಂಕಾರ ಸ್ಪರ್ಧೆ ನಡೆಯಲಿದೆ.

ಎಲ್.ವಿ.ಆಸ್ಪತ್ರೆಯ ಡ.ಎಲ್.ಲಲಿತ, ಸ್ನೇಹ ಎನ್.ಬಿ. ಎಸ್ ಜಿ ಟಿ ಕಾಲೇಜಿನ ಪ್ರಾಂಶುಪಾಲರಾದ ಡಾ.ರೀನಾ ಪ್ರವೀಣ್ ಆರ್ ಪಾಲ್ಗೊಳ್ಳಲಿದ್ದಾರೆ.

ಈ ಕಾರ್ಯಕ್ರಮಗಳು ಟ್ರಸ್ಟ್ ನ ಅಧ್ಯಕ್ಷ ಆರ್.ಗೋಪಾಲಕೃಷ್ಣ, ಪದಾಧಿಕಾರಿಗಳು ಮತ್ತು ಟ್ರಸ್ಟಿಗಳಿಂದ ವ್ಯವಸ್ಥಿತವಸಗಿ ನಡೆಯುತ್ತಿವೆ.

ನಾಳೆ ಬೆಳಿಗ್ಗೆ ನೃತ್ಯ ಪ್ರದರ್ಶನ, 11 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು ಮೇಯರ್ ಪಿ.ಗಾದೆಪ್ಪ, ದಕ್ಷಿಣ ಮಧ್ಯರೈಲ್ವೆಯ ಝುಡ್ ಆರ್ ಸಿಸಿ ಸದಸ್ಯ ಮಹೇಂದ್ರ ಸಿಂಘಿ ಮೊದಲಾದವರು ಪಾಲ್ಗೊಳ್ಳಲಿದ್ದು. ಇದೇ ವೇಳೆ ಟ್ರಸ್ಟ್ ನಿಂದ ಕೃತಾಂಗಗಳ ವಿತರಣೆ, ಟೈಲರಿಂಗ್ ಮತ್ತು ಕಂಪ್ಯೂಟರ್ ತರಬೇತಿ ಪಡೆದವರಿಗೆ ಪ್ರಮಾಣ ಪತ್ರ ವಿತರಣೆ ನಡೆಯಲಿದೆ.

# ದೇವಸ್ಥಾನದ ಸರ್ವಾಂಗೀಣ ಪ್ರಗತಿಗೆ ಬದ್ಧ



• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ತಾಲೂಕಿನ ಮದರಗಾಂವ ಗ್ರಾಮದ ಐತಿಹಾಸಿಕ ಮಲ್ಲಿಕಾರ್ಜುನ ದೇವಸ್ಥಾನದ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧನಿದ್ದೇನೆ ಎಂದು ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್ ಭರವಸೆ ವ್ಯಕ್ತಪಡಿಸಿದರು.

ತಾಲೂಕಿನ ಮದರಗಾಂವ ಗ್ರಾಮದ ಹೊರ ವಲಯದ ಐತಿಹಾಸಿಕ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಆಯೋಜಿಸಿದ್ದ ಜಾತ್ರಾ ಮಹೋತ್ಸವ ಹಾಗೂ ಧರ್ಮಸಭೆ ಉದ್ದೇಶಿಸಿ ಮಾತನಾಡಿದರು.

ಮದರಗಾಂವ ಗ್ರಾಮದ ಹಾಗೂ ಮಲ್ಲಿಕಾರ್ಜುನ್ ದೇವರ ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಈ ಹಿಂದೆ ಮಾಜಿ ಸಚಿವ ರಾಜಶೇಖರ ಪಾಟೀಲ್ ಅವರು ತಮ್ಮ ಅವಧಿಯಲ್ಲಿ ಅನೇಕ ಯೋಜನೆಗಳನ್ನು ನೀಡಿದ್ದಾರೆ. ಅದರಂತೆ ಇನ್ನೂ ಹೆಚ್ಚಿನ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಗ್ರಾಮಕ್ಕೆ ಮತ್ತು ದೇವಸ್ಥಾನಕ್ಕೆ ಸರಕಾರದ ಮೇಲೆ ಒತ್ತಡ ಹಾಕುವ ಮೂಲಕ ಅನುದಾನ ತಂದು ಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಈ ಸಂಧರ್ಭದಲ್ಲಿ ಹುಡಗಿ ಹಿರೇಮಠ ಸಂಸ್ಥಾನದ ಪೀಠಾಧಿಪತಿ ವಿರೂಪಾಕ್ಷ ಶಿವಾಚಾರ್ಯರು, ರಾಜಶೇಖರ್ ಪಾಟೀಲ್, ಮಲ್ಲಿಕಾರ್ಜುನ ಮಹೇಂದ್ರಕರ್, ದೇವಸ್ಥಾನ ಸಮಿತಿಯ ಅಧ್ಯಕ್ಷ ಶಿವಕುಮಾರ ಹುಣಸಗೇರಾ ಉಪಾಧ್ಯಕ್ಷ ಬಾಬುರಾವ ನೀಲಶಟ್ಟಿ, ಪ್ರಮುಖರಾದ ಶಿವರಾಜ್ ಮೊಳಕೇರಾ, ವೀರಶೈಟ್ಟಿ ಪಾಟೀಲ್, ನಾಗಣ್ಣ ನಿರ್ಣಾ, ಶಂಕರ್ ದಾಡಗಿ, ಈಶ್ವರ್ ಚಿದ್ರಿ, ಅನಿಲಕುಮಾರ ಮಲ್ಕಾಪೂರವಾಡಿ, ಶಿವರಾಜ್ ಚೆಟ್ಟಿ, ಬಸವರಾಜ್ ಹುಣಸಗೇರಾ, ಮಲ್ಲಿಕಾರ್ಜುನ ಸೋನಾರ, ಜೈಕುಮಾರ ಸಾಗರ, ಸಚಿನ ದಾಡಗಿ ಸೇರಿ ಅನೇಕರಿದ್ದರು.

# ಹಿಂದೂ ಧರ್ಮ ರಕ್ಷಣೆ ಹಿಂದೂಗಳ ಕರ್ತವ್ಯ

• ಮಲ್ಲಮ್ಮ ನುಡಿ ವಾರ್ತೆ ಪೀಣ್ಯ ದಾಸರಹಳ್ಳಿ

ಸನಾತನ ಹಿಂದೂ ಧರ್ಮ ನಾವು ರಕ್ಷಿಸಿದರೆ ಧರ್ಮ ನಮ್ಮನ್ನೂ ರಕ್ಷಿಸುತ್ತದೆ ಎಂದು ಅಘೋರಿ ಅಖಾರ ಆಚಾರ್ಯ ಅಘೋರಿ ಗುರು ಡಾ. ಮಣಿಕಂದನ್ ಮಹಾರಾಜ ಹೇಳಿದರು.

ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದ ಆರ್‌ಎಂ ಸಿಯಾರ್ಡ್ 9ನೇ ಗೇಟ್ ಬಳಿ ಇರುವ ಪ್ರಸಿದ್ಧ ದೇವಸ್ಥಾನದಲ್ಲಿ ಒಂದಾದ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕರಾದ ಚಂದ್ರಶೇಖರ್ ಅವರು ಪೂಜಾ ಪುನಸ್ಕಾರ ಮಹಾಮಂಗಳಾರತಿ ಮತ್ತು ಪ್ರತಿ ವಾರ ಮಂಗಳವಾರದಂದು ಸಾವಿರಾರು ಜನ ಸಾರ್ವಜನಿಕರಿಗೆ ಅನ್ನ ದಾಸೋಹ ಕಾರ್ಯಕ್ರಮವನ್ನು ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನ ಅಧ್ಯಕ್ಷ ಸೇಲ್ವರಾಜು ಅವರ ನೇತೃತ್ವದಲ್ಲಿ ಆಯೋಜಿಸಲಾಗಿತ್ತು.

ಅಂತಾರಾಷ್ಟ್ರೀಯ ಹಿಂದೂ ಪರಿಷತ್ ರಾಷ್ಟ್ರೀಯ ಬಜರಂಗದಳದ ರಾಜ್ಯಾಧ್ಯಕ್ಷ ವಿ.ಆನಂದ್, ಹಿರಿಯ ಮುಖಂಡ ಮುನಿರಾಜು ಅವರ ಸಮ್ಮುಖದಲ್ಲಿ ಅಘೋರಿ ಅಖಾರ ಆಚಾರ್ಯ ಅಘೋರಿ ಗುರು ಡಾ.ಮಣಿಕಂದನ್



ಮಹಾರಾಜ ಅವರು ಅನ್ನ ದಾನಕ್ಕೆ ಚಾಲನೆ ನೀಡಿ ಅವರು ಒಂದು ಶಾಶ್ವತ ಜೀವನ ಆತ್ಮದ ಅಮರತ್ವ, ಕರ್ಮ, ಪುನರ್ಜನ್ಮ, ಧರ್ಮ (ಕರ್ತವ್ಯ), ಮೋಕ್ಷದ ಗುರಿ, ವಿಶ್ವ ಶಾಂತಿ ನೀಡುತ್ತದೆ ಎಲ್ಲಾ ಜೀವಿಗಳಲ್ಲಿ ದೈವತ್ವವನ್ನು ವೈವಿಧ್ಯತೆಯಲ್ಲಿ ಏಕತೆಯನ್ನು ಪೋಷಿಸುತ್ತದೆ ಮತ್ತು ಯೋಗ, ಧ್ಯಾನದ ಮೂಲಕ ಆತ್ಮಸಾಕ್ಷಿಯಾಗಿದೆ

ಅಘೋರಿ ಅಖಾರ ಆಚಾರ್ಯ ಅಘೋರಿ ಗುರು ಡಾ. ಮಣಿ ಕಂದನ್ ಮಹಾರಾಜ ಭಕ್ತರನ್ನು ಉದ್ದೇಶಿಸಿ ಆಶೀರ್ವಚನ ನೀಡಿದರು.

ಅಂತಾರಾಷ್ಟ್ರೀಯ ಹಿಂದೂ ಪರಿಷತ್ ರಾಷ್ಟ್ರೀಯ ಬಜರಂಗದಳದ ರಾಜ್ಯಾಧ್ಯಕ್ಷ ವಿ ಆನಂದ್ ಮಾತನಾಡಿ, ಈ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಅತಿ ಶೀಘ್ರದಲ್ಲಿ ಬಾಲರಾಮನ ವಿಗ್ರಹವನ್ನು ಸ್ಥಾಪಿಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಅಘೋರಿ ಪ್ರಮೀಳಾ, ನವಿನ್, ಕೃಷ್ಣಮೂರ್ತಿ, ವಿಶ್ವ, ಆದಿನಾರಾಯಣ, ರವಿ, ಕುಮಾರ್, ಶಿವಣ್ಣ, ಲಲಿತ್ ಬಾಯಿ, ಪ್ರಕಾಶ್, ರಾಜು, ಡಾ. ಚೌದ್ರಿ ನಾಯ್ಡು ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದ ಲಾಂಛನ ಅನಾವರಣ



**ಬೆಂಗಳೂರು:** ಬೀದರ್ ಜಿಲ್ಲೆಯಲ್ಲಿ ಮಾರ್ಚ್‌ನಲ್ಲಿ ನಡೆಯಲಿರುವ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು ಸಂಘಟಿಸುವ 40ನೇ ರಾಜ್ಯ ಸಮ್ಮೇಳನದ ಲಾಂಛನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದಲ್ಲಿ ಗುರುವಾರ ಅನಾವರಣ ಮಾಡಿದರು.

ಈ ಸಂದರ್ಭದಲ್ಲಿ ಅರಣ್ಯ ಸಚಿವ ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಮತ್ತು ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷರಾದ ಈಶ್ವರ ಬಿ ಖಂಡ್ರೆ ಅವರು ಮತ್ತು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರು ಸಮ್ಮೇಳನಕ್ಕೆ ಮುಖ್ಯಮಂತ್ರಿಗಳನ್ನು ಆಹ್ವಾನಿಸಿದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ರಾಜ್ಯ ಪತ್ರಕರ್ತರ ಸಂಘದ ಉಪಾಧ್ಯಕ್ಷ ಎಚ್.ಬಿ.ಮದನಗೌಡ, ಪ್ರಧಾನ ಕಾರ್ಯದರ್ಶಿ ಲೋಕೇಶ್, ಕಾರ್ಯದರ್ಶಿ ಸೋಮಶೇಖರ ಕೆರಗೋಡು, ಬೀದರ್ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆನಂದ್ ದೇವಪ್ಪ, ಬಾಬುವಾಲಿ, ಶಿವಕುಮಾರಸ್ವಾಮಿ, ಪೃಥ್ವಿ ಮತ್ತಿತರರು ಪಾಲ್ಗೊಂಡಿದ್ದರು

**ಅರ್ಥಪೂರ್ಣ ಸಮ್ಮೇಳನವಾಗಿಸಲು ಶ್ರಮಿಸಿ:** ಈಶ್ವರ ಖಂಡ್ರೆ ಕರೆ ವಿಕಾಸಸೌಧದ ತಮ್ಮ ಕಚೇರಿಯಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ) 40ನೇ ರಾಜ್ಯ ಸಮ್ಮೇಳನದ ಲಾಂಛನವನ್ನು ಸಚಿವ ಈಶ್ವರ ಖಂಡ್ರೆ ಅವರು ಮತ್ತೊಮ್ಮೆ ಬಿಡುಗಡೆ ಮಾಡಿ, ಬೀದರ್ ಜಿಲ್ಲಾ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ, ಸಿದ್ದೂಪಾಟೀಲ್ ಸಮ್ಮುಖದಲ್ಲಿ ರಾಜ್ಯ ಸಂಘಕ್ಕೆ ಹಸ್ತಾಂತರಿಸಿದರು. ಎರಡು ದಶಕಗಳ ಬಳಿಕ ಬೀದರ್‌ನಲ್ಲಿ ನಡೆಯುತ್ತಿರುವ ರಾಜ್ಯ ಪತ್ರಕರ್ತರ ಸಮ್ಮೇಳನವನ್ನು ಅರ್ಥಪೂರ್ಣ ಸಮ್ಮೇಳನವಾಗಿಸಲು ಶ್ರಮಿಸುವಂತೆ ಸಚಿವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ) ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು, ಪ್ರಧಾನ ಕಾರ್ಯದರ್ಶಿ ಲೋಕೇಶ್, ಕಾರ್ಯದರ್ಶಿ ಸೋಮಶೇಖರ ಕೆರಗೋಡು, ಬೀದರ್ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆನಂದ್ ದೇವಪ್ಪ, ಬಾಬುವಾಲಿ, ಶಿವಕುಮಾರಸ್ವಾಮಿ, ದೀಪಕ್ ವಾಲಿ, ಮಾಳಪ್ಪ ಅಡಸಾರೆ, ಸಿದ್ರಾಮಯ್ಯ ಸ್ವಾಮಿ, ಪೃಥ್ವಿರಾಜ್, ಬಸವರಾಜ ಪವಾರ್, ವಿಜಯಕುಮಾರ ಅಷ್ಟುರೆ ಮತ್ತಿತರರು ಪಾಲ್ಗೊಂಡಿದ್ದರು.

# ಪ್ರವಾಸೋದ್ಯಮ ಪರಿಚಯಾತ್ಮಕ ಪ್ರವಾಸಕ್ಕೆ ಚಾಲನೆ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಪ್ರವಾಸೋದ್ಯಮ ಮಂತ್ರಾಲಯ ಭಾರತ ಸರಕಾರ, ಬೆಂಗಳೂರು ಕಛೇರಿ, ಜಿಲ್ಲಾಡಳಿತ ಕೊಪ್ಪಳ ಇವರ ಸಹಯೋಗದಲ್ಲಿ ಜನವರಿ 21 ರಿಂದ 23 ರವರೆಗೆ ಮೂರು ದಿನಗಳ ಕಾಲ ಹಮ್ಮಿಕೊಳ್ಳಲಾದ "ಕೊಪ್ಪಳ ಅನ್ವೇಷಿಸಿ" (Discoverkoppal) ಶಿರ್ಷಿಕೆಯ ಕೊಪ್ಪಳ ಜಿಲ್ಲೆಯ ವಿವಿಧ ಪ್ರವಾಸಿ ತಾಣಗಳ ಬಗ್ಗೆ ಪರಿಚಯಾತ್ಮಕ ಕಾರ್ಯಕ್ರಮಕ್ಕೆ ಬುಧವಾರ ಚಾಲನೆ ನೀಡಿದರು.

ಕೊಪ್ಪಳ ಜಿಲ್ಲಾಡಳಿತ ಭವನದ ಪ್ರಾಂಗಣದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ, ಪದ್ಮಶ್ರೀ ಪುರಸ್ಕೃತರಾದ ಭೀಮವ್ವ ಶಿಳ್ಳೆಕ್ಯಾತರ್, ಕೊಪ್ಪಳ ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ, ಪ್ರವಾಸೋದ್ಯಮ ಮಂತ್ರಾಲಯ ಭಾರತ ಸರಕಾರದ ಬೆಂಗಳೂರು ಕಛೇರಿಯ ನಿರ್ದೇಶಕರಾದ ಸಂಧ್ಯಾ



ಹರಿದಾಸ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ರೋಷನ್ ಪಿಂಟೊ, ಕೇದಾರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದು, "ಕೊಪ್ಪಳವನ್ನು ಅನ್ವೇಷಿಸಿ– ಪ್ರವಾಸೋದ್ಯಮ ಪರಿಚಯಾತ್ಮಕ ಪ್ರವಾಸ" ಕಾರ್ಯಕ್ರಮದ ಚಾಲನೆಗೆ ಸಾಕ್ಷಿಯಾದರು.

ಈ ಸಂದರ್ಭದಲ್ಲಿ ಕೊಪ್ಪಳದ ಅಂಜಲಿ ಭರತನಾಟ್ಯ ಕೇಂದ್ರದ ಕಲಾವಿದರು ಭರತನಾಟ್ಯ ನೃತ್ಯ ಮಾಡಿದರು. ಪದ್ಮಶ್ರೀ ಪುರಸ್ಕೃತರಾದ ಭೀಮವ್ವ ಶಿಳ್ಳೆಕ್ಯಾತರ್ ಅವರ ತಂಡದವರು ತೊಗಲು ಗೊಂಬೆಯಾಟ ಪ್ರದರ್ಶನ ನೀಡಿದರೆ ಹೊಸಳ್ಳಿಯ ಹುಲಿಗೆಮ್ಮ ಹಂದ್ರಾಳ ಮತ್ತು ತಂಡದವರು ಗೀಗೀ ಪದಗಳನ್ನು ಹಾಡಿದರು.

# ತಹಶೀಲ್ದಾರ್ ಮಂಜುನಾಥ್‌ರವರಿಗೆ ಮನವಿ ಸಲ್ಲಿಕೆ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ತಾಲೂಕಿನ ಕೊವಿಗೆ ಹಾಡಿಯ ನಿವಾಸಿ ಆದಿವಾಸಿ ಜೇನುಕುರುಬರ ತಮ್ಮಯ್ಯ ಹಾಗು ಅವರ ಮಗ ನಾರಾಯಣ ತಹಶೀಲ್ದಾರ್ ಮಂಜುನಾಥ್ ರವರಿಗೆ ಮನವಿ ನೀಡಿ ಅವರ ಕುಟುಂಬ ಕಳೆದ 50 ವರ್ಷಗಳಿಂದ, ಕಾಡಿಂದ ಹೊರಹಕಿದಾಗಿಂದ ಕಾಡಂಚಿನ, ಲಕ್ಷ್ಮಣ ತೀರ್ಥ ನದಿ ಪಕ್ಕ ಕಂದಾಯ ಭೂಮಿ ಕೋಣನ ಹೊಸಹಳ್ಳಿ ಸ.ನ. 9 ರಲ್ಲಿ ತನ್ನ ತಂದೆ ಪುಟ್ಟ ಹಸನು ಮಾಡಿದ 4ಎಕರೆ 7ಗುಂಟೆ ಜಮೀನಿನಲ್ಲಿ ಕೃಷಿ ಮಾಡಿ ಜೀವನ ಮಾಡಿದ್ದೇವೆ. ಈಗ ಕೊಳವಿಗೆ ಊರಿನ ನಿವಾಸಿ ಚಂದ್ರಪ್ಪನ ಮಗ ಮನು ಸರ್ವೇ ಸಿಬ್ಬಂದಿ ಹಾಗು ಪೋಲಿಸ್ ಕರೆತಂದು ಈ ಭೂಮಿ ತನ್ನದೆಂದು ಹೆದರಿಸುತ್ತಿದ್ದಾನೆ. ಪೊಲೀಸ್ಗೆ ದೂರು ನೀಡಿದ್ದಾನೆ. ವಿಚಾರಣೆ ಸಂದರ್ಭದಲ್ಲಿ ತಹಸೀಲ್ದಾರ್ ರವರಿಗೆ ನೀಡಿದ ಪತ್ರದ ಪ್ರತಿಯನ್ನೇ ಪೋಲಿಸ್ಗೆ ನೀಡಿದ್ದೇವೆ. ಅಲ್ಲದೆ ಪುನಃ ಹಾಡಿ ಗ್ರಾಮ ಸಭೆ ಸದಸ್ಯರುಗಳು ಸಹಿ ಹಾಕಿ ತಮ್ಮಯ್ಯನ ಕೃಷಿ ಭೂಮಿ ಯನ್ನ ಕಂದಾಯ ಮಹಜರ್ ಮಾಡಿ



ಅದರ ಪ್ರತಿ ನೀಡಲು, ತಮ್ಮಯ್ಯನ ಭೂಮಿ ರಕ್ಷಿಸಲು ಹಾಗು ಚಂದ್ರಪ್ಪನ ಮಗ ಮನು ತೊಂದರೆ ಕೊಡದಂತೆ ರಕ್ಷಣೆಗೆ ವಿನಂತಿಸಿರುವ ಮನವಿ ಮೊನ್ನೆ ಪುನಃ ತಹಸೀಲ್ದಾರ್ ಮಂಜುನಾಥ್ ರವರಿಗೆ ಸಲ್ಲಿಸಿರುವುದಾಗಿ ತಮ್ಮಯ್ಯ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಇದೆ ಮನವಿಯನ್ನು ಪರಿಶಿಷ್ಟ ವರ್ಗಗಳ ಕಲ್ಯಾಣಾ ಧಿಕಾರಿ ಗಂಗಾಧರ್ ರವರಿಗೂ ಸಲ್ಲಿಸಿ ನೇರವು ಕೊರಿರುವುದಾಗಿ ತಮ್ಮಯ್ಯ ತಿಳಿಸಿದ್ದಾರೆ.

# ಡೈಮಂಡ್ ಕಾಲೇಜನಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ



• ಪರಶುರಾಮ್ ಕರಣಂ, ಭಾಲ್ಕಿ

ಬಡ ಕುಟುಂಬದ ಪ್ರತಿಭಾವಂತ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗಬಾರದು ಎನ್ನುವ ಸದುದ್ದೇಶದಿಂದ ರಿಯಾಯತಿ ಶಿಷ್ಯ ವೇತನ ಪ್ರವೇಶ ಪರೀಕ್ಷೆ ನಡೆಸಲಾಗುತ್ತಿದೆ ಎಂದು ಡೈಮಂಡ್ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಸ್ ಕೆ ಮಸ್ತಾನ ವಲಿ ಹೇಳಿದರು.

ಪಟ್ಟಣದ ಡೈಮಂಡ್ ಸಮೂಹ ಶಿಕ್ಷಣ ಸಂಸ್ಥೆ ಅಡಿಯಲ್ಲಿ ನಡೆಯುತ್ತಿರುವ ಬೀದರ, ಭಾಲ್ಕಿ, ಬಸವಕಲ್ಯಾಣ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ 2026–27ನೇ ಶೈಕ್ಷಣಿಕ ಸಾಲಿಗಾಗಿ ಪಿಯುಸಿ ಪ್ರಥಮ ವರ್ಷದ ವಿಜ್ಞಾನ ವಿಭಾಗಕ್ಕೆ ಪ್ರವೇಶ ಪಡೆಯಲು ನಡೆಸಿದ ರಿಯಾಯತಿ ಶಿಷ್ಯ ವೇತನ ಪ್ರವೇಶ ಪರೀಕ್ಷೆಯಲ್ಲಿ ಯಶಸ್ವಿಯಾದ ಪ್ರತಿಭಾವಂತ ಮಕ್ಕಳ ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಾವು ನಡೆಸಿದ ಪರೀಕ್ಷೆಗೆ ಜಿಲ್ಲೆಯ ಹತ್ತು ಸಾವಿರ ಮಕ್ಕಳು ಪರೀಕ್ಷೆ ಬರೆದಿದ್ದರು. ಅದರಲ್ಲಿ 50 ಮಕ್ಕಳಿಗೆ ಅಂದಾಜು ರೂ. 1.5 ಲಕ್ಷ ವೆಚ್ಚದ 2 ವರ್ಷದ ಪಿಯು ವರ್ಗಕ್ಕೆ ಉಚಿತ ಪ್ರವೇಶ ನೀಡಲಾಗುತ್ತದೆ. ಮಿಕ್ಕ ವಿದ್ಯಾರ್ಥಿಗಳು ಪಡೆದ ರ್‍ಯಾಂಕ್‌ಗಳಿಗನುಗುಣವಾಗಿ ಶುಲ್ಕ ವಿಧಿಸಲಾಗುವುದು ಎಂದು ತಿಳಿಸಿದರು.

ಡೈಮಂಡ್ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ವೈ. ಮಾಧವರಾವ ಮಾತನಾಡಿ, ಇಂದಿನ ದುಬಾರಿ ಶಿಕ್ಷಣ ವ್ಯವಸ್ಥೆಯಲ್ಲಿ ಬಡ ಕೂಲಿ ಕಾರ್ಮಿಕರ ಪ್ರತಿಭಾವಂತ ಮಕ್ಕಳಿಗೆ ನೀಟ್, ಜೆಇಇ, ಐಐಟಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲಾಗುತ್ತದೆ. ವಿದ್ಯಾರ್ಥಿ – ಪಾಲಕರು ಶಿಷ್ಯ ವೇತನ ಪ್ರವೇಶ ಪರೀಕ್ಷೆಯ ಲಾಭ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ನಿವೃತ್ತ ಪ್ರಾಚಾರ್ಯ ಅಶೋಕ ರಾಜೋಳೆ ಮತ್ತು ಪತ್ರಕರ್ತರ ಸಂಘದ ಅಧ್ಯಕ್ಷ ಜೈರಾಜ ದಾಬಶೆಟ್ಟೆ ಡೈಮಂಡ್ ಕಾಲೇಜಿನ ಸಾಧನೆ ಕುರಿತು ಮಾತನಾಡಿದರು. ವಿದ್ಯಾರ್ಥಿಗಳು ತಮ್ಮ ಅನಿಸಿಕೆ ಹಂಚಿಕೊಂಡರು.

**ಸನ್ಮಾನ:** ಇದೇ ಸಂದರ್ಭದಲ್ಲಿ ಪ್ರತಿಭಾವಂತ ಮಕ್ಕಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಅಶ್ವಿನ ಭೋಸ್ಲೆ, ಮುಖ್ಯಗುರು ಗೌಸಿಯಾ ಬೆಗಂ, ಡಾ.ನಿತೀನ ಪಾಟೀಲ್, ಡಾ.ಸಂಗಪ್ಪ ಟೋಪಾರೆ ಸೇರಿದಂತೆ ಕಾಲೇಜಿನ ಸಿಬ್ಬಂದಿ ಉಪಸ್ಥಿತರಿದ್ದರು. ಪ್ರೊ. ಕರಣಂ ನಿರೂಪಿಸಿದರು. ಪ್ರೊ.ಮೋರೆ ವಂದಿಸಿದರು.

> ಗ್ರಾಮೀಣ ಭಾಗದ ರೈತಾಪಿ ಕುಟುಂಬಕ್ಕೆ ಸೇರಿದ ಬಡ ಪ್ರತಿಭಾವಂತ ಮಕ್ಕಳು ನಮ್ಮ ಕಾಲೇಜಿನ ಶಿಷ್ಯ ವೇತನ ಪ್ರವೇಶ ಪರೀಕ್ಷೆಯ ಲಾಭ ಪಡೆದು ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳು ಸರ್ಕಾರಿ ಕೋಟಾದಡಿ ಮೆಡಿಕಲ್, ಡೆಂಟಲ್, ಇಂಜಿನಿಯರಿಂಗ್ ಕೋರ್ಸ್ಗೆ ಪ್ರವೇಶ ಪಡೆದು ಆದರ್ಶ ಜೀವನ ರೂಪಿಸಿಕೊಂಡಿದ್ದು ಹೆಮ್ಮೆಯ ವಿಷಯ. –ಕೆ. ಮಸ್ತಾನವಲಿ, ಅಧ್ಯಕ್ಷರು ಡೈಮಂಡ್ ಕಾಲೇಜು ಭಾಲ್ಕಿ

> ನಮ್ಮಂಥ ಬಡವರ ಮಕ್ಕಳಿಗೆ ಡಾಕ್ಟರ್, ಇಂಜಿನೀಯರ ಆಗುವ ಭಾಗ್ಯ ಕಲ್ಪಿಸಿದ್ದು ಡೈಮಂಡ್ ಕಾಲೇಜು. ಇಲ್ಲಿ ಮಕ್ಕಳಿಗೆ ಕಡಿಮೆ ಶುಲ್ಕದಲ್ಲಿ ಸಂಸ್ಕಾರಭರಿತ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ.
> –ಧನರಾಜ ಭೋಸ್ಲೆ, ಪಾಲಕರು

> ಡೈಮಂಡ್ ಸಮೂಹ ಶಿಕ್ಷಣ ಸಂಸ್ಥೆಯ ಕಾಲೇಜುಗಳಲ್ಲಿ ಅರಿತ–ನುರಿತ ಅನುಭವಿ ಬೋಧಕ ವರ್ಗದಿಂದ ಪಾಠ–ಪ್ರವಚನ ನಡೆಸಿ, ವಿದ್ಯಾರ್ಥಿಗಳಿಗೆ ಪಠ್ಯ–ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಲಾಗುತ್ತದೆ.
> –ವೈ.ಮಾಧವರಾವ, ಅಧ್ಯಕ್ಷರು ಡೈಮಂಡ್ ಸಮೂಹ ಶಿಕ್ಷಣ ಸಂಸ್ಥೆ ಭಾಲ್ಕಿ

# ಕುಕನೂರು ಪ.ಪಂ ಅಧ್ಯಕ್ಷ ಉಪಾಧ್ಯಕ್ಷರ ರಾಜೀನಾಮೆ




**ಕುಕನೂರು:** ಪಟ್ಟಣ ಪಂಚಾಯಿತಿ ಅಧ್ಯಕ್ಷ ಲಲಿತಮ್ಮ ರಮೇಶ್ ಯಡಿಯಾಪುರ ಹಾಗೂ ಉಪಾಧ್ಯಕ್ಷ ಪ್ರಶಾಂತ್ ಆರಬೆರಳಿನ ತಮ್ಮ ಸ್ಥಾನಗಳಿಗೆ ಗುರುವಾರ ರಾಜೀನಾಮೆಯನ್ನು ಸಲ್ಲಿಸಿರುತ್ತಾರೆ.

ಕೊಪ್ಪಳ ನಗರದ ಜಿಲ್ಲಾಡಳಿತ ಭವನದಲ್ಲಿ ಉಪ ವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ ಅವರಿಗೆ ಅಧ್ಯಕ್ಷೆ ಲಲಿತಮ್ಮ ರಮೇಶ್ ಯಡಿಯಾಪುರ ಹಾಗೂ ಉಪಾಧ್ಯಕ್ಷ ಪ್ರಶಾಂತ್ ಆರಬೆರಳಿನ ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಿದ್ದು ಕಂದಾಯ ಉಪ ವಿಭಾಗಾಧಿಕಾರಿ ಇವರಿಬ್ಬರ ರಾಜೀನಾಮೆ ಪತ್ರಗಳನ್ನು ಸ್ವೀಕಾರ ಮಾಡಿಕೊಂಡಿರುತ್ತಾರೆ.

ಕುಕನೂರು ಪಟ್ಟಣ ಪಂಚಾಯಿತಿ ಅಧಿಕಾರ ಅವಧಿಯನ್ನು ಒಪ್ಪಂದ ಮಾಡಿಕೊಂಡಿದ್ದು ಅದರಂತೆ ತಮ್ಮ ಅಧಿಕಾರಾವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಮಾತಿನಂತೆ ನಡೆದುಕೊಳ್ಳುವ ಹಿತದೃಷ್ಟಿಯಿಂದ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ರಾಜೀನಾಮೆ ಸಲ್ಲಿಸಿರುವುದಾಗಿ ಬಲ್ಲಮೂಲಗಳಿಂದ ತಿಳಿದುಬಂದಿದ್ದು ಸ್ವೀಕರಿಸಿದ ರಾಜೀನಾಮೆ ಪತ್ರಗಳು ಅಂಗೀಕಾರವಾದ ನಂತರ ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆ ಪ್ರಕ್ರಿಯೆಗಳು ಜರುಗಲಿವೆ.

# ಕನ್ನಡಿಗರ ಸ್ಥಿತಿಗತಿ ಸರ್ಕಾರ ಗಂಭೀರವಾಗಿ ಪರಿಗಣಿಸಲಿ

• ಧರ್ಮೇಂದ್ರಪೂಜಾರಿ ಬಗ್ದೂರಿ, ಹೈದರಾಬಾದ್

ನಗರದಲ್ಲಿ ಇರುವ ಕನ್ನಡಿಗರ ಅಭಿಮಾನ ತುಂಬಾ ಕಂಡಿರುವೆ. ನಾವು ನಮ್ಮ ಊರಲೆ ಇರುವ ಹಾಗೇ ಬಾಸವಾಗುತ್ತಿದೆ. ಪ್ರತಿಯೊಬ್ಬರು ಕನ್ನಡ ಭಾಷೆ ಬೆಳೆಸುವ ಉಳಿಸುವ ನಿಟ್ಟಿನಲ್ಲಿ ನೀಡುತ್ತಿರುವ ಕೊಡುಗೆ ಅಪಾರವಾಗಿದೆ. ಪ್ರತಿಯೊಬ್ಬರು ಕುಟುಂಬದಲ್ಲಿ ಕನ್ನಡ ಭಾಷೆಯನ್ನು ಮಾತಾಡುವ ಮೂಲಕ ಉಳಿಸಲು ಸಾಧ್ಯವಾಗುತ್ತದೆ ಎಂದು ನಗರದ ಟ್ರಾಫಿಕ್ ಡಿಸಿಪಿ ಕನ್ನಡಿಗರಾದ ರಾಹುಲ್ ಹೆಗಡೆ ಐಪಿಎಸ್ ಅವರು ನುಡಿದರು.

ಅವರು ಬುಧವಾರ ಸಂಜೆ ನಗರದ ರವಿಂದ್ರಭಾರತೀಯಲ್ಲಿ ಕರ್ನಾಟಕದ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡಿಗರ ಕಲ್ಯಾಣ ಅಭಿವೃದ್ಧಿ ಸಂಘ ಹೈದರಾಬಾದ ಮತ್ತು ಕನ್ನಡ ಸಾಹಿತ್ಯ ಪರಿಷತ ತೆಲಂಗಾಣ ಘಟಕವು ಜಂತಿಯಾಗಿ ಆಯೋಜಿಸಿದ ಹೊರನಾಡು ಕನ್ನಡಿಗರ ಸಮಸ್ಯೆ ಮತ್ತು ಸಾಹಿತ್ಯ ಕುರಿತು ವಿಚಾರ ಸಂಕಿರಣವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಹೊರನಾಡ ಕನ್ನಡಿಗರ ಸ್ಥಿತಿಗತಿಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು – ಕುರಿತು ತಿಳಿದುಕೊಳ್ಳುವಾಗ ಕೆಲವು ಪ್ರಶ್ನೆಗಳನ್ನು ಹಾಕಿಕೊಳ್ಳುತ್ತ ಅವುಗಳಿಗೆ ಉತ್ತರ ರೂಪದಲ್ಲಿ ಹೊರನಾಡ ಕನ್ನಡಿಗರ ಸ್ಥಿತಿಗತಿ ಏನು ಅನ್ನುವುದನ್ನು ರೂಪಿಸಬಹುದೆಂದು



ಉಸ್ಮಾನೀಯ ವಿಶ್ವವಿದ್ಯಾಲಯದ ಡೀನ್ ಹಾಗೂ ಕನ್ನಡ ವಿಭಾಗ ಮುಖ್ಯಸ್ಥರಾದ ಡಾ.ಲಿಂಗಪ್ಪ ಗೋನಾಲ ನುಡಿದರು.

**ಪ್ರಶ್ನೆಗಳು:** ಹೊರನಾಡ ಕನ್ನಡಿಗರಂದರೆ ಯಾರು?, ಗಡಿನಾಡ ಕನ್ನಡಿಗರಿಗೂ–ಹೊರನಾಡ ಕನ್ನಡಿಗರಿಗೂ ಇರುವ ಸಾಮ್ಯ–ವೈಷಮ್ಯಗಳಾವುವು?, ಹೊರನಾಡ ಕನ್ನಡಿಗರ ಸಮಸ್ಯೆಗಳಾವುವು?, ಗಡಿನಾಡ ಕನ್ನಡಿಗರ ಸಮಸ್ಯೆಗಳಾವುವು?, ಈ ಸಮಸ್ಯೆಗಳಿಗೆ ಪರಿಹಾರಗಳಿವೆಯೇ?, ಹಾಗಾದರೆ ಪರಿಹಾರಗಳಾವುವು?, ಸರ್ಕಾರ, ಸಂಸ್ಥೆಗಳು ಮಾಡಬೇಕಾದುದು ಏನು?, ಹೊರನಾಡ/ಗಡಿನಾಡ ಕನ್ನಡಿಗರು ಮಾಡಬೇಕಾದದ್ದು ಏನು?, ಇವರ ಸಮಸ್ಯೆಗಳಿಗೆ ಮೂಲ ಕಾರಣಗಳೇನು?, ಹೊರನಾಡ ಕನ್ನಡಿಗರಿಗೆ ನಿಜವಾಲೂ ಸಮಸ್ಯೆಗಳಿವೇಯೇ? ಎಂದು ಸಮಸ್ಯೆಗಳ ಬಗ್ಗೆ ಗಮನಸೆಳೆದರು.

ಹೊರನಾಡ ಕನ್ನಡಿಗರ ಸಮಸ್ಯೆಗಳನ್ನು ಬಿಡಿಸಿಕೊಳ್ಳಬೇಕಾಗುತ್ತದೆ. ನಮ್ಮ ಜೀವನವನ್ನು ಆಶಾಭಾವದೊಂದಿಗೆ ಜೀವಿಸಬೇಕಾಗಿದೆ ಎಂದು ಪಟ್ಟಿ ಮಾಡಿದರು. ಹೊರನಾಡ ಕನ್ನಡಿಗರು: ಕರ್ನಾಟಕ ರಾಜ್ಯವನ್ನು ಬಿಟ್ಟು ಭಾರತ ದೇಶದ ಅಥವಾ ಪ್ರಪಂಚದ ಯಾವುದೇ ಪ್ರದೇಶಕ್ಕೆ ವಲಸೆ ಹೋಗಿ ವಾಸವಾಗಿರುವ ಕನ್ನಡಿಗರನ್ನು ಹೊರನಾಡ ಕನ್ನಡಿಗರೆಂದು ಕರೆಯಬಹುದು, ಹಾಗಿದ್ದರೆ, ಕನ್ನಡನಾಡನ್ನು ಬಿಟ್ಟು ಪರಸ್ಥಳಕ್ಕೆ ಕನ್ನಡಿಗರು ವಲಸೆ ಹೋಗಲು ಕಾರಣಗಳೇನು? ಎಂಬ ಪ್ರಶ್ನೆ ಹಾಕೊಂಡಾಗ; ವಲಸೆ ಹೋಗಲು ಕಾರಣಗಳನ್ನು ಹೀಗೆ ಪಟ್ಟಿ ಮಾಡಬಹುದು. ಸರ್ಕಾರಿ ನೌಕರರ ವರ್ಗಾವಣೆ: (ಇದು ತತ್ಕಾಲವಾಗಿರಬಹುದು] ಉದಾ:ರಾಷ್ಟ್ರೀಕೃತ ಬ್ಯಾಂಕ್ ನೌಕರರು, ಕೇಂದ್ರ ಸರ್ಕಾರಿ ನೌಕರರು, ಮಲ್ಟಿನ್ಯಾಶನಲ್ ಕಂಪನಿಗಳ ನೌಕರರು, ಮುಂತಾದದವರು. ವರ್ಗಾವಣೆಯಿಲ್ಲದೆ ಕಡ್ಡಾಯವಾಗಿ ಅಲ್ಲೇ ಇರಲೇಬೇಕಾದ ಕೆಲವು ಹುದ್ದೆಗಳಿಗೆ ನೇಮಕವಾದ ನೌಕರರು. ಉದಾ: ಹೊರರಾಜ್ಯ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು. ವ್ಯಾಪಾರದಾರರು: ಪುಟ್ ಪಾತದಿಂದ ಹಿಡಿದು ಶೋ ರೂಂಗಳವರೆಗಿನ ವ್ಯಾಪಾರದಾರರು.

**ಕೂಲಿ ಕಾರ್ಮಿಕರು:** ವಿವಿಧ ಕ್ಷೇತ್ರಗಳಲ್ಲಿ ದುಡಿಯುವ ವರ್ಗ. ಖಾಸಗಿ ಕಂಪನಿಗಳ ನೌಕರರು. ವಿವಾಹ ಸಂಬಂಧಗಳ ಮೂಲಕ ಏರ್ಪಡುವ ವಲಸೆ: ವಿಶೇಷವಾಗಿ ಸ್ತ್ರೀಯರನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಿ ನೆಲೆಸವುಂತೆ ಮಾಡುವ ವೈವಾಹಿಕ ಸಂಬಂಧವು ಒಂದು ಕಾರಣವೆಂದು ಹೇಳಬಹುದು. ಯಾಕಂದರೆ, ಸ್ತ್ರೀ ಮದುವೆಯಾಗಿ ಕನ್ನಡ ನಾಡಿನೊಳಗೆ ಯಾವುದೇ ಪ್ರದೇಶಕ್ಕೆ ಹೋದರೆ, ಅದು ಹೊರನಾಡ ವಲಸೆ ಅನಿಸಿಕೊಳ್ಳುವುದಿಲ್ಲ. ಹೊರನಾಡಿಗೆ ಸ್ತ್ರೀ ಸೊಸೆಯಾಗಿ ಬರುವುದು ಕೂಡ ವಲಸೆಯಾಗುತ್ತದೆ. ಅವಳು ಹೊರನಾಡ ಕನ್ನಡಿಗಳಾಗುವಳು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)